ವಿಷಯಗಳನ್ನು ಆಧರಿಸಿ ಯಾವುದೇ ರೀತಿಯ ಕಾಲ್ಪನಿಕ ಕಥೆ ಕಟ್ಟಿ ಆರೋಪ ಹೊರಿಸುವುದು ಸರ್ವಥಾ ಸರಿಯಲ್ಲ.

ಸಾರ್ವಜನಿಕ ಜೀವನದೊಂದಿಗೆ ಬೆರೆತ ವ್ಯಕ್ತಿಗಳು ಅನೇಕ ಸನ್ನಿವೇಶಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಹಿಂದೆ ಸ್ವೀಕರಿಸಿರುತ್ತಾರೆ ಹಾಗೂ ಇನ್ನು ಮುಂದೆ ಸಹ ಕೆಲವು ಸಂದರ್ಭಗಳಲ್ಲಿ ಅಹ್ವಾನ ಪತ್ರಿಕೆಗಳಿಗೆ ಮನ್ನಣೆ ನೀಡಬೇಕಾಗುತ್ತದೆ. (ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಪಾಲ್ಗೊಂಡ ಸಮಯದಲ್ಲಿ ಕೆಟ್ಟ ನಡವಳಿಕೆಯನ್ನು ಹೊಂದಿರುವುದಾಗಿ ಆರೋಪಿಸಲಾಗಿರುವ ವ್ಯಕ್ತಿಗಳ ಹಾಜರಿರುವಿಕೆಯಿಂದ ಮಾತ್ರವಾಗಿ; ಅಂಥ ಸಾರ್ವಜನಿಕ ವ್ಯಕ್ತಿಗಳು, ವಿಚಿದ್ರಕಾರಿ ಹಿನ್ನೆಲೆ ಹೊಂದಿರುವರೆಂದು, ಆರೋಪಿಸಲಾಗಿರುವ ವ್ಯಕ್ತಿಗಳೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೆಂಬ, ಕೇವಲ ಕಾರಣದಿಂದಾಗಿ ಶ್ರೀ ರೋಷನ್ ಬೇಗ್‌ರವರು ಇಂತಹ ವ್ಯಕ್ತಿಯ ನಡವಳಿಕೆಗೆ ಉತ್ತೇಜನ ನೀಡಿದರೆಂದು ಆರೋಪಿಸುವುದು ಸಾಧುವಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಈ ಸದನದ ಯಾರೇ ಗೌರವಾನ್ವಿತ ಸದಸ್ಯರ ವಿರುದ್ಧ ಆರೋಪಗಳನ್ನು ಮಾಡುವಾಗ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಹಾಗೂ ಅತ್ಯಂತ ಜಾಗರೂಕತೆಯಿಂದ ಪರೀಕ್ಷೆಗೆ ಒಳಪಡಿಸಬೇಕೆಂಬುದು ನನ್ನ ಮನಃಪೂರ್ವಕ ಅಪೇಕ್ಷೆ. ಈ ರೀತಿ ಕಟ್ಟುಪಾಡುಗಳನ್ನು ಸದಸ್ಯರು ಪಾಲಿಸದಿದ್ದಲ್ಲಿ ವಿಷಯಕ್ಕೊಳಪಟ್ಟ ಸದಸ್ಯರ ಚಾರಿತ್ರ್ಯವಧೆಯನ್ನು ತಿಳಿದೂ ತಿಳಿದಂತೆ ಮಾಡಲು ಪ್ರಯತ್ನಿಸಿದಂತಾಗುತ್ತದೆಂಬುದು ವ್ಯಕ್ತವಾಗುತ್ತದೆ. ಇಂತಹ ಕ್ರಮ ಸರ್ವಥಾ ಅಪೇಕ್ಷಣೀಯವಲ್ಲ ಹಾಗೂ ಸಾಧುವಲ್ಲ.

ಶ್ರೀ ಯಡಿಯೂರಪ್ಪ : ಫೋಟೋದು ಹೇಳಿಲಿಲ್ಲ, ಫೋಟೋದು ನೆಗೆಟಿವ್ಸ್ ಕೊಟ್ಟಿಲ್ಲ ಆದ್ದರಿಂದ ಅದನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೆಗೆಟೀವ್ಸ್ ಕೊಡಬೇಕು ಫೋಟೋಸ್‌ದು. ತಾವು ದಿನಾಂಕವನ್ನು ಕೇಳಿದ್ದೀರಿ ಲಂಕೇಶ್ ಪತ್ರಿಕೆದು ಜುಲೈ 5ನೇ ತಾರೀಖು 1995. ವಾರಪತ್ರಿಕೆದು ದಿನಾಂಕ ಕಾಣುತ್ತಾ ಇಲ್ಲ, ಬೇಕಾದರೆ ಕಳುಹಿಸಿಕೊಡುತ್ತೇನೆ. ನಮ್ಮ ಅಫೀಸ್‌ನಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಶುರು ಮಾಡಬಹುದು.

ಅವಿಶ್ವಾಸ ನಿರ್ಣಯದ ಬಗ್ಗೆ ಮುಖ್ಯಮಂತ್ರಿಗಳ ಉತ್ತರ

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿನಾಂಕ 7ನೇ ತಾರೀಖು ಈ ಸಭೆಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಈ ಸರ್ಕಾರದಲ್ಲಿ ದೇವೇಗೌಡರ ನಾಯಕತ್ವದ ಈ ಸರ್ಕಾರದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ ಎನ್ನುವ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಈ ಅವಿಶ್ವಾಸ ನಿರ್ಣಯದ ಮೇಲೆ ಸುಮಾರು 13ಗಂಟೆಗಳ ಕಾಲ ಚರ್ಚೆಯಾಗಿದೆ. 13ಗಂಟೆ 45ನಿಮಿಷ, 14 ಗೌರವಾನ್ವಿತ ಸದಸ್ಯರುಗಳು ಸುಮಾರು ಈ ಸದನದಲ್ಲಿ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥದ್ದಕ್ಕೆ ನಾನು ಅಭಿನಂದಿಸುತ್ತೇನೆ. ಈ ಸರ್ಕಾರ ಡಿಸೆಂಬರ್ 11ನೇ ತಾರೀಖು ಈ ರಾಜ್ಯದ ಜನತೆಯ ಒಂದು ಅಣತಿಯ ಮೇಲೆ ಅಧಿಕಾರಕ್ಕೆ ಬಂತು. ದಿನಾಂಕ 27 ಮಾರ್ಚ್ 95 ಕೇವಲ ಮೂರು ತಿಂಗಳಲ್ಲಿ ಅವರು ಭಾಷಣ ಮಾಡಿದ್ದಾರೆ ಏನೆಂದರೆ ನಮಗೆ ಈಗಾಗಲೇ ಸಾಕಷ್ಟು ಪುರಾವೆಗಳು ಬರುತ್ತಿವೆ., ಜನರು ನಿಮ್ಮನ್ನು ನಂಬಿ ಅಧಿಕಾರ ಕೊಟ್ಟಿರತಕ್ಕಂತಹ ಸಂದರ್ಭದಲ್ಲಿ ಒಂದು ರಾಜಕೀಯ ಅಸ್ಥಿರತೆ, ವ್ಯಾಪಕವಾಗಿ ಭ್ರಷ್ಟಚಾರ, ಆರ್ಥಿಕ ದಿವಾಳಿತನದಿಂದ ಜನ ಕಂಗಾಲಾಗಿದ್ದಾರೆ ಉಸಿರು ಕಟ್ಟುವಂತಹ ಪರಿಸ್ಥಿತಿ

ಇದೆ ಎಂದು ಜನತೆ ಈ ಸರ್ಕಾರದ ಮೇಲೆ ಇಟ್ಟುರುವ ನಂಬಿಕೆಯನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿ ನಾನು ಏನು ಸಲಹೆಗಳನ್ನು ಕೊಟ್ಟಿದ್ದೇನೆ ಅವುಗಳನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳುತ್ತಾ ಹುಬ್ಬಳ್ಳಿಯಲ್ಲಿ ಏನಾಗಿದೆ ಹಾಗೆಯೇ ಹೇಳಿಕೊಂಡು ಹೋಗಿದ್ದಾರೆ. ಅಂದರೆ 90 ದಿವಸದಲ್ಲಿಯೇ ನಮ್ಮ ವ್ಯಾಪಕ ಭ್ರಷ್ಟಚಾರ ಈ ರಾಜ್ಯದಲ್ಲಿ ಪ್ರಾರಂಭವಾಯಿತು.

ಅಧಿಕಾರಕ್ಕೆ ಬಂದ 90 ದಿವಸದಲ್ಲಿ ನಮ್ಮ ವ್ಯಾಪಕ ಭ್ರಷ್ಟಚಾರ ನಮಗೆ ಒಟ್ಟು ಕೊಟ್ಟು ಕಳುಹಿಸಿದಂತಹ ಮಹಾಜನತೆ ಉಸಿರುಕಟ್ಟಿವಂತಹ ಪರಿಸ್ಥಿತಿ, ಆರ್ಥಿಕ ದಿವಾಳಿತನ ನಾವು 90 ದಿವಸದಲ್ಲಿಯೇ ಈ ರಾಜ್ಯದಲ್ಲಿ ಆರ್ಥಿಕ ದಿವಾಳಿತನಕ್ಕೆ ಇಡೀ ರಾಜ್ಯವನ್ನು ಕೊಂಡೊಯ್ಯುದಿದ್ದೇವೆ. 7ನೇ ತಾರೀಖು ಬೆಳಿಗ್ಗೆ ಅವರು ಮಂಡನೆ ಮೇಲೆ ಭಾಷಣ ಮಾಡುವಾಗ ಸರ್ಕಾರದ ಖಜಾನೆ ಲೂಟಿ ಹಗಲುದರೋಡೆ ಎಂದು ಹೇಳಿದ್ದಾರೆ. ತುಂಬಾ ಸಂತೋಷ. ಅವರು ಹೇಳಿದ್ದುದು ಪತ್ರಿಕೆಗಳಲ್ಲಿ ಪ್ರಚಾರ. ಅಂದರೆ ನಾನು ಹೇಳಿದ್ದುದು ಎಷ್ಟರ ಮಟ್ಟಿಗೆ ಬರುತ್ತದೆಯೋ ಗೊತ್ತಿಲ್ಲ ಏಕೆಂದರೆ ಪರಿಸ್ಥಿತಿ ಹಾಗೆಯೇ ಇದೆ ಈ ದೇಶದಲ್ಲಿ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಕೆಲವೊಂದು ಸನ್ನಿವೇಶ ಸಂದರ್ಭದಲ್ಲಿ ಒಂದೊಂದು ರೀತಿಯ ರಾಜಕೀಯ ವಿಚಾರವನ್ನು ಎರಡು ಪತ್ರಿಕೆಗಳಲ್ಲಿ ಓದಿದ್ದೇವೆ ಅದನ್ನು ಕೂಡ ಮಾಡಲಿಕ್ಕೆ ಹೋಗುವುದಿಲ್ಲ.

ಈ ಎಲ್ಲಾ ವಿಷಯಗಳ ಬಗ್ಗೆ ನಾನು ಸ್ವಲ್ಪ ದೀರ್ಘವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಮೊದರು ಈ ಸರ್ಕಾರ ಲೂಟಿ ಮಾಡಿರತಕ್ಕಂತಹದ್ದು ಹಗಲುದರೋಡೆ ಮಾಡಿರತಕ್ಕಂತಹದ್ದು, ವ್ಯಾಪಕ ಭ್ರಷ್ಟಚಾರ ಈ ರಾಜ್ಯದ ಬೊಕ್ಕಸಕ್ಕೆ ದಿವಾಳಿತನವನ್ನು ತಂದಿರತಕ್ಕಂತದ್ದು ಜನ ಉಸಿರು ಕಟ್ಟಿರತಕ್ಕಂತಹ ಸನ್ನಿವೇಶಕ್ಕೆ ನಾವು ಈ ರಾಜ್ಯವನ್ನು ಕೊಂಡೊಯ್ದಿರತಕ್ಕಂತದ್ದು 95 ರಿಂದಲೇ ಪ್ರಾರಂಭವಾಯಿತು. ಈಗ 240 ದಿವಸಕ್ಕೆ ಬಂದಿದ್ದೇವೆ. ಮೊದಲು ಅವುಗಳ ಬಗ್ಗೆಯೇ ವಿಚಾರ ಮಾಡುತ್ತೇನೆ. ರಾಜಕೀಯ ಆಮೇಲೆ ಹೇಳುತ್ತಾ ಹೋಗುತ್ತೇನೆ. ನೀರಾವರಿ ಒಂದು ಪ್ರಮುಖವಾದ ವಿಷಯ ಅದರ ಬಗ್ಗೆ ಬರುತ್ತೇನೆ. ಈ ಸರ್ಕಾರ ಬಂದ ಮೇಲೆ ಸಿಂಗಪುರ, ಡಾವೋಸ್ ಈ ಕಡೆ ಎಲ್ಲಾ ನಾವು ಹೋಗಿದ್ದೇವೆ. ರೈತರ ಕಡೆ ನಮಗೆ ಏನು ಗಮನ ಇಲ್ಲ, ನೀರಾವರಿ ಬಗ್ಗೆ ಗಮನವಿಲ್ಲ ಎಂದು ಹೇಳಿದ್ದಾರೆ. 1993-94ರಲ್ಲಿ 240 ಕೋಟಿ ರೂ.ಗಳನ್ನು ಖರ್ಚುಮಾಡಿದ್ದೇವೆ. 1994-95ರಲ್ಲಿ 251ಕೋಟಿ ಖರ್ಚಾಗಿದೆ. ನಾವು ಈ ಮೂರು ತಿಂಗಳಿನಲ್ಲಿ, ಹಿಂದಿದ್ದನ್ನು ನಾನು ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಈ ಮೂರು ತಿಂಗಳಿನಲ್ಲಿ ಏಪ್ರಿಲ್ 95ರಲ್ಲಿ ನಾವು ಕಾರ್ಯಕ್ರಮದಲ್ಲಿ 27ಕೋಟಿ ಖರ್ಚು ಮಾಡಬೇಕೆಂದು 15 ಕೋಟಿ 21ಲಕ್ಷ ರೂ.ಗಳನ್ನು ಖರ್ಚುಮಾಡಿದ್ದೇವೆ. ಮೇ 95ರಲ್ಲಿ ಅಂದರೆ Monthly ಅದನ್ನು Programme actual Expenditure 28 ಕೋಟಿ 99ಲಕ್ಷ ಖರ್ಚು ಮಾಡಬೇಕಾಗಿತ್ತು. ನಾವು ಮೇ 95ರಲ್ಲಿ ಹೇಳಿರತಕ್ಕಂಥದ್ದು ಪ್ರೋಗ್ರೇಸ್ ಮಾಡಿರತಕ್ಕಂಥದ್ದು 32 ಕೋಟಿ. ಜೂನ್‌ನಲ್ಲಿ 36 ಕೋಟಿ 22ಲಕ್ಷ ಖರ್ಚು ಮಾಡಬೇಕಾಗಿತ್ತು ನಾವು ಖರ್ಚು ಮಾಡಿರತಕ್ಕಂಥದ್ದು 28 ಕೋಟಿ 48ಲಕ್ಷ ಒಟ್ಟು 92 ಕೋಟಿ 50 ಲಕ್ಷ. ಖರ್ಚು ಮಾಡಬೇಕಾಗಿದ್ದು 75 ಕೋಟಿ 74ಲಕ್ಷ ರೂ.ಗಳು. ಯು.ಕೆ.ಪಿ.ಗೆ ಖರ್ಚು ಮಾಡಿದ್ದೇವೆ. ಇದು ಜೂನ್‌ನಲ್ಲಿ 3 ತಿಂಗಳನಲ್ಲಿ ಯು.ಕೆ.ಪಿ.ಯ ಪೂರ್ಣ ನೀರನ್ನು ಬಳಕೆ ಮಾಡಿಕೊಳ್ಳಲಿಕ್ಕೆ ಆಮೇಲೆ ಇನ್ನೊಂದು ಹೇಳುತ್ತೇನೆ, ಒಂದೊಂದು ಚುಕ್ಕಾಸೂ ಪೆಂಡಿಂಗ್ ಬಿಲ್ಸ್ ಇಲ್ಲ, ಎಲ್ಲವನ್ನೂ ಪೇಮೆಂಟ್ ಮಾಡಿದ್ದೇವೆ.

ಯಾವುದನ್ನು ಎಲ್ಲಾ ನಿಲ್ಲಿಸಿಲ್ಲ, ಯು.ಕೆ.ಪಿ.ಗೆ ಮಾತ್ರ ಎನ್ನುವ ಮಾತನ್ನು ಸಭೆಗೆ ಖಂಡತುಂಡವಾಗಿ ಹೇಳಬೇಕಾಗುತ್ತದೆ.

ಕಾರಣ ಇಷ್ಟೆ ಯು.ಕೆ.ಪಿ.ಯಲ್ಲಿ ಕರ್ನಾಟಕ ಯಾವುದೇ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ನಿಂದ ಕೆಲಸವನ್ನು ತೆಗೆದುಕೊಂಡಿಲ್ಲ ಎಂಬ ಅರೋಪವಿಲ್ಲ. ಡಿಪಾರ್ಟ್‌ಮೆಂಟಲ್ ವರ್ಕ್ಸ್‌ನ ಹೆಸರಿನಲ್ಲಿ ಯಾರೋ ಕಂಟ್ರಾಕ್ಟರ್‌ಗಳಿಗೆ ಮೇಲೆ ಅಜ್ಜೆ ಕೊಟ್ಟು ಕೆಲಸ ಮಾಡಿದ್ದುದು ಇಲ್ಲ. ಆದ್ದರಿಂದ ಯು.ಕೆ.ಪಿ.ಗೆ ಕಟ್ಟು ನಿಟ್ಟಾಗಿ ಹೇಳಿದ್ದೇವೆ ರಾಜ್ಯಸರ್ಕಾರದಲ್ಲಿ ಏನೇ ತೊಂದರೆ ಇದ್ದರೂ ನಾವು ಹಣ ಬಿಡುಗಡೆ ಮಾಡುತ್ತೇವೆ., ನೀರು ಕೆಲಸ ಮಾಡಿ ಎಂದು ಹೇಳಿದ್ದೇವೆ. ಈಗ ಏನು ಮೂರು ತಿಂಗಳಿನಲ್ಲಿ ಏನು ನಮ್ಮ ಪ್ರೋಗ್ರಾಂ ಇದ್ದು ಏನು ಹಣ ಖರ್ಚು ಮಾಡಿದ್ದೇವೆಂದು ಹೇಳಿದ್ದೇನೆ. ಇನ್ನು 10 ಸಾವಿರ ಕೋಟಿ ಬೇಕು ನಿಜ. ಸನ್ಮಾನ್ಯ ವಿರೋದ ಪಕ್ಷದ ನಾಯಕರು ಹೇಳಿದ್ದಾರೆ, ಹಿರಿಯ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ ಇಂತಹ ಸನ್ನಿವೇಶಕ್ಕೆ ಬಹುಶಃ ಈಗ ದೇವೇಗೌಡರು ಒಬ್ಬರೇ ಕಾರಣವೋ ಇದನ್ನು ಜನ ತೀರ್ಮಾನ ಮಾಡುತ್ತಾರೆ. ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ.

ಕೃಷ್ಣ ಜಲ ನಿಗಮದ ನಿರ್ಮಾಪಕರು ಶ್ರೀಮಾನ್ ವೀರಪ್ಪ ಮೊಯಿಲಿಯವರು. ಅದರ ಬಗ್ಗೆ ನನ್ನ ತಕರಾರು ಇಲ್ಲ. ಈಗ ಆ ಒಂದು ನಿಗಮ ಮಾಡದ ಮೇಲೆ ಕಾನೂನು ಚೌಕಟ್ಟಿನಲ್ಲಿ ಕೆಲವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ಈ ವರ್ಷಕ್ಕೆ 800 ಕೋಟಿ ರೂಪಾಯಿ ಹಣವನ್ನು ಸಾರ್ವಜನಿಕವಾಗಿ ಎತ್ತಬೇಕೆಂದು ಯೋಜನೆಯಿಂದ ಬರತಕ್ಕದ್ದು. ಸೆಕೆಂಡ್ ಫೇಸ್‌ಗೆ ಹಣವನ್ನು ಪೂರೈಸಿಕೊಂಡು ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕು. ಅದರಲ್ಲಿ ಕೆಲವು ಕಾನೂನು ತೊಡಕುಗಳು ಇವೆ. ಇದರಲ್ಲಿ ಯಾರೂ ಜನತೆಗೆ ಮೋಸ ಮಾಡಿ ಅಧಿಕಾರ ನಡೆಸಬೇಕಾದ ಅವಶ್ಯಕತೆ ಇಲ್ಲ. ನಿಗಮದ ವ್ಯಾಪ್ತಿಯಲ್ಲಿ ಕೆಲವು ನಿರ್ಣಯಗಳನ್ನು ಮಾಡಿದ್ದೇವೆ. ಇವತ್ತು ಇದಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಏಕಕಾಲದಲ್ಲಿ ಖರ್ಚು ಮಾಡಲಿಕ್ಕೆ ನಾನು ಹೋಗಿ ಕುಳಿತು ಎರಡು ಸಾರಿ ರೆವ್ಯೂ ಮಾಡಿದ್ದೇನೆ. ಒಂದೇ ಸಾರಿ ಹಣ ತೆಗೆದುಕೊಳ್ಳುವುದು ಸರಿಯೇ ಅಥವಾ ಎರಡು ಮೂರು ಕಂತುಗಳಲ್ಲಿ ತೆಗೆದುಕೊಳ್ಳುವುದು. ಸರಿಯೇ ಎಂದು ವಿಚಾರ ಮಾಡಬೇಕು. ಅದೂ ಕೂಡ ಸಾಲ ತೆಗೆದುಕೊಳ್ಳುವುದು ಅಧಿಕಾರಿಗಳು ನಾವು ಎಲ್ಲಾ ಕುಳಿತು ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬಂದೆವು. ಒಂದೇ ಸಾರಿ ಹಣ ಖರ್ಚು ಮಾಡುವುದು ಸರಿಯಲ್ಲವೆಂದೂ ಅದನ್ನು ಬ್ಯಾಂಕಿನಲ್ಲಿ ಹಾಕಿದರೆ 13 ಪರ್ಸೆಂಟ್ ಬಡ್ಡಿ ಬರಹುದು. ಅದಕ್ಕಿಂತ ಹೆಚ್ಚು ನಾವು ಡಿಬೆಂಚರ್‌ಗೆ ಆಕರ್ಷಣೆ ಮಾಡಿದರೆ ಬಡ್ಡಿ ಹೆಚ್ಚು ಕೊಡಬೇಕಾಗುತ್ತದೆಂದು ಮೊದಲನೇ 400 ಕೋಟಿ ರೂಪಾಯಿಗಳನ್ನು ಜನತೆಯಿಂದ ವಸೂಲ್ಮಾಡುವುದು ಎಂದು ಹಿರಿಯ ಮುಂಖಂಡರಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಭೇಟಿ ಮಾಡುವುದಕ್ಕೆ ಹೋದಾಗ ರೈತರಿಂದ ಸ್ವಲ್ಪ ಭಾಗ ಡಿಬೆಂಚರ್ ಸಂಗ್ರಹ ಮಾಡಿ. ಬರೀ ಹಣಕಾಸು ಸಂಸ್ಥೆಗಳಿಂದ ಮಾಡುವುದಕ್ಕೆ ಹೋಗಬೇಡಿ. ನನ್ನಲ್ಲಿ 12 ಸಾವಿರ ರೂಪಾಯಿ ಇದೆ. ನಾನು ಕೂಡ ಹಣ ತೊಡಗಿಸುತ್ತೇನೆ ಎಂದರು. ಪುನಃ ಚರ್ಚೆ ಮಾಡಿ 150 ಕೋಟಿ ರೂಪಾಯಿಗಳನ್ನು ಖಾಸಗಿ ರೈತ ಬಾಂಧವರಿಂದ ಎನ್ನುವುದಕ್ಕೆ 28-8-95ಕ್ಕೆ ಕೊನೆಯ ದಿನ ಗೊತ್ತು ಮಾಡಿದ್ದೇವೆ 250 ಕೋಟಿಗೆ ಅಕ್ಟೋಬರ್ 1995ನ್ನು ಕೊನೆಯ ದಿನಾಂಕ ಮಾಡಿದ್ದೇವೆ.

ಅಲ್ಲಿಗೆ 400ಕೋಟಿ ರೂಪಾಯಿ ಅಕ್ಟೋಬರ್ 1995ರಲ್ಲಿ ನಾವು ಸಾರ್ವಜನಿಕರಲ್ಲಿ ಡಿಬೆಂಚರ್ ರೈಸ್ ಮಾಡಬೇಕು. ಫೆಬ್ರವರಿಯಲ್ಲಿ 400 ಕೋಟಿ ರೂಪಾಯಿ ಬೇಕು. ಮಾರ್ಚ್‌ನಲ್ಲಿ ಪೇಮೆಂಟ್ಸ್ ಬರುತ್ತದೆ. ಆದುದರಿಂದ ಬಡ್ಡಿ ಕೊಡತಕ್ಕದ್ದರ ಬಗ್ಗೆ

ಮುನ್ನೆಚ್ಚರಿಕೆ ವಹಿಸಿಕೊಳ್ಳಬೇಕು. ಇದು ನಮ್ಮ ಅಧಿಕಾರಿಗಳು ಕೊಟ್ಟ ಸಲಹೆ. ಇದಕ್ಕೆ ನಮ್ಮ ಪ್ಲಾನ್ ಆಫ್ ಆಕ್ಷನ್ ಕೂಡ ಮಾಡಿದ್ದೇವೆ. ಹೇಗೆ ಖರ್ಚು ಮಾಡಬೇಕು. ಅದಕ್ಕೆ ಅಧಿಕಾರಗಳನ್ನು ಎಷ್ಟು ನಾವು ನೇಮಕಾತಿ ಮಾಡಿಕೊಳ್ಳಬೇಕು. ಕೆಲವು ಡಿವಿಜನ್‌ಗಳಲ್ಲಿ ಕೆಲಸ ಏನು ಅಲ್ಲಿಗೆ ಅವರನ್ನು ಷಿಫ್ಟ್ ಮಾಡತಕ್ಕದ್ದರ ಬಗ್ಗೆ ಎಲ್ಲಾ ಅಧಿಕಾರಿಗಳು ಕುಳಿತು ಒಂದು ತೀರ್ಮಾನಕ್ಕೆ ಬಂದೆವು. ಅಧಿಕಾರಿಗಳು ಬಂದ ತೀರ್ಮಾನದ ಪ್ರಕಾರ ನಾವು ಖರ್ಚುಮಾಡತಕ್ಕದ್ದರ ಬಗ್ಗೆ ನಿರ್ಮಾಣ ಏನು ತೆಗೆದುಕೊಂಡೆವು ಎಂದರೆ ಕೆನಾಲ್ ಜೋನ್ ನಂ. 1ಕ್ಕೆ 90 ಕೋಟಿ ರೂಪಾಯಿ ಕೆನಾಲ್ ಜೋನ್ಸ್ ನಂ. 2ಕ್ಕೆ 230 ಕೋಟಿ ರೂಪಾಯಿ, ಬ್ಯಾನ್ಡ್ ಜೋನ್‌ನಲ್ಲಿ 90 ಕೋಟಿ ರೂಪಾಯಿ, ಬಾಗಲಕೋಟೆ ಟೌನ್ ಡೆವಲ್‌ಪ್‌ಮೆಂಟ್ ಅಥಾರಿಟಿಗೆ 56 ಕೋಟಿ ರೂಪಾಯಿ, ರೀಹ್ಯಾಬಿಲಿಟೇಷನ್ ಅಂಡ್ ರೀಸೆಟಲ್‌ಮೆಂಟ್‌ಗ್ಗೆಬ್ 250 ಕೋಟಿ ರೂಪಾಯಿ ಖರ್ಚು ಮಾಡ ತಕ್ಕದ್ದು ಬಾಗಲಕೋಟೆಯಲ್ಲಿ ಎರಡೂ ಸೇರಿಕೊಂಡರೆ ಸ್ವಲ್ಪ ಹೆಚ್ಚು ಕಡಿಮೆ 276 ಕೋಟಿ ರೂಪಾಯಿ ಆಗುತ್ತದೆ. ಇದಕ್ಕೆ ಪೇಮೆಂಟ್ ಮಾಡುವುದು ಅಷ್ಟೆ. ಏಕಂದರೆ ಕಾಂಪನ್‌ಸೇಷನ್ ಕೊಡುವುದು. ಅಲ್ಲ ಕೋರ್ಟಿಗೆ ಹೋಗಿದ್ದಾರೆ. ಆಫೀಸರ್ ಅಟ್ಯಾಚ್ ಮಾಡಿಸುತ್ತಿದ್ದಾರೆ. ಅದು ನಡೆದುಕೊಂಡು ಬಂದಿದೆ. ಏಕೆಂದರೆ ಅನ್ನು ಮುಂದೆ ಹೇಳುತ್ತೇನೆ. ಓ ಅಂಡ್ ಎಂ. ಎನಿದೆ ಆಪರೇಷನ್ ಅಂಡ್ ಮೆಯಿಂಟೆನೆನ್ಸ್ 37 ಕೋಟಿ ಇವಾಲ್ವ್ 2 ಕೋಟಿ, ಇಂಟರೆಸ್ಟ್ ಅಂಡ್ ಕ್ಯಾರಿ ಓವರ್ 112 ಕೋಟಿ, ಲ್ಯಾಂಡ್ ಅಕ್ವಿಸಿಷನ್ 60 ಕೋಟಿ, ಕಾಡಾ 5 ಕೋಟಿ. ಒಟ್ಟು ನಮಗೆ ಬರುವ 200 ಕೋಟಿ ಮತ್ತು ವರ್ಲ್ಡ್ ಬ್ಯಾಂಕಿನದು ಸೇರಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ರೀತಿ ಈ ವರ್ಷ ಖರ್ಚು ಮಾಡಲಿಕ್ಕೆ ನಿರ್ಣಯ ಮಾಡಿದ್ದೇವೆ. ಅದಕ್ಕೆ ಯಾವ ಯಾವ ಡಿವಿಜನ್‌ಗಳನ್ನು ಯಾವ ಯಾವ ಭಾಗಕ್ಕೆ ಷಿಫ್ಟ್ ಮಾಡಬೇಕು ಎಷ್ಟು ಸಿಬ್ಬಂದಿ ಬೇಕಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ.

ಅಲ್ಲಿ ಕೆಲವು ಡಿವಿಜನ್‌ಗಳಲ್ಲಿ ಕೆಲಸ ಇದೆ. ಹಿಂದೆ ಕೆಲಸ ಮಾಡಿದ ಕೆಲವು ಡಿವಿಜನ್‌ಗಳಲ್ಲಿ ಕೆಲಸ ಇಲ್ಲ, ಅಂಥ ಡಿವಿಜನ್‌ಗಳನ್ನು ಅಲ್ಲಿಗೆ ಷಿಫ್ಟ್ ಮಾಡಬೇಕೆಂದು ಅಧಿಕಾರಿಗಳ ಮಟ್ಟದಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ಅದು ಅಷ್ಟೇ ಇಲ್ಲ, ಲ್ಯಾಂಡ್ ಆಕ್ವಿಸಿಷನ್‌ನಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕೆಂಬುದಕ್ಕೆ ಒಬ್ಬ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ಮಾಡಿ ಆಯಾಯ ಭಾಗದ ಶಾಸಕರನ್ನು ಒಳಗೂಡಿಸಿ ಆಮೂಲಕ ಲ್ಯಾಂಡ್‌ಪರ್ಚೇಸ್ ಮಾಡುವುದಕ್ಕೆ ಸಾಧ್ಯ ಎಂದು ಮಾಡಿದ್ದೇವೆ. ಈಗ ಏನಾಗಿದೆ ಎಂದರೆ ಜಿಪಿಎ. ಬರೆಸಿಕೊಳ್ಳುವುದಕ್ಕೆ ಮಧ್ಯವರ್ತಿ ಜನ ಕೋರ್ಟುಗಳಲ್ಲಿ ಹೋಗಿ ಸಾಕಷ್ಟು ಹಣಗಳಿಸಿಕೊಳ್ಳತಕ್ಕ ಒಂದು ದಂಡೆ ನಡೆಯುತ್ತಿದೆ. ಈ ಪರಿಸ್ಥಿತಿ ಎಲ್ಲವನ್ನೂ ಯೋಚನೆ ಮಾಡಿ ನಮ್ಮ ಅಧಿಕಾರಿಗಳ ಜೊತೆ ಒಂದು ನಿರ್ಣಯಕ್ಕೆ ಬಂದಿದ್ದೇನೆ. ಲ್ಯಾಂಡ್ ಅಕ್ವಿಸೀಷನ್ ಒಂದೇ ಹೇಳುತ್ತೇನೆ, 15 ಮೀಟರ್‌ಗೇಜ್ ಇಡಬೇಕಾದರೆ ಸುಮಾರು 136 ಹಳ್ಳಿಗಳು ಮುಳುಗಡೆಯಾಗುತ್ತದೆ. ನಾನು 1997ರೊಳಗೆ 15 ಮೀಟರ್‌ಗೇಜ್ ಇಡುತ್ತೇನೆಂದು ಸದನದಲ್ಲಿ ಹೇಳಿದ್ದೆ. ಆದರಿಂದ 136 ಹಳ್ಳಿಗಳು ಮುಳುಗಡೆಯಾಗುತ್ತವೆ. ಅವರು ಸುಮಾರು 116 ಕೋಟಿ ರೂಪಾಯಿ ಬೇಕಾಗುತ್ತದೆಂದು ರಫ್ ಆಗಿ ಎಸ್ಟಿಮೇಟ್ ಮಾಡಿದ್ದಾರೆ. ಆರ್ ಅಂಡ್ ಆರ್ ಇದಕ್ಕೆ ಬೇಕಾಗುತ್ತದೆ. ಅದುದರಿಂದ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಕೊಂಡು ಹೋಗುತ್ತೇನೆ. ಅನುಮಾನ ವ್ಯಕ್ತಪಡಿಸತಕ್ಕದ್ದು ಸ್ವಾಭಾವಿಕ. ಒಂದು ಕಡೆ ಪ್ರಯತ್ನ ಮಾಡುತ್ತೇನೆಂದು ಹೇಳಿದಾಗ ಮತ್ತೊಂದು ಕಡೆ ಅನುಮಾನ ವ್ಯಕ್ತಪಡಿಸಿದರೆ ಅದರ ಬಗ್ಗೆ ನಾನು ದೂರು ಕೊಡುವುದಕ್ಕೆ ಹೋಗುವುದಿಲ್ಲ, ನಾನು ಹೇಳಿದೆ 276 ಕೋಟಿ ಬರೀ ಲ್ಯಾಂಡ್ ಅಕ್ವಿಸಿಷನ್ ಇದೆ. ಅವಾರ್ಡ್ ಪಾಸ ಆಗುತ್ತದೆ. ಅಂದಾಗ ಅದರಿಂದ ಹಣ ಕೊಡತಕ್ಕದ್ದಕ್ಕೆ ಖರ್ಚು ಮಾಡತಕ್ಕದ್ದಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಇದೆ.

ನಾನು ಏನು ಹೇಳಿದ್ದೇನೆಂದರೆ 3 ಹಂತಗಳಲ್ಲಿ ಅಂದರೆ ಫೆಬ್ರವರಿಯಿಂದ ನಾವು ಹಣ ಎತ್ತುತ್ತೇವೆ, ಫೆಬ್ರವರಿ-ಮಾರ್ಚ್‌ನಲ್ಲಿ ಕೆಲಸ ಸಾಕಷ್ಟು ವೇಗದಲ್ಲಿ ನಡೆಯುತ್ತದೆ, ಕೊನೆಯ ಹಂತದಲ್ಲಿ ನಾವು ಹೆಚ್ಚು ಬಟವಾಡೆ ಮಾಡತಕ್ಕದ್ದು ಎಲ್ಲರಿಗೂ ಗೊತ್ತಿದೆ. ಈ ದಿಕ್ಕಿನಲ್ಲಿ ನಮ್ಮ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದೇವೆ. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏಕಂದರೆ ಬಹಳ ಉದ್ದವಾಗಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ಮತ್ತೊಂದು ವಿಷಯ ಎತ್ತಿದ್ದಾರೆ. ಮಹಾನದಿಯ ನೀರು ತೆಗೆದುಕೊಳ್ಳುವ ಬಗ್ಗೆ ವಿಷಯವನ್ನು ಕೋರ್ಟಿನವರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಕೂಡ ಸೂಕ್ಷ್ಮವಾಗಿ ಹೇಳುತ್ತೇನೆ., ಏಕಂದರೆ ಆ ಸದನದಲ್ಲಿ ವಿರೋಧ ಪಕ್ಷದ ಮುಖಂಡರು ಅಧರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಇದರಲ್ಲ ಒಂದು ರೀತಿ ಏನೋ ರಾಜ್ಯಕ್ಕೆ ಅನಾಹುತಾವಾಗುತ್ತದೆ. ಅಂದಾಗ ನಾನು ಅದರ ಬಗ್ಗೆ ಯಾವಾಗ ಏನಾಯಿತೆಂಬುದರ ಬಗ್ಗೆ ಹೇಳಬೇಕಾದರೆ 1994ರ ಮೇ ತಿಂಗಳಲ್ಲಿ ಮೀಟಿಂಗ್ ನಡೆದಿದೆ ಅಲ್ಲಿ ಡಬ್ಲು.ಆರ್.ಡಿ ಚೀಫ್ ಇಂಜಿನಿಯರ್ ಹೋದವರು ಸರ್ವೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ನವೆಂಬರ್‌ನಲ್ಲಿ ನಮ್ಮ ಡಬ್ಲು.ಆರ್.ಡಿ. ಯಿಂದ ಒಂದು ಪತ್ರ ಬರೆದಿದ್ದಾರೆ ಅವರು ಸರ್ಕಾರಕ್ಕೆ ನೇರವಾಗಿ ಬರೆದಿದ್ದರೆ ನಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ಬರುತ್ತಿತ್ತು. ಡಬ್ಲು.ಆರ್.ಡಿ ಚೀಫ್ ಇಂಜಿನಿಯರ್ ಬರೆದುದಕ್ಕೆ ಉತ್ತರ ಹೋಗಿಲ್ಲ, ಏನು 1994ರ ಮೇ ತಿಂಗಳಲ್ಲಿ ಅಲ್ಲಿ ಸಭೆ ನಡೆಯಿತು. ನಮ್ಮ ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಆರ್ಗನೈಸೇಷನ್‌ಗೆ ಹೋದ ಚೀಫ್ ಇಂಜಿನಿಯರ್ ಅವರು ಹೇಳಿದ್ದಾರೆ ಇದರ ಬಗ್ಗೆ ನಾನು ಸರ್ವೆ ಮಾಡುವುದಕ್ಕೆ ತಕರಾರು ಇಲ್ಲ,

ಆದರೆ ನೀರು ಹಂಚಿಕೆ ಬಗ್ಗೆ ಅಪೋರ್ಷನ್ ಮಾಡುವುದರ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಿದ್ದಾರೆ. ಹಿಂದೆ ಕೆ.ಎಲ್. ರಾವ್‌ರವರು ಇದ್ದಂಥ ಕಾಲದಿಂದ ಗಂಗಾ-ಕಾವೇರಿ ಕೂಡಿಸಬೇಕೆಂದು ಕೆಲವರು ಸಲಹೆ ಮಾಡಿದ್ದಾರೆ. ಪಾರ್ಲಿಮೆಂಟಿನಲ್ಲಿ ಕೆಲವರು ಸಲಹೆ ಮಾಡಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಕೆಲವು ಪ್ರಯತ್ನಗಳು ನಡೆದು ಗಂಗಾ-ಕಾವೇರಿ ಜೋಡಿ ಮಾಡುವುದಕ್ಕೆ ಸಾಧ್ಯಾವಾಗುವುದಿಲ್ಲ, ಗ್ರೌಂಡ್ ಕೆನಾಲ್ ಎಂದು ಕರೆದರೂ ಸಾಧ್ಯಾವಾಗುವುದಿಲ್ಲ,, ಆದುದರಿಂದ ಮಹಾನದಿಯಿಂದ ಸರ್ಪ್ಲಸ್ ಬೇಸನ್‌ಗೆ ಕೂಡ ತರುವುದಕ್ಕೆ ಸಾದ್ಯವಾಗುತ್ತದೆಂದು ಒಂದು ಲೈನ್ ಎಸ್ಟಿಮೇಟ್ ಮಾಡತತಕ್ಕದ್ದಕ್ಕೆತ ನಿರ್ಣಯ ಮಾಡಿದ್ದೇವೆ. ಅದರಲ್ಲಿ 653 ಟಿಎಂಸಿ ನೀರನ್ನು ಮಹಾನದಿಯಿಂದ ಕೃಷ್ಣ ಮತ್ತು ಗೋದಾವರಿ ಕಾವೇರಿ ಬೇಸಿನ್‌ಗೆ ಟ್ರಾನ್ಸ್‌ಫರ್ ಮಾಡತಕ್ಕದರ ಬಗ್ಗೆ ಒಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಅದರಲ್ಲಿ ಕೃಷ್ಣ ಬೇಸಿನ್‌ಗೆ 196, ಟಿ.ಎಂ.ಸಿ ಕಾವೇರಿ ಬೇಸಿನ್‌ಗೆ 87, ಟಬಿ.ಎಂ.ಸಿ ಮಹಾರಾಷ್ಟ್ರಕ್ಕೆ 196 ಟಿಎಂಸಿ ಅಪೋರ್ಷನ್ ಮಾಡಿದ್ದಾರೆ, ಇದು ಟೆಂಟೇಟೀವ್ ಪ್ರೋಗ್ರಾಂ. ಇದರಲ್ಲಿ ಇಷ್ಟೇ ಎಂದು ನಿಖರವಾಗಿ ಇನ್ನೂ ನಮ್ಮ ಮುಂದೆ ಬಂದಿಲ್ಲ,

ಶ್ರೀ ಹೆಚ್.ಎನ್. ನಂಜೇಗೌಡ : ಅದು ರೆಕಾರ್ಡ್‌ಗೆ ಹೋಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಹೇಳುತ್ತಿದ್ದೇನೆ ನಾನು.

ಶ್ರೀ ಹೆಚ್.ಎನ್. ನಂಜೇಗೌಡ : ಅದು ಮಹಾನದಿ ಒಂದರಿಂದಲೇ ಅಲ್ಲ, ಮಹಾನದಿ ಗೋದಾವರಿ ಎರಡೂ ಸೇರಿ ಅಷ್ಟು ನೀರು.

ಶ್ರೀ ಹೆಚ್.ಡಿ. ದೇವೇಗೌಡ ; ಒಪ್ಪಿಕೊಂಡೆ ನಮಗೆ ಸಿಕ್ಕಿರುವುದೇ ಗೋದಾವರಿಯಿಂದ 24-25 ಟಿ.ಎಂ.ಸಿ. ಗೋದಾವರಿ ಡೈವರ್ಷನ್‌ನಿಂದ ನಾವು ಏನು ಭೀಮಾ ಫ್ಲೋ

ಭೀಮಾ ಲಿಫ್ಟ್ ಎಂದು ಹೇಳುತ್ತೇವೋ ಅದರಿಂದ ಕೇವಲ ನಮಗೆ ಸಿಕ್ಕಿರತಕ್ಕದ್ದು 25 ಟಿ.ಎಂ.ಸಿ. ನೀರು ಮಹಾನದಿ ಡೈವರ್ಷನ್ ಇಲ್ಲದೆ. ಮಹಾನದಿ ಡೈವರ್ಷನ್ ಗೋದಾವರಿಗೆ ಮಾಡಿದರೆ ಆಗ ನಮ್ಮ ಭಾಗಕ್ಕೆ ಇಷ್ಟು ಬರುತ್ತದೆ ಎಂಬುದು ಒಂದು ಅಭಿಪ್ರಾಯ ಅದೇ ಕೊನೇ ಮಾತಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮತ್ತೆ ಅಂಕಿಅಂಶ ತಪ್ಪಾಗಬಾರದು.

ಶ್ರೀ ಹೆಚ್.ಡಿ. ದೇವೇಗೌಡ: ಅವರು ಕೊಟ್ಟಿರುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಹೇಳುತ್ತೇನೆ ದಯವಿಟ್ಟು ಕೇಳಿ. ಗೋದಾವರಿ ಡೈವರ್ಷನ್‌ನಿಂದ ನಮಗೆ ಸಿಕ್ಕಿರುವುದು 21 + 2 = 23. ಆದರೆ ಗೋದಾವರಿ ಸರ್‌ಪ್ಲಸ್ ಮತ್ತು ಮಹಾನದಿ ಸರ್‌ಪ್ಲಸ್ ಸೇರಿ 600 ಚಿಲ್ಲರೆ ಆಗುತ್ತದೆ. ಮಹಾನದಿ ಒಂದರದ್ದೇ ಅಲ್ಲ, ಪೆನಿಸ್ಯುಲಕ್ ಸ್ಕೀಮ್ ಪಾರ್ಲಿಮೆಂಟಿನಲ್ಲಿ 1985ನೇ ಇಸವಿಯಲ್ಲಿ ಆರಿಪೋರ್ಟ್ ಮಂಡನೆಯಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ : ಸ್ವಾಮಿ 1985ರಿಂದಲೇ ನಾನು ಹೇಳಿರುವುದು. 1994ರಲ್ಲಿ ಪತ್ರ ಬರೆದಿರುವುದು 1994ರಲ್ಲಿ ನಮ್ಮ ಅಧಿಕಾರಿಗಳು ಹೋಗಿ ಅಲ್ಲಿ ಆಟೆಂಡ್ ಆಗಿರುವುದು. 1985ರಿಂದ ಅಂದರೆ 9 ವರ್ಷ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಬೇಕಾಗಿರಲಿಲ್ಲತ. ಇರಲಿ. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ನಾನು ಪಾರ್ಲಿಮೆಂಟಿನಲ್ಲಿ ಪ್ರಸ್ತಾಪ ಮಾಡಿದೆ. ಶ್ರೀಮಾನ್ ಶುಕ್ಲಾ ಅವರು ಹೇಳಿದ ಪ್ರೊಸೀಡಿಂಗ್ಸನ್ ಬೇಕಾದರೆ ತಂದು ಈ ಸಭೆಯ ಮುಂದೆ ಇಡೋಣ. ಅವರು ಏನು ಹೇಳಿದರು.? ಇದಕ್ಕೆ ಅನೇಕ ರಾಜ್ಯಗಳು ಒಪ್ಪಿಗೆ ಕೊಟ್ಟಿಲ್ಲ ಎಂದು ಹೇಳಿದರು. ನಾವು ಏನು ಚರ್ಚೆ ಮಾಡಿದ್ದೇವೋ ಆ ರಾಜ್ಯದ ಎಂ.ಪಿ.ಗಳು ಪ್ರೊಟೆಸ್ಟ್ ಮಾಡಿದರು ಅಲ್ಲೇ ನಾವು ಇದಕ್ಕೆ ಅಲೋ ಮಾಡುವುದಿಲ್ಲ, ಎಂದು ಅದು ಬೇರೆ ವಿಚಾರ. ಇವತ್ತುತ ನಮಗೆ ಇದರಿಂದ ಏನೋ ಆಗಿಹೋಗುತ್ತದೆ. ಇವತ್ತು ನಮ್ಮ ರಾಜ್ಯಕ್ಕೆ ಏನೋ ಮಾಹಾ ದೊಡ್ಡ ಅನಾಹುತ ಆಗಿಹೋಗುತ್ತದೆ. ಇದೆಲ್ಲಾ ಹೊರಗಡೆ ಏನು ಸಂಶಯ ಮೂಡಿಸುತ್ತಿದ್ದಾರೆ. ಬಂದು ನೀರು ತೆಗೆಕೊಂಡು ಹೊರಟು ಹೋಗಿಬಿಟ್ಟರು ಎಂದು ಇದು ಇನ್ನೂ ಪ್ರಿಲಿಮಿನರಿ ಸ್ಟೇಜಿನಲ್ಲಿದೆ, ಫೈನಲ್ಲಾಗಿ ನೀರಾವರಿ ಮಂತ್ರಿಗಳ ಸಭೆಯನ್ನು ಕರೆಯಬೇಕಾಗುತ್ತದೆ. ರಾಜ್ಯಗಳು ಒಪ್ಪಿಕೊಳ್ಳ ಬೇಕಾಗುತ್ತದೆ. ಇವೆಲ್ಲವೂ ಅಂತಿಮವಾದ ಒಂದು ಅಭಿಪ್ರಾಯ ಆಗುತ್ತದೆಯೋ ಹೋಗುತ್ತದೆಯೋ ಗೊತ್ತಿಲ್ಲ, ಇದರಲ್ಲಿ ದಯಮಾಡಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಯೋಜನೆಯಲ್ಲಿ ಎರಡು ಸ್ಕೀಂಗಳನ್ನು ಹೇಳಿದ್ದಾರೆ. ಇಂಚಿನ ಪಳ್ಳಿಯಿಂದ ನಾಗಾರ್ಜುನಾ . ಸಾಗರದವರೆಗೆ ಅದು ಒಂದು ಕೆನಾಲ್. ಒಂದು ಬ್ರಾಂಚ್, ಇನ್ನೊಂದು ಇಂಚಿನಪಳ್ಳಿಯಿಂದ ಹುಲಿಚಿಂತನಿ ಎರಡು ಕೆನಾಲನ್ನು ಮಾಡಬೇಕೆಂಬುದು. ಇದನ್ನು ಒಂದು ರಫ್, ಟೆಂಟೇಟೀವ್ ಅಥವಾ ಲೈನ್ ಎಸ್ಟಿಮೇಟ್ ಎಂದು ಕರೆದುಕೊಳ್ಳಬಹುದು. ಇದರ ಬಗ್ಗೆ ಇಷ್ಟೇ ಹೇಳಿ ನಮಗೆ ಅವರು 196 ಟಿ.ಎಂ.ಸಿ. ನೀರನ್ನು ಕೃಷ್ಣಾ ಬೇಸಿನ್ ಮತ್ತು ಕಾವೇರಿ ಬೇಸಿನ್‌ಗೆ ಕೊಡುವಂಥ ಸನ್ನಿವೇಶ ಬಂದಾಗ ಆಗ ಸರ್ಕಾರ ನಿಮ್ಮ ಮುಂದೇನೆ ಬರುತ್ತದೆ. ಇದರದ್ದು ಲೈನ್ ಎಸ್ಟಿಮೇಟ್ ಇರತಕ್ಕಂಥದ್ದನನ್ನು ಹೇಳಿದ್ದೇನೆ ನಾನು. ಅಂದರೆ ಏನೋ ಆಗಿಹೋಗಿದೆ ಆಲ್ಮಟ್ಟಿಯಿಂದ ಎಲ್ಲಾ ನೀರನ್ನು ತೆಗೆದುಕೊಂಡು ಹೋಗುತ್ತಾರೆ ಅಂದರೆ ನಾನು ಇದರ ಬಗ್ಗೆ ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಸನ್ಮಾನ್ಯ ಅಧ್ಯಕ್ಷರೇ ಇನ್ನು ಜುರಾಲೈ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಿ ಬೇರೆ ವಿಷಯಕ್ಕೆ ಹೋಗುತ್ತೇನೆ ಜುರಾಲಾ ಬಗ್ಗೆ ನಾವು ಈಗಾಗಲೇ ಎಲ್ಲಾ ವಿರೋಧ ಪಕ್ಷದ ಮುಖಂಡರು ಸೇರಿದಂಥ ಸಭೆಯಲ್ಲಿ

ಚರ್ಚೆಗೆ ಮಾಡಿದ್ದೇವೆ. ಸರ್ಕಾರ ನಿಧಾನ ಮಾಡಕೂಡದು, ಜಾಗ್ರತೆ ಆ 5 ಹಳ್ಳಿಗಳು ಮುಳುಗಡೆ ಆಗತಕ್ಕಂಥದ್ದು ಮತ್ತು ಎರಡು ಪುಣ್ಯ ಕ್ಷೇತ್ರಗಳು ಏನಿವೆ ಅದಕ್ಕೆ ರೀಟೈನಿಂಗ್ ವಾಲ್ ಹಾಕಿ ಅದನ್ನು ಉಳಿಸತಕ್ಕದ್ದು. ಸೇತುವೆಗಳು ಮತ್ತು ರಸ್ತೆಗಳಿಗೆ ಆಂಧ್ರ ಪ್ರದೇಶದಿಂದ ದುಡ್ಡನ್ನು ನಮ್ಮ ಭಾಗಕ್ಕೆ ಪಡೆದುಕೊಳ್ಳತಕ್ಕದ್ದು ಎಲ್ಲದಕ್ಕೂ ನೀವು ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.

ನಮ್ಮ ಅಧಿಕಾರಿಗಳು ಜಾಯಿಂಟ್ ಸರ್ವೆ ಮಾಡುವುದಕ್ಕೆ ಹೋಗಿದ್ದಾರೆ ನಡೆಯುತ್ತಾ ಇದೆ ಜಾಯಿಂಟ್ ಸರ್ವೆ. ಎರಡೂ ರಾಜ್ಯದ ಅಧಿಕಾರಿಗಳ ಜಾಯಿಂಟ್ ಸರ್ವೆ ಆಗುತ್ತಾ ಇದೆ. ಇಪ್ಪತ್ತೊಂದು ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಕೂಡ ಕಳುಹಿಸಿಕೊಟ್ಟಿದ್ದೇವೆ. ನಾನು ಆಂಧ್ರದ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಇನ್ನು ಎರಡು ವಾರದಲ್ಲಿ ಸೂಕ್ತವಾದಂಥ ಒಂದು ಡೇಟನ್ನು ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಇದರ ಬಗ್ಗೆ ಕುಳಿತು ಚರ್ಚೆ ಮಾಡೋಣ. ಇದು ಪವರ್‌ಗೆ ಸಂಬಂಧಪಟ್ಟಿದ್ದಲ್ಲ, ಪವರ್‌ದು ಬೇರೆ. ಈ 21 ಕೋಟಿ ರೂಪಾಯಿ ರಸ್ತೆ, ಅದಕ್ಕೆ ಏನು ಭೂಮಿ ಮುಳುಗಡೆ ಯಾಗುತ್ತದೆ, ಸೇತುವೆಗಳನ್ನು ಕಟ್ಟಬೇಕು, ರೀಟೇನಿಂಗ್ ವಾಲ್ ಹಾಕಬೇಕು ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಅಧಿಕಾರಿಗಳು ಮಾಡಿರತಕ್ಕ ಒಂದು ಅಂದಾಜು. ಅದಕ್ಕೆ ನಾನು ಪತ್ರ ಕೂಡ ಬರೆದು ಮಾತನಾಡಿದಾಗ ಇಬ್ಬರೂ ಸೇರಿ ಮಾತನಾಡೋಣ. ಇದರ ಬಗ್ಗೆ ಯಾವ ಭಿನ್ನಾಭಿಪ್ರಾಯ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇನ್ನು ನೀರು ಹೆಚ್ಚು ನಿಲ್ಲಿಸುತ್ತಾರೆ ಎನ್ನುವ ಬಗ್ಗೆ ಜಂಟಿ ಸರ್ವೆ ಏನು ನಡೆಯುತ್ತಿದೆ ಅದು ಬಂದಮೇಲೆ ಅದನ್ನು ಸಭೆಯ ಮುಂದೆ ಇಡುತ್ತೇನೆ. ಇಷ್ಟನ್ನು ಈ ಸಂದರ್ಭದಲ್ಲಿ ಹೇಳಿ ಸನ್ಮಾನ್ಯ ಅಧ್ಯಕ್ಷರೇ ಹೇಮಾವತಿ ಬಗ್ಗೆ ಒಂದೇ ಒಂದುಮಾತು ಹೇಳುತ್ತೇನೆ. 100ಕ್ಕೆ 65ರಿಂದ 70 ಭಾಗ ಕೆಲಸಗಳು ಪ್ರಾರಂಭವಾಗಿ ಈಗಾಗಲೇ ಕೆಲಸಗಳು ನಡೆಯುತ್ತಿವೆ. ಇನ್ನು 42-44 ಕೆಲಸಕ್ಕೂ ಟೆಂಡರ್ ಕರೆದಿದ್ದೇವೆ. ಇದಿಷ್ಟು ಮಾತ್ರ ಸೂಕ್ಷ್ಮವಾಗಿ ಹೇಳಿ, ತಾವು ಬೇಕಾದರೆ ಪಿ.ಎ.ಸಿ. ಛೇರ್ಮನ್ನರಿದ್ದೀರಿ, ಅಥವಾ ಈ ಸದನದ ಸಮಿತಿ ಸದಸ್ಯರು ಕೂಡ ಯಾರಾದರೂಹೋಗಬೇಕು ಅಂದರೆ ಕಳುಹಿಸುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಕೆಲಸ ಪ್ರಾರಂಭವಾಗಿದೆ ಎನ್ನುವುದನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ. ಇನ್ನು ಆಶ್ರಯ ಯೋಜನೆ. ಇದರಲ್ಲಿ ಭ್ರಷ್ಟಾಚಾರ ಮೂರೇ ತಿಂಗಳಿಗೆ ಪ್ರಾರಂಭವಾಯಿತು ನಮ್ಮದು ಎಂದು ಹೇಳಿದ್ದಾರೆ. ಕೋರಮಂಗಲದಲ್ಲಿ ರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣದಲ್ಲಿ 100ಕೋಟಿ ರೂಪಾಯಿಗೂ ಮೀರಿದ ಅವ್ಯವಹಾರ, ರಾಜ್ಯದ ಜನತೆಗೆ ಬಿ.ಜೆ.ಪಿ. ಯಿಂದ ಮಾಹಿತಿ ಪತ್ರ - ಎಲ್ಲಾ ಕಡೆ ಪ್ರಿಂಟ್ ಮಾಡಿಸಿ ಇಡೀ ರಾಜ್ಯಾದ್ಯಂತ ಹಂಚಿದ್ದಾರೆ. ಇದು ಬೋಫರ್ಸ್‌ಗಿಂತಲೂ ಸ್ವಲ್ಪ ದೊಡ್ಡದೇ. ಭೋಫೋರ್ಸ್ 65 ಕೋಟಿ ಎಂದು ಕಾಣುತ್ತದೆ. ಅದಕ್ಕಿಂತ ಸ್ವಲ್ಪ ದೊಡ್ಡದೇ ಇದು. ಎಲ್ಲಾ ಕಡೆ ಹಂಚಿದ್ದಾರೆ, ಸಂತೋಷ. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ, ಈ ಸದನದ ಸಮಿತಿ ವರದಿ ಕೂಡ ಇದೆ. ಅದರಲ್ಲಿ ಅವರ ಪಕ್ಷದ ಇಬ್ಬರು ಸದಸ್ಯರು ಈಗಾಗಲೇ ಲೋಪದೋಷವನ್ನು ಎತ್ತಿದ್ದಾರೆ. ಬಹುಶಃ ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅಧು ಚರ್ಚೆಗೆ ಬರಬಹುದು. ಅವರು ಕೊಟ್ಟಿರತಕ್ಕ ರಿಪೋರ್ಟ್ ಎಲ್ಲರ ಕೈಯಲ್ಲಿದೆ. ಅದರ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಈಗ ಹೇಳುವುದು ಅವಶ್ಯಕತೆ ಇಲ್ಲ, ಪ್ರಿವಿಲೇಜ್ ಮೋಷನ್ ಚರ್ಚೆಗೆ ಬಂದಾಗ ನಾನೂ ಇಲ್ಲಿಯೇ ಇರುತ್ತೇನೆ. ಉತ್ತರ ಕೊಡೋಣ. 100 ಕೋಟಿ ರೂಪಾಯಿಗೂ ಮೀರದ ಅವ್ಯವಹಾರ ಏನು ಎಂಬುದನ್ನು ಹೇಳಬಹುದು. ಅದರ ಬಗ್ಗೆ ಈ ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ, ಸನ್ಮಾನ್ಯ ಅಧ್ಯಕ್ಷರೆ, ಈ ಆಶ್ರಯ

ಯೋಜನೆಯಲ್ಲಿ 1992-93 ಮತ್ತು 1993-94ರಲ್ಲಿ ಒಂದು ಲಕ್ಷ ಮನೆ ಕಟ್ಟತಕ್ಕದ್ದರ ಬಗ್ಗೆ ಸರ್ಕಾರ ನಿರ್ಣಯ ಮಾಡಿದೆ. ಅದರಲ್ಲಿ ಮನೆಗಳು ಟ್ಯಾಕಲ್ ಮಾಡಿರುವುದು 90 ಸಾವಿರ. ಇಲ್ಲಿಯವರೆಗೆ ಮುಗಿದಿರುವುದು 78 ಸಾವಿರ 13 ಸಾವಿರ ಮನೆಗಳು ಪ್ರೋಗ್ರೆಸ್‌ನಲ್ಲಿವೆ. For the entire 91,000 houses 100% amount has been released at the rate of Rs. 15,000 per unit.

ಸೆಕೆಂಡ್ ಫೇಸ್ ಅಶ್ರಯ ಪ್ರೋಗ್ರಾಂ 1994-95ರಲ್ಲಿ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ 1 ಲಕ್ಷ 50 ಸಾವಿರ ಮನೆಗಳನ್ನು ಕಟ್ಟಿಸುತ್ತೇವೆಂದು ಘೋಷಣೆ ಮಾಡಿದ್ದಾರೆ. ಆದರೆ ಅದಕ್ಕೆ ಬಿಡುಗಡೆ ಮಾಡಿದ ಹಣ at the rate of Rs. 15,000 per unit the amount required is Rs. 235 crores, but the release is only Rs. 15 crores.

Against the provision of Rs. 78.80 crores they have released Rs. 56 crores. The amount utilised for backlog houses i.e., for the year 1993-1994 was Rs. 41 crores. The amount left for the current year was only Rs. 15 crores. Since the G.O. issued in September 1994 and elections were held in November, it was not possible to take up new works.

15 ಕೋಟಿ 78 ಲಕ್ಷ ಉಳಿಯಿತೋ ಅಲ್ಲಿಂದ ಮುಂದಕ್ಕೆ ಅದರ ಡೀಟೈಲ್ಸ್ ಕೊಡುತ್ತೇನೆ. Most of the houses are in rural areas and 25,000 houses in urban areas. 1ಲಕ್ಷ 25 ಸಾವಿರಕ್ಕೆ ಲಿಮಿಟ್ ಮಾಡಿದ್ದೆವು ದುಡ್ಡು ಅಷ್ಟೇ ಇರುವುದು ನಮ್ಮ ಹತ್ತಿರ ಎಂದು ಹೇಳಿ ನಾವು 1 ಲಕ್ಷ 50 ಸಾವಿರ ಏನು ಲಾಸ್ಟ್ ಇಯರ್ ಹೇಳಿದ್ದೇವೆ ಹಣ ಇಲ್ಲ ನಮ್ಮ ಹತ್ತಿರ ನಮ್ಮಲ್ಲಿ ಇವತ್ತು ಏನು ಖರ್ಚು ಮಾಡುವುದಕ್ಕೆ ಸಾಧ್ಯ ಇದೆಯೋ ಅಷ್ಟಕ್ಕೆ ನಾವು ಲಿಮಿಟ್ ಮಾಡೋಣ ಎಂದು ಅಧಿಕಾರಿಗಳ ಜೊತೆ ಕುಳಿತು ಚರ್ಚಿಸಿದ್ದೇನೆ. ಆಶ್ರಯ ಹೌಸಿಂಗ್ ಸ್ಕೀಂ 60 ಸಾವಿರ, ಅಂಬೇಡ್ಕರ್ ಹೌಸಿಂಗ್ ಸ್ಕೀಂ 25 ಸಾವಿರ, ಇಂದಿರಾ ಅವಾಸ್ ಯೋಜನೆಯಲ್ಲಿ 40 ಸಾವಿರ ಹೀಗೆ 1 ಲಕ್ಷ 25 ಸಾವಿರ ಮನೆಗಳನ್ನು ಕಟ್ಟತಕ್ಕಂಥಾದ್ದು The total cost would be about Rs. 235 crores. Rs. 120 crores under Ashraya, Rs. 50 crores under Ambedkar Housing Programme and Rs. 65 crores under Indira Avas Yojana. The Govt. has already released Rs. 45.29 crores. Ashraya Programme-Rs. 11 crores, Ambedkiar Housing Scheme-Rs. 18 Crores and Indira Avas yojane- Rs. 16.29 crores.

ಸನ್ಮಾನ್ಯ ಅಧ್ಯಕ್ಷರೆ, ನಾವೇನು ಒಂದು ಸರ್ವೆ ಮಾಡಿಸಿದ್ದೇವೆ. ಆ ಸರ್ವೆ ಮಾಡಿಸಿದ ಪ್ರಕಾರ 20 ಲಕ್ಷ ಕುಟುಂಬಗಳಿಗೆ ನಿವೇಶನ ಇಲ್ಲ ಎನ್ನತಕ್ಕಂಥ ಒಂದು ವರದಿ ಬಂದಿದೆ. ನೀವು ಹೇಳಿದಿರಲ್ಲಾ, ಡೆಪ್ಯೂಟಿ ಕಮಿಷನರ್‌ರವರಿಗೆ ಹೇಳಿ ಐಡೆಂಟಿಫೈ ಮಾಡಬೇಕೆಂದು ಹೇಳಿ ಅದರ ಪ್ರಕಾರ 20 ಲಕ್ಷ ಕುಟುಂಬಗಳಿಗೆ ನಿವೇಶನ ಮತ್ತು ಮನೆ ಇಲ್ಲಾ ಎನ್ನತಕ್ಕಂಥಾದ್ದು ಎಲ್ಲಾ ಜಿಲ್ಲಾಧಿಕಾರಿಗಳಿಂದ ಬಂದಿರತಕ್ಕಂಥ ವರದಿ. ಇತ್ತೀಚೆಗೆ ನಾವು ಏನು ಮಾಡಿದೆವು? 15 ಸಾವಿರ ರೂ. ಕೊಡುತ್ತಾ ಇದ್ದಂತಹ ಮನೆಗಳಿಗೆ ಈಗ 20 ಸಾವಿರ ರೂ. ಮಾಡಿದ್ದೇವೆ. 5 ಸಾವಿರ ರೂ. ಹೆಚ್ಚು ಮಾಡಿದ್ದೇವೆ. ಇನ್ನು ನಗರ ಪ್ರದೇಶಗಳಲ್ಲಿ 20 ಸಾವಿರ ಮನೆಗೆ ಕೊಡುತ್ತಿದ್ದುದನ್ನು 25 ಸಾವಿರ ರೂ. ಮಾಡಿ ಅದನ್ನು ಕೂಡ ಗವರ್ನ್‌ಮೆಂಟ್ ಆರ್ಡರ್ ಇಷ್ಯೂ ಮಾಡಿ ಈ ಒಂದು ಲಕ್ಷ 25 ಸಾವಿರ ಮನೆಗಳಿಗೆ ಎಷ್ಟು ಹಣ ಒದಗಿಸುವುದಕ್ಕೆ

ಸಾಧ್ಯವೋ ಆದಷ್ಟೂ ಈ ವರ್ಷ ಮುಗಿಸಬೇಕೆಂದು ತೀರ್ಮಾನ ಮಾಡಿ ಹಣ ರಿಲೀಸ್ ಮಾಡಿದ್ದೇವೆ. ಇದೂ ನಾನು ಒಂದೊಂದಾಗಿ ನಮ್ಮ ಸನ್ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಸನ್ಮಾನ್ಯ ಹಿರಿಯ ಮುಖಂಡರಾದ ಖರ್ಗೆಯವರು ಮತ್ತು ಇನ್ನು ಕೆಲವು ಸ್ನೇಹಿತರು ಏನು ಮಾತನಾಡಿದ್ದಾರೆ. ಅದರ ಬಗ್ಗೆ ವಿವರಣೆ ಕೊಡುತ್ತಾ ಇದ್ದೇನೆ. ಇನ್ನು 3ನೇ ಅಪಾದನೆ ಜಾಫರ್ ಷರೀಫ್‌ರವರ ಬಗ್ಗೆ ನಾವುಗಳು ಏನೋ ಬಹಳ ದೊಡ್ಡ ಅವರಿಗೆ ರಕ್ಷಣೆ ಕೊಡಲಿಕ್ಕೆ ಹೋರಟಿದ್ದೇವೆ ಎಂದು .ಯಾವ ರಕ್ಷಣೆಯನ್ನೂ ಕೊಡಲಿಕ್ಕೆ ಹೊರಟಿಲ್ಲ. ಅದು ನಾನು ಹೇಳಿದಂಥಾದ್ದು ಹೀಗೆ ಕೈತೋರಿಸಿ ಈ ಸದನದಲ್ಲಿ ಇರುವವರು, 13 ಸಾವಿರ ಎಕರೆ ಇಟ್ಟಿದ್ದಾರೆ ಎಂದು ಹೇಳಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಲ್ಲ, ಈ ಸದನದಲ್ಲಿ ಇದ್ದವರು ಹೇಳಿದ್ದು ಎಂದು ಹೊರಗಡೆ ಆ ಮೇಲೆ ನಿಧಾನಕ್ಕೆ ಮಾತನಾಡೋಣ ನಾನು ' ಜಾಫರ್ ಷರೀಫ್ ಬಗ್ಗೆ ಎರಡು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಇಟ್ಟಿದ್ದೇನೆ. ಎಲ್ಲಾ ದಾಖಲೆಗಳನ್ನು ಕೇಳಿದ್ದೇನೆ, ಕಳುಹಿಸಿದ್ದೇನೆ. ನಾರು ಸಪ್ರೆಸ್ ಮಾಡ ಬೇಕಾದ್ದೇನೂ ಇಲ್ಲ. ವೀಣಾ ಶ್ರೀರಾಮ ರಿಪೋರ್ಟ್, ಲಿನ್‌ರಿಪೋರ್ಟ್ ರಾಜಶೇಖರ ಮೂರ್ತಿಯವರ ಮನೆಯಲ್ಲಿ ಕುಳಿತು ಬರೆದಿರುವ ಎಲ್ಲಾ ಅರ್ಜಿಯನ್ನು ಕಳುಹಿಸಿದ್ದೇನೆ. ಯಾವುದೂ ಇಟ್ಟುಕೊಳ್ಳಬೇಕಾಗಿಲ್ಲ. ಅದರ ಅವಶ್ಯಕತೆ ನನಗೆ ಇಲ್ಲ ಆದರೆ ಒಂದೇ ಒಂದು ನನ್ನ ಮನಸ್ಸಿನಲ್ಲಿ ಏನೆಂದರೆ ಇದೆಲ್ಲಾ ರಾಜಕೀಯದಲ್ಲಿ ನಡೆಯುವಂಥದ್ದು. ಎಲ್ಲಾ ಪಕ್ಷಗಳಲ್ಲಿ ನಡೆಯುವಂಥಾದ್ದು ನನಗೆ ಗೊತ್ತಿದೆ,

ಅದು ಅನುಭವಿಸಿರುವಂಥದ್ದು. ಯಾರಿಗೂ ಏನೂ ಇದು ಹೊಸದಲ್ಲ. ಯಾರಾದರೂ ತಿಳಿದುಕೊಂಡಿದ್ದರೆ ನಮ್ಮ ಪಕ್ಷಕ್ಕೆ ಮಾತ್ರ ಇದು ಹೊಸದು ಎಂದ ಅದು ತಪ್ಪು ಎಲ್ಲಾ ಕಾಂಗ್ರೆಸ್ ಜನತಾದಳದಲ್ಲಿ ಒಡಕು ಇದೆ ಎಂಬ ಬಗ್ಗೆ ಮುಂದೆ ಬರುತ್ತೇನೆ ಈಗ ಸಧ್ಯಕ್ಕೆ ಬೇಡ. ಕಾಂಗ್ರೆಸ್ ಜನತಾದಳ ಹೊಡೆದಾಡುವುದು ಬಹಳ ಮೌಲ್ಯದ ಪಾರ್ಟಿಯ ಬಗ್ಗೆ ಸ್ವಲ್ಪ ಬಿಟ್ಟು ಮುಂದೆ ಹೋಗುತ್ತೇನೆ. ಚಾರ್ಜಸ್ ಬಗ್ಗೆ ಹೇಳುತ್ತೇನೆ. The entire documents were sent according to the direction issued by the Krnataka High Court. There are two Writ petitions (1) Writ petition No. 39398/93 and (2) 27367/95. we have sent all the papers as per their direction.

ಅದರ ಬಗ್ಗೆ ನಾನು ಹೆಚ್ಚಾಗಿ ಮುಂದಕ್ಕೆ ಹೋಗುವುದಿಲ್ಲ. ನೇಪೋಟಿಸಂ ಬೈ ಚೀಫ್ ಮಿನಿಸ್ಟರ್. ರೀ ಅಪಾಯಿಂಟ್‌ಮೆಂಟ್ ಆಫ್ ಅನಂತರ. ಇದನ್ನು ನಾನು ಮಾಡಿಲ್ಲ. ನಿಮ್ಮ ಸರ್ಕಾರದಲ್ಲಿ ಮಾಡಿದ್ದಾರೆ. ನಿಮ್ಮ ನೆಂಟರಂತತೂ ಅಲ್ಲ ಅವರು. ಮೈ ಡಿಯರ್ ನೆಂಟರಂತೂ ಅಲ್ಲ, ನಾನು ಅಂತೂ ಮಾಡಲಿಲ್ಲ. ಆ ಮೇಲೆ ದಿವಂಗತ ಕೆ.ವಿ. ಶಂಕರೇಗೌಡರು ಅಳಿಯಂದಿರು ಹೈಕೋರ್ಟಿಗೆ ಹೋಗಿದ್ದಾರೆ. ರಿಟ್ ಹಾಕಿದ್ದಾರೆ ಹೈಕೋರ್ಟಿನಲ್ಲಿ ಸೀನಿಯರ್ ಇವರು ಎಂದು ಸೆಟ್ಲ ಆಗಿದೆ. ಅದರ ಮೇಲೆ ನಾವು ಗವರ್ನಿಂಗ್ ಕೌನ್ಸಿಲ್‌ನಲ್ಲಿ ಹೈಕೋರ್ಟು ಆರ್ಡರನ್ನು ಮುಂದೆ ಇಟ್ಟು ಗವರ್ನಿಂಗ್ ಮೆಂಬರ್ಸ್ ಎಲ್ಲಾ ಕುಳಿತು ನಾನು ಆಕ್ಚುಲ್ಲಾಗಿ ಸಭೆಯಲ್ಲಿ ಹೇಳಬೇಕಾಗಿದೆ ಡಾ|| ಪ್ರಭುದೇವ್‌ರವರನ್ನು ಮಾಡಬೇಕೆಂದು ಹೇಳಿ ನನ್ನ ಮನಸ್ಸಿನಲ್ಲಿ ಇತ್ತು. Dr. Prabhudev is one of the reputed doctors today. ಬಹುಶಃ ಅವರು ಹಾರ್ಟ್ ಸರ್ಜರಿ ಆಯಿತು. ಹಿಂದೆ ನಿಮ್ಮ ಸರ್ಕಾರ ಕೂಡ ಡಾ|| ಮರಲೆಡ್ಡಿಯವರು ಆ ಫೈಲನ್ನು ವೆರಿಫೈ ಮಾಡಿಸಿದ್ದಾರೆ. ಅದನ್ನು ನಿಮ್ಮ ಮುಂದೆ ಇಡುತ್ತೇನೆ. ಅದರ ಮೇಲೆ ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನಲ್ಲಿ ಅವರ ಹೆಸರು ಚಿಕ್ಕಲಿಂಗಯ್ಯನೋ ಚಿಕ್ಕಗಲಿಂಗಸ್ವಾಮಿನೋ ಯಸ್ ತಾವೂ ಇದ್ದಿರಿ ಆ ಸಭೆಯಲ್ಲಿ ಎಂದು ಕಾಣುತ್ತದೆ. ಅದರ ಮೇಲೆ ಕೋರ್ಟು ಡಿಸಿಸನ್ ಪ್ರಕಾರ ನಿರ್ಣಯವಾಗಿದೆ ನನ್ನ ಸಂಬಂಧಿಕರು ಎಂದು ನಾನು ಮಾಡಲಿಲ್ಲ. ಅದರ ಮೇಲೆ ಇಲ್ಲೊಬ್ಬರು ಪಿಡಬ್ಲ್ಯೂಡಿ ಸೆಕ್ರೆಡರಿ

ಇದ್ದರು. ಒಬ್ಬರೇ ಒಬ್ಬರು ಒಕ್ಕಲಿಗರು ಇದ್ದರು., ಅವರನ್ನು ತೆಗೆದು ಒಬ್ಬ ಶೆಡ್ಯೂಲ್ ಕ್ಯಾಸ್ಟ್ ಸೆಕ್ರೆಟರಿರವರನ್ನು ನೇಮಕ ಮಾಡಿದೆ. ಇದೇ ಕ್ರಿಟಿಸಿಸಂ. ಆ ಮೇಲೆ ಒಬ್ಬ ಶಂಕರಲಿಂಗೇಗೌಡ ಎಂದು ಹೌಸಿಂಗ್ ಬೋರ್ಡ್‌ಗೆ ಒಬ್ಬನನ್ನು ಹಾಕಿದ್ದೆ. ಅದು ಒಂದು ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಗ್ರೇಡ್ ಅಂಡರ್ ಸೆಕ್ರೆಟರಿ ಗ್ರೇಡೋ ನನಗೆ ಗೊತ್ತಿಲ್ಲ, ಇನ್ನೊಂದು ವೈಸ್‌ಚಾನ್ಸಲರ್ ಅಗ್ರಿಕಲ್ಚರ್ ಯಾನಿವರ್ಸಿಟಿಗೆ ಗವರ್ನರ್‌ರವರನ್ನು ಪ್ಯಾನಲ್‌ನಲ್ಲಿ ಅವರದ್ದು ಮೊದಲನೆ ನೀವು ಇದ್ದಾಗಲೂ ಗವರ್ನರ್ ನೇಮಕ ಮಾಡಿದ್ದಾರೆ. ಒಂದೊಂದು ಸಾರಿ ನಮ್ಮ ಮಾತು ಕೇಳುವುದಿಲ್ಲ ನಿಮ್ಮ ಮಾತನ್ನು ಕೇಳುವುದಿಲ್ಲ, ಗವರ್ನರ್. ಇದನ್ನು ಅನುಭವಿಸಿದ್ದೇನೆ ನಾನು, ಇದು ಏನೂ ದೊಡ್ಡ ವಿಷಯ ಅಲ್ಲ, ಅದು ಮಾಡಿದ್ದು ಯಾರು ಗವರ್ನರಿಂದ ಅಗ್ರಿ ಕಲ್ಚರ್ ಯೂನಿವರ್ಸಿಟಿಗೆ ಅಪಾಯಿಂಟ್ ಆಗಿದ್ದಾರೋ ಅವರ ರೆಪ್ಯೂಟೇಷನ್ ಮೇಲೆ ಜಾತಿ ಮೇಲೆ ಯೂರೂ ಅಳತೆ ಮಾಡಲಿಕ್ಕೆ ಹೋಗಬಾರದು ಅಷ್ಟೆ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನೂ ಪಾರ್ಥಸಾರಥಿ ಒಬ್ಬರನ್ನು ನನ್ನ ಆಫೀಸಿಗೆ ತೆಗೆದುಕೊಂಡಿದ್ದೇನೆ. I have made him as No. 2 and Sri Meenakshi Sundaram as No.1.

ಇದು ದೊಡ್ಡ ಅಪರಾಧ ಆಗಿದೆ. ಇನ್ನೂ ಡಾ|| ತಿಮ್ಮಯ್ಯ, ಡಾ|| ನಂಜುಂಡಪ್ಪನವರಿಗೆ ರ್‍ಯಾಂಕ್ ಕೊಟ್ಟು ಕ್ಯಾಬಿನೆಟ್ ಮುಂದುವರಿಸಿಕೊಂಡು ಹೋಗುತ್ತಿರುವುದು. Not because he is Lingayat. He is one of the experts., He has got his own reputation. ಅದರಿಂದ ನಾವು ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರೋ ಅದು ನಮಗೂ ಅನ್ವಯಿಸುತ್ತದೆ. ಕೆಲವು ತಜ್ಞರ ಅವಶ್ಯಕತೆ ಬೇಕಾಗುತ್ತದೆ ಅದರಿಂದ ಡಾ|| ತಿಮ್ಮಯ್ಯನವರನ್ನು ನಾನು ನೇಮಕ ಮಾಡಿದೆ ಹೊರತಾಗಿ ಬಾಕಿ ಇದರೊಳಗೇನೂ ಫೇವರಿಟಿಸಂ ಇಲ್ಲ ಡಾ|| ಬಾಳೆಕುಂದರಿಯವರು ತೀರಿಹೋದಮೇಲೆ ಟೆಕ್ನಿಕಲ್ ಕಮಿಟಿ ನೀವು ಮಾಡಬೇಕು ಎಂದು ತಾವು ಆರ್ಡರ್ ಮಾಡಿದ ಕಡತ ಅದು ಎಲ್ಲೋ ಹೋಗಗಿ ನಿಹಿತಹೋಯಿತು, ಅದು ಹೇಗೆ ನಿಂತು ಹೋಯಿತು ಎಂಬುದು ಈಗ ಬೇಡ. ಸದನದಲ್ಲಿ ಇಲ್ಲದ ಇರುವವರ ಬಗ್ಗೆ ನಾವು ಚರ್ಚೆ ಮಾಡುವುದು ಬೇಡ. ನಾವು ಮಾಡಿದಿರಿ ಟೆಕ್ನಿಕಲ್ ಕಮಿಟಿ ಮೇಜರ್ ಇರಿಗೇಷನ್ ಕಂಟ್ರೋಲ್ ಮಾಡಬೇಕು ಎಂದು ಆ ಫೈಲ್ ಎಲ್ಲೋ ಒಂದು ಕಡೆ ಹಿಡಿದಿಟ್ಟರು. ನಾನು ಬಂದಮೇಲೆ ಯೋಜನೆ ಮಾಡಿದೆ ಯಾರು ಹೀಗೆ ಮಾಡಿದವರು ,ನಾನು ಒಎಲ್ಲಾ ಕಡೆ ಕುಳಿತು ಲೆಕ್ಕಚಾರ ಮಾಡಿದೆ ನನ್ನ ದೃಷ್ಟಿಕೋನದಲ್ಲಿ ಬಹುಶಃ ಜಾತಿ ಎಂಬುದಾಗಿ ಮಾಡಿಲ್ಲ, ಬಾಳೆಕುಂದರಿ ಯಾವರನ್ನೇ ನಾರು ಹಿಂದೆ ಮಾಡಿದ್ದೆವು. not because he is my community man but a reputed technocrat.ಇದನ್ನು ಬಿಟ್ಟರೆ ಸ್ವಾಮಿ ಮತ್ತೆ ನಾನು ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ, ಜಾತಿಯ ಬಗ್ಗೆ ಅಮೇಲೆ ನಿಧಾನವಾಗಿ ಸ್ವಲ್ಪ ಮಾತನಾಡೋಣ. ನೆಪೋಟಿಸಂ ಬಗ್ಗೆ ಇಷ್ಟು ಮಾತುಗಳನ್ನು ಹೇಳಿ ಇನ್ನು ಮುಂದಕ್ಕೆ ಚಾರ್ಜಸ್ ಮೇಲೆ ಉತ್ತರವನ್ನು ನೀಡಬಯಸುತ್ತೇನೆ. ಜಯನಗರದಲ್ಲಿ ಸಿಂಧ್ಯಾರವರ ಮನೆ....ಮನೆ.....ಮನೆ.....ಪಕ್ಕ......ಪಕ್ಕ....ಪಕ್ಕ...

6.00 ಪಿ.ಎಂ

ಯಾರೋ ಪುಟ್ಟಸ್ವಾಮಿ ಗೌಡ ಅಂತ. ಹಾಗೆ ಅಂದ ತಕ್ಷಣವೇ ಹೊಳೆನರಸೀಪುರ ಜ್ಞಾಪಕ್ಕೆ ಬಂದುಬಿಡುತ್ತದೆ. ಅವರು ಹೊಳೆನರಸೀಪುರದವರು ಅಲ್ಲ, ಅದರಿಂದಾಗ ಅದನ್ನು ನಾನು ಹೇಳಿದ್ದೇನೆ. ಇದು ಆಗಿರುವುದು 21-7-1977ರಲ್ಲಿ "The Allotment of stray sites is being regularised under Rule 5 of the BDA (Allotment of sites) Rules, 1984. Ads per the guidelines in No.HUD 616 MNX. 89,

17.10.92.....ear mark certain percentage to various persons.... Sr. Officers, Govt, of Krnataka, Government of India, judges in Karnataka...so and so..

ಹೇಳಿ ಅದನ್ನೆಲ್ಲಾ ಹೇಳಿಕೊಂಡು ಹೋಗಿದ್ದಾರೆ ಅಲ್ಲಿಂದೀಚೆಗೆ ನಾನು ಏನು ಮಾಡಿದ್ದೇನೆ ಎಂದು ಹೇಳುತ್ತೇನೆ ಕೇಳಿ ಅವರನ್ನು ಇಟ್ಟುಕೊಂಡು ಏನು ಮಾಡಬೇಕಾಗಿಲ್ಲ, ಇದರೊಳಗೆ ಸ್ವಲ್ಪ ಅಕ್ರಮ ನಡೆದಿದೆ ಎಂದು ಹೇಳಿ 6 ಜನರನ್ನು ಅರೆಸ್ಟ್ ಮಾಡಿದ್ದೇವೆ.ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದೇವೆ. ಇದು ನನ್ನ ಕಾಲದಲ್ಲಿ ಏನು ನಡೆದಿದೆ ಎಂಬದನ್ನು ಅಷ್ಟೆ ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇದು ನನ್ನ ವರದಿ ಅಲ್ಲ, ಏಕೆಂದರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರ ಕ್ಷೇತ್ರದಲ್ಲಿ ಈ ಸರ್ಕಾರ ಬಂದ ಮೇಲೆ ಏನೇನೂ ಕೆಲಸ ತೆಗೆದುಕೊಳ್ಳಲಿಲ್ಲ ನನ್ನದೇ ಈ ಹಣೆಬರಹ ಆದರೆ ಬೇರೆಯವರ ಗತಿ ಏನು ಎಂದು ಹೇಳಿದ್ದಾರೆ. ಡಿ.ಸಿ ಅಂದರೆ ಡಿ.ಸಿ. ಮೇಲೂ ಅವರಿಗೆ ನಂಬಿಕೆ ಇದೆಯೇ ಅಥವಾ ನಾನೇ ಹೇಳಿ ಬರೆಯಿಸಿದ್ದೇನೋ ಎಂದು ಅಂದುಬಿಡುತ್ತಾರೋ ಅದೂ ಗೊತ್ತಿಲ್ಲ, ಅವರು ವರದಿ ತೆಗೆದುಕೊಂಡಿದ್ದೇವೆ ಅನ್ನುವ ವರದಿ ಯಾವ್ಯಾವ ಬಾಬಿನಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಬಹಶಃ ಅದು ಲೇಟ್ ಆಯಿತು ಎಂದು ಅವರ ಮನಸ್ಸಿನಲ್ಲಿದ್ದರೆ ನಾನು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆ, 95ರ ಆಗಸ್ಟ್ ಮಾಹೆಯವರೆಗೆ ವಿವಿಧ ಯೋಜನೆಗಳಡಿಯಲ್ಲಿ ತೆಗೆದುಕೊಂಡಿರತಕ್ಕಂತಹ ಕಾಮಗಾರಿಗಳು. 1994ರ ಡಿಸೆಂಬರ್‌ನಿಂದ. ನಮ್ಮ ಕಾಲದಲ್ಲಿ ಏನೇನು ಮಾಡಿದ್ದೇವೆ ಎಂಬುದನ್ನು ಕೊಡಿ ಎಂದು ಕೇಳಿದ್ದೆ ನಾನು. ಏಕೆಂದರೆ ನಾವು ಬಂದು ಬಿ.ಜೆ.ಪಿ.ಯವರ ಕ್ಷೇತ್ರದಲ್ಲಿ ಮಾಡಬಾರದು ಎಂದು ಹೇಳಿ, ರಾಜಕೀಯ ದ್ವೇಷ ಅಸೂಯೆ, ವಿಕ್ಟಿಮೈಸೇಷನ್ ಇವೆಲ್ಲಾ ಹೇಳಿದ್ದಾರೆ. ಅಲ್ಲಿ ಚಿಕ್ಕಮಠ ಎಂಬ ಡಿ.ಸಿ. ಇದ್ದಾರೆ. ಸದ್ಯ ನನ್ನ ಜಾತಿಯವರು ಇಲ್ಲ ಅಲ್ಲಿ. ಅದು ಇದ್ದರೆ ಅದು ಬೇರೆ ಗ್ರಹಚಾರ ಇವರೇ ಹೇಳಿ ಬರೆಸಿಬಿಟ್ಟಿದ್ದಾರೆ ಎಂದು ಹೇಳೋವರೋನೋ ಗೊತ್ತಿಲ್ಲ. 135.96ಲಕ್ಷ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಆಮೇಲೆ ನೀರಾವರಿ ಹಾನಿಗೆ ಪರಿಹಾರ ಕೃಷಿ ಬೆಳೆ ಹಾನಿ ಕಬ್ಬು ಬೆಳೆಗೆ ಪರಿಹಾರೋಪಾಯಗಳಲ್ಲಿ 10.22ಲಕ್ಷ ರೂಪಾಯಿಗಳು. ಕೈಗೆತ್ತಿಗೊಂಡ ಕಾಮಗಾರಿ ಲೋಕೋಪಯೋಗಿ ಇಲಾಖೆ-7, 3.30. ಸಣ್ಣ ನೀರಾವರಿ 7.90, ಜಿಲ್ಲಾ ಪಂಚಾಯತಿ 4.60 ಒಟ್ಟು 25 ಲಕ್ಷ 75 ಸಾವಿರ ಅದೂ ಒಂದು ಹೇಳಿದ್ದಾರೆ. ಅಧ್ಯಕಾಗಿ ಅವರಿಗೇ ಕಳಿಹಿಸಿ ಕೊಡುತ್ತೇನೆ ಇದರೊಳಗೆ ಏನಾದರೂ ತಪ್ಪು ಮಾಹಿತಿ ಇದ್ದರೆ ನಿಮ್ಮ ಮುಖೇನವೇ I am prepared to send this information if you permit me ಏಕೆಂದರೆ ತಪ್ಪು ವರದಿ ಕಳುಹಿಸಿದ್ದರೆ ನೋಡಿಕೊಳ್ಳಿ ಎಂದು ಕಳುಹಿಸುತ್ತಿದ್ದೇನೆ.

ಇನ್ನೊಂದು ಆಪಾದನೆ, "ಏನಾಯಿತು" "ಏನಾಯಿತು ಎಲ್ಲಪ್ಪ ರೆಡ್ಡಿ ರಿಪೋರ್ಟ್ ನನಗೆ ಗಾಬರಿಯಾಗಿಬಿಡ್ತು. ಏನಪ್ಪ ನಾನು ಬಂದ ಮೇಲೆ ಏನು ರೆಡ್ಡಿ ಅಂದರೂ ಒಕ್ಕಲಿಗೆ ಎಂದು ಕರೆಯುತ್ತಾರೆ. ವಕ್ಕಲಿಗರೇ. ಇರಲಿ ರೆಡ್ಡಿ ಬಂಟರು ಜೀವರಾಜ ಆಳ್ವರವರೂ ಒಕ್ಕಲಿಗರೇ. ಇವರು ಕೋಲಾರ ಜಿಲ್ಲೆಯವರು. ಏನಾಯಿತು? ಈ ಸರ್ಕಾರ ಸತ್ತಿದೆಯೋ ಬದುಕಿದೆಯೋ. ಜೀವಂತವಾಗಿದೆಯೋ? ಕೆಲವರ ದೃಷ್ಟಿಯಲ್ಲಿ ಇದು ಸತ್ತಿದೆ ಕೆಲವರ ದೃಷ್ಟಿಯಲ್ಲಿ ಜೀವಂತವಾಗಿದೆ. ಜೀವಂತವಾಗಿ ಹೇಗೆ ಇದೆ ಎಂಬುದನ್ನು ಮುಂದೆ ಹೇಳೋಣ. ಸ್ವಾಮಿ, ನೀವೇ ಹೇಳಿದಮೇಲೆ ಸಿ.ಓ.ಡಿ.ಗೆ ಹಾಕಿದ್ದೇವೆ. ಸನ್ಮಾನ್ಯ ವಿರೋಧ್ ಪಕ್ಷದ ನಾಯಕರೇ ಓದಿ ಹೇಳಿದರು It appears

to be some of teh forest rangers and ACFs are involved in this ಎಂದು ಒಂದು ಭಾಗವನ್ನು ಓದಿದರು ಅವರು. ಎಲ್ಲಪ್ಪರೆಡ್ಡಿಯವರು ಕೋಜೆಂಟ್ರಿಕ್ಸ್ ಬಗ್ಗೆ ಏನು ಕೊಟ್ಟಿದ್ದಾರೆ ವೀಡಿಯೋ ಕ್ಯಾಸೆಟ್ ಇದೆಲ್ಲಾ, ಅದು ಆಮೇಲೆ ಹೇಳುತ್ತೇನೆ. ಕೋಜೆಂಟ್ರಿಕ್ಸ್ ಬಗ್ಗೆ ಡಿಸೆಕ್ಷನ್ ಬರಲಿ ಈ ಸಭೆಯಲ್ಲಿ ಸಿ.ಓ.ಡಿ. ವಿಚಾರಣೆಗೆ ಅವರೇ ಆರ್ಡರ್ ಮಾಡಿದ್ದಾರೆ. ಹಿಂದಿನ ಸರ್ಕಾರದವರು. ಕರೆಯಿಸಿ ಕೇಳಿದೆ. ಅಲ್ಲ ಏನಾಗಿದೆ ಅಂದರೆ ಸಿ.ಓ.ಡಿ. ಗೆ ವಿಪರೀತ ವರ್ಕಲೋಡ್ ಜಾಸ್ತಿಯಾಗಿದೆ. ನಾವು ಕೊಡುತ್ತೇವೆ. ಕ್ರಿಮಿನಲ್ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಆದರೆ ಚಾರ್ಜ್‌ಷೀಟ್ ಹಾಕಿಲ್ಲ.ಇದು ಒಂದು. ಸುಂದರ್ ನಾಯಕ್‌ಗೆ ನಾನಂತೂ ಪ್ರಮೂಷನ್ ಕೊಡಲಿಲ್ಲ. 27-7-94ರಲ್ಲೇ ಪ್ರಮೂಷನ್ ಕೊಟ್ಟಿದ್ದಾರೆ ಸನ್ಮಾನ್ಯ ಹಿರಿಯ ನಾಯಕರಾದ ಶ್ರೀಮಾನ್ ನಂಜೇಗೌಡರ ಗಮನಕ್ಕೆ ತರುತ್ತಾತ ಇದ್ದೇನೆ. ನಾನು ಪ್ರಮೋಷನ್ ಕೊಡಲಿಲ್ಲ. 27-7-94ರಲ್ಲೇ ಪ್ರಮೋಷನ್ ಕೊಟ್ಟಿದ್ದಾರೆ. ಸನ್ಮಾನ್ಯ ವಿರೋದಾಪಕ್ಷದ ನಾಯಕರು ಹೇಳಿದ್ದಕ್ಕೆ ನಾನು ಈ ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಸರಿ ಆಮೇಲೆ ವಿಜಯಕುಮಾರ್ ರವರನ್ನು ಬೆಂಗಳೂರು ಸಿಟಿ ಕಾರ್ಪೋರೇಷನ್‌ಗೆ ಏಕೆ ಹಾಕಿದ್ದಿರಿ? ನಾನೇ ಹಾಕಿದ್ದೇನೆ. ಬೆಂಗಳೂರು ಸಿಟಿ ಕಾರ್ಪೋರೇಷನ್‌ನಲ್ಲಿ ಸ್ವಲ್ಪ ಮಟ್ಟಿಗೆ ಆಡಳಿತ ಸುಧಾರಣೆ ಮಾಡಬೇಕು, ರಾಜು ಪ್ರೇಂಕುಮಾರ್‌ರವರನ್ನು, ರವೀಂದ್ರರವರನ್ನು ಹಾಕಿದ್ದೇವೆ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀವೀರಪ್ಪ ಮೊಯಿಲ್ಲಿಯವರಿಗೆ ಗೊತ್ತಿದೆ ರವೀಂದ್ರ ರವರು ನೀವು ಹೇಳಿದರೂ ಕೇಳುವುದಿಲ್ಲ. ನಾನು ಹೇಳಿದರೂ ಕೇಳುವುದಿಲ್ಲ. ಬಂಗಾರಪ್ಪನವರು ಹೇಳಿದರೂ ಕೇಳುವುದಿಲ್ಲ. ನನ್ನ ತಾಳಕ್ಕೆ ತಕ್ಕಂತೆ ಕುಣಿಯುವ ಅಧಿಕಾರಿಗಳಿಗೆ "ಹುಷಾರ್, ಹರಷಾಡ್".

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : "ನಮ್ಮ ಕಡೆ ನೋಡಿ ರಿಪೋರ್ಟ್ ಮಾಡಬೇಡಿ ನಮಗೆ ಅದೇನೂ ಗೊತ್ತಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಇಲ್ಲ ಇಲ್ಲ, ಕೆಲವು ಪತ್ರಿಕೆಗಳಲ್ಲಿ ಬರೆದು ಬಿಟ್ಟಿದ್ದಾಗಲ್ಲಾ. ಓಡಿದೆ ಇವತ್ತು ಬೆಳಗ್ಗೆ. ಈಗ ಹೇಳಿದ್ರಾಲ್ಲಾ, ಲಂಕೇಶ್, ಅದ್ಯಾವುದೋ ವಾರ್ ನನಗೇನೋ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿಯಲ್ಲಿ ಬಂದು ಬಿಟ್ಟಿದ್ದಾರೆ ಇನ್ನೇನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿತ್ತು. ನಂಜೇಗೌಡರು ಹೇಳಿದರು ನೇಣು ಹಾಕಿಕೊಂಡು ಬಿಡಬೇಕು ಅಂತ. ಇವತ್ತು ಒಂದು ಲಕ್ಷ ಕುಟುಂಬಗಳಿಗೆ ರೆವಿನ್ಯೂ ಸೈಟುಗಳಿಗೆ ಮನೆ ಮನೆಗೆ ಹೋಗಿ ಖಾತ ಕೊಡ ಬೇಕು ಎಂದು ತೀರ್ಮಾನ್ ಮಾಡಿದ್ದೇವೆ. ಇದನ್ನು ಜೀವಂತ ಇಲ್ಲದೆ ಇರುವ ಸರ್ಕಾರ ಮಾಡಿದೆ. ಒಂದು ಲಕ್ಷ ಕುಟುಂಬಗಳಿಗೆ ಮನೆ ಮನೆಗೆ ಹೋಗಿ ಖಾಯಂ ಪಟ್ಟಾ ಕೊಡಬೇಕು ಎಂದು ಹೇಳಿ. ಈಗ ಹಿಂದೆ ನೀವು ಪ್ರಯತ್ನ ಮಾಡಿ ಫೌಂಡೇಷನ್ ಸ್ಟೋನ್ ಹಾಕಿದ್ದೀರಿ. 4ನೇ ಹಂತದ ಕಾವೇರಿ ಕುಡಿಯುವ ನೀರಿನಾ ಯೋಜನೆಗೆ 1070 ಕೋಟಿಗೆ ಕ್ಲಿಯರೆನ್ಸ್ ಬಂದಿದೆ ಏನೋ ಕುಂಟಿಕೊಂಡು ಹೋಗುತ್ತೇವೆ.ಅಷ್ಟು ಸ್ಪೀಡ್‌ನಲ್ಲಿ ಹೋಗುವಷ್ಟು ನಮಗೆ ಶಕ್ತಿ ಇಲ್ಲ, ಹೇಗೂ ಕುಂಟಿಕೊಂಡು ಕುಂಟಿಕೊಂಡು ಹೋಗುತ್ತೇವೆ. ಶ್ರೀ ವಿಜಯಕುಮಾರ್ ನನಗೆ ಗೊತ್ತಿತ್ತು. ಶಿವಮೊಗ್ಗದಲ್ಲಿ ಡಿ.ಸಿ. ಆಗಿದ್ದರು. He is a good officer ಎಂದು ತಿಳಿದುಕೊಂಡು ಕಾಂಪಿಟೆಂಟ್ ಆಫೀಸರ್ ಎಂದು ತಿಳಿದುಕೊಂಡು ಅಲ್ಲಿಗೆ ಹಾಕಿದ್ದೇನೆ. ಅಶೋಕ್ ಕುಮಾರ್ ಮನೋಳಿ. Additional Director of Industries.

ನಾನು ಅವರನ್ನು ಟೂರಿಸಂಗೆ ಹಾಕಬೇಕು ಎಂದು ಇದ್ದೆ. He is a Scheduled Caste Officer. ಪಟೇಲ್‌ರವರು ಏನು ಹೇಳಿದರು. ಶಂಕರಲಿಂಗೇಗೌಡರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರನ್ನು ಡಿಸ್ಟರ್ಬ್ ಮಾಡಿಬೇಡಿ ಎಂದು ಹೇಳಿದರು.

Then I made him Additional Director of Industries. ಇದು ಅಪರಾಧವಾಗಿದ್ದರೆ, ಏನು ಮಾಡುವುದಕ್ಕಾಗುವುದಿಲ್ಲ, ಅಮೇಲೆ ವಂದಿತ ಶರ್ಮ ಎಂದು ಹೇಳಿ ಏನು ಅಪಾದನೆ ಮಾಡಿದರು. ಆ ಬಗ್ಗೆ ರಿಪೋರ್ಟ್ ಕೊಡುತ್ತಿದ್ದೇನೆ ಈ ಸಭೆಗೆ ಅವರು ನನಗೆ ಡ್ರೈ ಏರಿಯಾ ಬೇಕು ಮಕ್ಕಳಿಗೆ ತೊಂದರೆ ಇದೆ. ಎಂದು ಹೇಳಿಕೊಂಡ ಮೇಲೆ ಮಂಡ್ಯಕ್ಕೆ ಅವರನ್ನು ಹಾಕಿದ್ದೇನೆ. She her see lf reprosented. Not on anybody's recommendation.

ಅನಿಲ್ ಕುಮಾರ್ ಎಂಬ ಒಬ್ಬ ವ್ಯಕ್ತಿ, ಅದು ಸ್ವಲ್ಪ ಮಟ್ಟಿಗೆ ಕಾಂಟ್ರವರ್ಸಿ ಅಯಿತು. ಶಾರದಮ್ಮ ಎಂಬುದಾಗಿ ಕೆ.ಪಿ.ಎಸ್.ಸಿ. ಮೆಂಬರ್ ಇದ್ದಾರಂತೆ ಅವರು ನನಗೆ ಗೊತ್ತಿರಲಿಲ್ಲ, ಅವರೊಬ್ಬರು ಎಸ್.ಸಿ. ಅಫೀಸರ್. ಆದರೆ ವಯಸ್ಸಾಗಿದೆ ಅವರಿಗೆ, ಅವರು ಬಂದು ದಯಮಾಡಿ ಬದಲಾವಣೆ ಮಾಡಿಕೊಡಿ ಮೈಸೂರಿನಲ್ಲಿ ಎಲ್ಲಾದರೂ ಹಾಕಿಕೊಡಿ ಎಂದರು I Personally took adecision. ಇದು ಯಾರ ಎಂ.ಎಲ್.ಎ.ಗಳ ಶಿಫಾರಸ್ಸುಗಳಿಂದ ಮಾಡಿರತಕ್ಕಂಥದ್ದು ಅಲ್ಲ, ಆದರೆ ಅಲ್ಲಿ ಏನಾಯಿತು ಗೊತ್ತಾಗಲಿಲ್ಲ, ಜಿಲ್ಲಾಪಂಚಾಯತಿಯ ಅಧ್ಯಕ್ಷರು ಅವರು ಕೂಡ ಷೆಡ್ಯೂಲ್ಡ್ ಕಾಸ್ಟ್ ಹೆಣ್ಣುಮಗಳು ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ ಬೆಂಗಳೂರಿಗೆ ಹಾಕ ಬೇಕೆಂದು ತೀರ್ಮಾನ ಮಾಡಿದೆ ನಾನು ಅದರ ವಾದ ವಿವಾದಕ್ಕೆ ಹೋಗುವುದಿಲ್ಲ ನಡೆದಂತಹ ವಾಸ್ತವಾಂಶ ಏಕೆಂದರೆ ಟೈಮ್ ಇದರ ಮೇಲೆ ಖರ್ಚುಮಾಡುವುದಕ್ಕೆ ಹೋಗುವುದಿಲ್ಲ, ಇನ್ನೂ ಬೇಕಾದಷ್ಟು ಕಾಲವಿದೆ, ಮಾತನಾಡೋಣ, Adoni Syed Saleem has been posted asd Deputy Secretary, PWD, Services.

ಡಾ|| ಜೀವರಾಜ ಆಳ್ವ: ಮಾನ್ಯ ಸಭಾನಾಯಕರೇ ಒಂದು ನಿಮಿಷ ಈಲ್ಡ್ ಅಗಿ, ನನಗೆ ಸ್ವಲ್ಪ ಹೆದರಿಕೆ ಏನಾಗಿದೆ ಏನೆಂದರೆ ಇದು ಆಡಳಿತಾತ್ಮಕ ವಿಷಯ ಜಾತಿ ಅಧಿಕಾರಿಗಳು ಒಳ್ಳೆಯದು ಕೆಟ್ಟದ್ದು ಎಂದು ನಿನ್ನೆನೂ ಬಂತು ನನಗೆ ಅನ್ನಿಸಿತು ಎಲ್ಲೋ ನಾವು ಎಡವಿದ್ದೇವೆಂದು. ಕ್ಷಮಿಸಬೇಕು ಸಭಾನಾಯಕರು, ಇಲ್ಲಿ ಟೀಕೆ ವಿರೋಧಿಪಕ್ಷದಿಂದ ಬಂದಿದೆಯೆಂದೂ ತಿಳಿದುಕೊಂಡರೂ ಕೂಡ ನನ್ನ ಅನಿಸಿಕೆ ಆಡಳಿತದ ಮಟ್ಟದಲ್ಲಿ ನಮ್ಮ ನಾಯಕರದು ತಪ್ಪಾಯಿತು. ಎಂದು ನನಗನಿಸುತ್ತದೆ. ಸತ್ಯವಾಗಿಯೂ ಪುನಃ ನೀವು ಇದನ್ನು ಡಿಸ್ಕ್ಸ್ ಮಾಡಿ ಹೊಗಳಿ ತೆಗಳಿ ಜಾತಿ ಅದನ್ನು ಸ್ವಲ್ಪ ತೇಲಿಸಿ ಉತ್ತರ ಕೊಟ್ಟರೆ ಚೆನ್ನಾಗಿರುತ್ತದೆಂದು ನನ್ನ ಅನಿಸಿಕೆ. with all seriousness and with all sincerity at my command I am submitting to you. Is it right?

ಒಂದೇ ಪ್ರಶ್ನೆ ವೈಸ್‌ಚಾನ್ಸಲರ್ ವೀರೇಶ್ ಏಕಾದರೂ ಜಾತಿಯಿಂದ ಅವರು ಎನ್ನುವ ಪ್ರಶ್ನೆ ಬಂದಾಗ ಕುಸಿದು ನಾನು ಒಬ್ಬ ಗೌರವಾನ್ವಿತ ಉಪಕುಲಪತಿಗಳ ಬಗ್ಗೆ ಪ್ರಶ್ನೆ ಬಂದಾಗ ಬಹಳ ಖಾರವಾಗಿ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಉತ್ತರ ಕೊಡಬಹುದು. ವಿರೋದಪಕ್ಷದ ನಾಯಕರು ಹೇಳಬಹುದು. ಮುಂದಿನ ಪಾಸ್ಟಿರಿಟಿಗೆ ಚಾರಿತ್ರಿಕ ಹಿನ್ನೆಲೆಯೆಂದು ನಾವೇನು ಹೇಳುತ್ತೇವೆ ವಿಧಾನ ಸಭೆಯಲ್ಲಿ ಈ ತರಹ ಗುರುತರವಾದ ಚರ್ಚೆ ನಡೆದಿದ್ದು ಸರಿಯೋ ತಪ್ಪೋ ಎಂದು ಅದು ನಮ್ಮಿಂದಾಗಿರಬಹುದು ಅವರನ್ನು ಏಕೆ ಹಾಕಿದಿರಿ ಎಂದು, ಮಾನ್ಯ ಖರ್ಗೆಯವರು ಬಹಳ ದೊಡ್ಡ ಮಾತು ಹೇಳಿದರು. ಷೆಡ್ಯೂಲ್ಡ್ ಕಾಸ್ಟ್ ಎಂದು ಹೇಳಲಿಕ್ಕೆ ಹೋಗಬೇಡಿ, ಒಳ್ಳೆಯ ಅಧಿಕಾರಿ ಇದ್ದರೆ ಅವರಿಗೆ ಪೋಸ್ಟಿಂಗ್‌ಆಗಲಿ ಎಂದು ಹೇಳಿ. ಇವತ್ತು ಜಾತಿ, ವರ್ಗ ಷೆಡ್ಯೂಲ್ಡ್‌ಕಾಸ್ಟ್ ಈ ಮಾತುಗಳಿಂದ ನಾನು ಕುಸಿಯುತ್ತಾ ಇದ್ದೇನೆ, ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. you are demolishing the argument. It could be a parliamentary skill but ಅಧ್ಯಕ್ಷರ ಹತ್ತಿರ ನಾನು ಕೇಳಿಕೊಳ್ಳುವುದು ಏನೆಂದರೆ ಇದನ್ನು ಸ್ವಲ್ಪ ತೇಲಿಸಿಕೊಂಡು ಹೇಳಿದರೆ ಒಳ್ಳೆಯದು

ಇದು ನನ್ನ ಸಬ್‌ಮಿಷನ್ ಅಷ್ಟೆ, As an ordinary man I submit that this could be skipped.

ಶ್ರೀ ಹೆಚ್.ಡಿ. ದೇವೇಗೌಡ : ಈಗ ಚರ್ಚೆ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾನಾಯಕರೇ ಒಂದು ನಿಮಿಷ ಈಲ್ಡ್ ಆದರೆ.....

ಶ್ರೀ ಹೆಚ್.ಡಿ. ದೇವೇಗೌಡ : ನಿನ್ನೆ ನೀವು ಮಾತನಾಡುವಾಗ ನಾನು ಮಾತೇ ಆಡಲಿಲ್ಲ. ಈಲ್ಡ್ ಆಗುತ್ತೇನೆ ನನಗೇನೂ ಇಲ್ಲ, ಏಕೆಂದರೆ ಅಷ್ಟು ಡಿಸ್‌ಕರ್ಟಸಿ ತೋರಿಸುವುದಕ್ಕಾಗುವುದಿಲ್ಲ ವಿರೋಧಪಕ್ಷದ ನಾಯಕರಿಗೆ. ನಾನು ನಿನ್ನೆ ಇಲ್ಲಿ ಕುಳಿತವನು ಎಷ್ಟೇ ಕಠಿಣವಾದ ಪದಗಳನ್ನು ಪ್ರಯೋಗ ಮಾಡಿದರೂ ಯಾವಾಗಲೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಗೌರವದಿಂದ ರಿಸೀವ್ ಮಾಡಬೇಕು ಎಂದು ರಿಕ್ವೆಸ್ಟ್ ಮಾಡಿದ್ದೇನೆ ನಾನು, That has also gone to the proceedings. ನನ್ನ ಜೀವನದಲ್ಲಿ ಅಷ್ಟಾದರೂ ಬೇಸಿಕ್ ಮಿನಿಮಮ್ ಎಥಿಕ್ಸ್ ಕಲಿತುಕೊಳ್ಳದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ, ಈತನನ್ನು ಸೆಲೆಕ್ಟ್ ಮಾಡಿದ್ದುದು ನಾನೇ, ಏಕೆಂದರೆ ಪಿಡಬ್ಲೂಡಿ ಸೆಕ್ರೆಟರಿಯಾದರೆ ಸ್ವಲ್ಪ ಕಷ್ಟದ ಕೆಲಸ. ಡೆಪ್ಯುಟಿ ಸೆಕ್ರೆಟರಿಯಾದರೆ ಸರ್ವೀಸ್‌ಗೆ ಏಕೆಂದರೆ ತಾವು ಯಾರೋ ಹೇಳಿದಿರಿ 2 ಸಾವಿರ 3 ಸಾವಿರ ಇಂಜಿನಿಯರ್‌ಗಳ ವರ್ಗಾವಾಗಿದೆಯೆಂದು. ನಾನೇ ಒಂದು ಹಂತದಲ್ಲಿ ಸ್ಟೇ ಮಾಡಿದೆ. 1276 ಅಥವಾ 1286 ಸ್ಟೇ ಮಾಡಿದೆ. ನೀವು ಹೇಳಿದಂತಹ ವಿಷಯ ನನ್ನ ಗಮನಕ್ಕೂ ಬಂತು. ಪುನಃ ಅದನ್ನೆಲ್ಲಾ ನೋಡಿರರೆಂದೂ ಹೇಳಿದೆ ನಾನು. ಅದು ನನ್ನ ಗಮನಕ್ಕೆ ಬರದೇ ಆದಂತಹದ್ದು. ಏಕೆಂದರೆ ನಾನು ಸಭೆಯಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಅಸಿಸ್ಟೆಂಟ್ ಇಂಜಿನಿಯರ್ಸ್ ಮತ್ತು ಜೂನಿಯರ್ ಇಂಜಿನಿಯರ್ಸ್‌ಗೆ ಆದಂತಹದ್ದರಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಕಂಡು ಬಂತು ಆದ್ದರಿಂದ ನಾನು ಸ್ಟೇ ಮಾಡಿದೆ. ಪುನಃ ಅದನ್ನು ಮಾಡಿಷ್ಟೆ ಮಾಡಬೇಕಾಯಿತು. ಇರಲಿ ಕೆಲವು ದೋಷಗಳು ಇರಬಹುದು. ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಒಂದು ವಿಷಯ ರಾಮಯ್ಯ ಎನ್ನುವ ಒಬ್ಬ ಸ್ವಜನ ಪಕ್ಷಪಾತ ಮಾಡಿದ್ದಾರೆಂದು ಹೇಳಿದರು. ನಾನು ಯಾವುದಕ್ಕೂ ಸಿಓಡಿ ಎನ್‌ಕ್ವೊಯರಿ ಮಾಡಲಿಲ್ಲ. ಈ ಕೆಲಸಗಳು ಏಕೆ ನಿಂತವು ಎನ್ನುವ ಸನ್ನಿವೇಶಗಳು ಬಂದಾಗ ತಪ್ಪಾಗಿದ್ದರೆ ನಾವು ಶಿಕ್ಷೆ ಮಾಡಿ ಎನ್ನುವ ಮಾತನ್ನು ಈ ಸಭೆಯಲ್ಲಿ ಹೇಳಿದರು. ತಪ್ಪನ್ನೇ ಹುಡುಕಲಿಕ್ಕೆ ಹೋದರೆ ಬೇಕಾದಷ್ಟು ಸಿಗುತ್ತವೆಂದು ನಾನು ಬೇಕಾದಷ್ಟು ಸಭೆಗಳಲ್ಲಿ ಹೇಳಿದ್ದೇನೆ, ಯಾವುದು ಹೊಸದಾಗಿ ಹೇಳಬೇಕಾದ್ದಿಲ್ಲ, ನನಗೆ ಯಾವುದೇ ಪೂಲಿಟಿಕಲ್ ವಿಕ್ಟಿಮೈಸೇಷನ್ ಇಲ್ಲ, ವಿನ್‌ಡಿಕ್ಟೀವ್ ಆಗಿ ತೆಗೆದುಕೊಳ್ಳಬೇಕಾದ್ದಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ಆದರೆ ಏತಕ್ಕೆ ಹೊರಗಡೆ ಎಲ್ಲೂ ಬೇರೆ ಕಡೆ ಆಗಲಿಲ್ಲ, ಪಾಲಿಟಿಕ್ಸ್ ಬೇರೆ ತರಹ ಆಗಿದೆ. ಏಕೆಂದರೆ ದೇವೇಗೌಡರು ಅಲ್ಲಿ ನಿಲ್ಲಿಸವರ್ರೆ ಮಾಡವರ್ರೆ ಅದೆಲ್ಲ ಕಥೆ ಕಟ್ಟಿದರು ನನ್ನ ವಿರುದ್ಧ ಆದರ ಬಗ್ಗೆ ಚರ್ಚೆ ಬೇಡ ಆಗ ನೀವೇ ಒಂದು ಮಾತನ್ನು ಹೇಳಿದ್ದೀರಿ ತಪ್ಪಾಗಿದ್ದರೆ ಶಿಕ್ಷೆ ಕೊಡಿಯೆಂದು.ಆ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಿದೆ, If the House wants I am prepared to order for a COD enquiry. ಯಾರು 1 ಕೋಟಿ 89 ಲಕ್ಷ ರೂಪಾಯಿ dewatering ಕೊಟ್ಟಿದ್ದಾರೋ ಅದರಲ್ಲಿ ಇವರ ಪಾತ್ರ ಹೆಚ್ಚು ಇವರು ರಿಟೈರ್ಡ್ ಆಗಲಿಕ್ಕೆ ನಾಲ್ಕೈದು ದಿನ ಒಂದು ವಾರವಿತ್ತು. ನಾನು ಇವರಿಗೆ ರಿಟೈರ್ಡ್ ಆದ ಮೇಲೆ ಅವರು ನನ್ನ ಸಮಾಜದವರೇ ಇದ್ದಾರೆ ಇದರ ಮೇಲೆ ಕಥೆ ಕಟ್ಟಬಹುದೆಂದು ಹೇಳಿ ಸಸ್ಪೆಂಡ್ ಮಾಡಿದೆ. ಅವರು ಅಡ್ಮಿನಿಸ್ಟೇಟಿವ್ ಟ್ರಿಬ್ಯೂನಲ್‌ಗೆ

ಹೋಗಿ ಸ್ಟೇ ತಂದರು. ಸ್ಟೇ ತೆಗೆದುಕೊಂಡ ಮೇಲೆ ಸ್ಟೇ ಅನ್ನು ಜಾರಿಗೆ ಕೊಡಬೇಕಾಗುತ್ತದೆ. ಅವರ ಸರ್ವೀಸನ್ನು ಎಕ್ಸೆಟೆಂಡ್ ಮಾಡಲಾಯಿತು. ಆ ಪ್ರಿಯಾಂಬಲ್‌ನಲ್ಲಿ ಹೇಳಿದ್ದೇನೆ, ಸಿಓಡಿ ಎನ್‌ಕ್ವೊಯರಿಗೆ ಕೋ ಅಪರೇಷನ್ ಮಾಡುವುದಕ್ಕೆ ಇವರ ಅವಶ್ಯಕತೆ ಇರುವುದರಿಂದ ಇವರನ್ನು ಮುಂದುವರಿಸಬೇಕಾಗಿದೆಯೆಂದು ಗೌರ್ನಮೆಟ್ ಆರ್ಡರನ್ನು ಮಾಡಿದ್ದೇನೆ, ಸ್ಟೇ ಜಾರಿಗೆ ಕೊಡಬೇಕಾಗುತ್ತದೆ ಇಲ್ಲದಿದ್ದರೆ ಕಂಟೆಮ್ಸ್ಟ್ ಆಗುತ್ತದೆ. ಲಾ ಡಿಪಾರ್ಟ್‌ಮೆಂಟ್‌ನವರನ್ನು ಕರೆಯಿಸಿದೆ. ಲಾ ಮಿನಿಸ್ಟರ್ ಕರೆಯಿಸಿ ಚರ್ಚೆ ಮಾಡಿದೆ ಏನು ಮಾಡಬೇಕು ಈಗ ಸ್ಟೇ ಕೊಟ್ಟಿದ್ದಾರೆ ಎಂದು ನಾವು ಕೇವಿಯೆಟ್ ಹಾಕಿದ್ದೇವೆ. ಕೇವಿಯೇಟ್ ಹಾಕಲಿಕ್ಕೆ ಸ್ಟೇ ತಂದಿದ್ದಾರೆ. To complete the enquiry, we need......

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಈಲ್ಡ್ ಆಗಬೇಕು. ಇನ್ನು ಮುಂದೆ ತಾವು ಯಾರು ಸಿಓಡಿ ಮತ್ತು ಸಿಬಿಐ ಈ ರೀತಿಯಾದ ತನಿಖೆಗಳನ್ನು ಎದುರಿಸುವಂತಹ ಕಾಲದಲ್ಲಿ ರಿಟೈರ್ಡ್ ಆದವರ ಮೇಲೂ ಸಹ ಅಥವಾ ರಿಟೈರ್ಡ್ ಆಗುವುದಕ್ಕೆ ಒಂದೆರಡು ದಿವಸ ಇದ್ದಾಗ ಎನ್‌ಕ್ವೊಯರಿಗೆ ಅನುಕೂಲವಾಗುತ್ತದೆಂದು ಹೇಳಿ ಅವರ ಸರ್ವೀಸನ್ನು ಫರ್ದರ್ ಕಂಟಿನ್ಯೂ ಮಾಡುತ್ತೇವೆ, ರಿಟೈರ್ಡ್ ಆದಮೇಲೂ ಸಹ ಎನ್ನುವುದಾದರೆ ಅದೇ ನಿಮ್ಮ ಸರ್ಕಾರದ ಪಾಲಿಸಿಯಾದರೆ ಅದರಲ್ಲಿ ನನ್ನದೇನೂ ಅಭ್ಯಂತರವಿಲ್ಲ, ಇದನ್ನು ಎಲ್ಲರಿಗೂ ಅನ್ವಯ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ಸರ್ಕಾರದ ವಿವೇಚನೆಗೆ ಸೇರಿದ ವಿಷಯ. 1 ಕೋಟಿ 89 ಲಕ್ಷಕ್ಕೂ ಯಾರೋ ಒಂದೆರಡು ಸಾವಿರಕ್ಕೆ ಸಸ್ಪೆಂಡ್ ಮಾಡುವುದಕ್ಕೂ ವ್ಯತ್ಯಾಸವಿದೆ. ಸರ್ಕಾರಕ್ಕೆ ತನ್ನದೇ ಆದಂತಹ ನಿರ್ಣಯ ಮಾಡತಕ್ಕ ಒಂದು ಕನಿಷ್ಠ ಪ್ರಮಾಣದ ವಿವೇಕವಿದೆ ಎಂದು ಅಷ್ಟೇ ಸೂಕ್ಷ್ಮವಾಗಿ ಹೇಳುತ್ತೇನೆ. ಅದು ನಿಮ್ಮ ಸರ್ಕಾರ ಬಂದಾಗ ನೀವು ಪಾಲಿಸಿ ಮಾಡಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರಿಗೂ ಇಲ್ಲಿ ಶಾಶ್ವತವಾಗಿ ಕುಳಿತುಕೊಳ್ಳಲಿಕ್ಕೆ ಆಗುವುದಿಲ್ಲ, ನಾವು ಬಂದವರು ಹೋಗುವುದಕ್ಕೂ ತಯಾರಾಗಿರಬೇಕು. ಇದರಲ್ಲಿ ನನಗೇನೂ ಹೊಸದೇನೂ ಅಲ್ಲ, ಶಾಶ್ವತವಾಗಿ ಕುಳಿತುಕೊಳ್ಳುತ್ತೇನೆಂದು ಹೇಳಿಲ್ಲ, ಮಾನ್ಯ ಖರ್ಗೆಯವರು ಸರಿಯಾಗಿ ಹೇಳಿದಿರಿ. ನಾನು ಇದೇ ಮಾತನ್ನು ಹೋದ ಸಾರಿ ಹೇಳಿದ್ದೆ. ಅದರಲ್ಲಿ ನನಗೇನೂ ಆವೊತ್ತಿನ ಪ್ರೊಸಿಡಿಂಗ್ಸ್ ತೆಗೆದು ನೋಡಿದರೆ ನಾಳ ನೀವು ಇಲ್ಲೆ ಬಂದು ಕುಳಿತುಕೊಳ್ಳಬಹುದು. ವಾಟಾಳ್ ನಾಗರಾಜ್‌ರವರು ಇಲ್ಲಿ ಕುಳಿತುಕೊಳ್ಳಬಹುದು. ಮಹಾರಾಷ್ಟ್ರದಲ್ಲಿ ಯಾರೋ ಒಬ್ಬರು ಲೀಡರ್ ಆಗಿದ್ದವರು ಇಡೀ ಸರ್ಕಾರವನ್ನು ಕಂಟ್ರೋಲ್ ಮಾಡುತ್ತಿಲ್ಲವೇ? ಹೇಗೆ ಬರುತ್ತೋ ಸನ್ನಿವೇಶ ಯಾರಿಗೆ ಗೊತ್ತು? ಅದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಇನ್ನು ತಾವೇನು, ಒಂದೇ ಒಂದು ವಿಷಯ ಹೇಳುತ್ತೇನೆ, ಎಲ್ಲಾ ಇಲಾಖೆಗಳ ಮಾಹಿತಿಗಳನ್ನು ತರಿಸಿ ನೋಡಲಿಕ್ಕೆ ಆಗಲಿಲ್ಲ I must admit my omissions and commissions also. ಷೆಡ್ಯೂಲ್ಡ್ ಕಾಸ್ಟ್‌ನಲ್ಲಿ ಕಾರ್ಯಪಾಲಕರಾಗಿ ಪ್ರಮೋಷನ್ ಕೊಟ್ಟವರು 1994ರ ನವೆಂಬರ್‌ಗೆ, ಅದು ಅಪರೇಷನ್ ನಿಲ್ಲಬೇಕು ಎಂದು ಹೇಳಿದ್ದೀರಿ. ಅದರ ಮೇಲೆ ಕೆಲವರು ಕೋರ್ಟ್‌ಗೆ ಹೋದರು, ಸುಪ್ರೀಂಕೋರ್ಟ್‌ನವರು ಏನು ಹೇಳಿದರು 18 ಪರ್ಸೆಂಟ್ ಕವರ್ ಆಗದಿದ್ದರೆ ಕೊಡುವ ಅವಶ್ಯಕತೆಯಿಲ್ಲವೆಂದು. ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ನಲ್ಲಿ ಒಂದು ಮಾತು ಹೇಳಿದ್ದಾರೆ. ನಾಳೆ ಕೆಟ್ಟ ಹೆಸರು ತರುತ್ತಾರೆ ದೇವೇಗೌಡರು ಮಾಡಿದರು ಎಂದು. Even though it exceeds 18%, I have given the promotion adopting the earlier decision of the previous Government which ought to have ended in November 1994. ಇದರಿಂದ ಇವೊತ್ತು ಎಷ್ಟು ಜನರಿಗೆ ಅಧಿಕವಾಗಿ ಸಿಕ್ಕಿದೆ ಅಂದರೆ 25.78 ಪರ್ಸೆಂಟ್ ಆಗಿದೆ. ಷೆಡ್ಯೂಲ್ಡ್ ಕಾಸ್ಟ್

ಷೆಡ್ಯೂಲ್ಡ್‌ಟ್ರೈಬ್‌ನವರಿಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್‌ನಲ್ಲಿ 25 ಪರ್ಸೆಂಟ್ ಆರ್ಡರ್ ಮಾಡಿದ್ದು ನಾನೇ. ಖರ್ಗೆಯವರು ಹೇಳಿದರು ನಾವು ಮಾಡಿದ್ದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ ಎಂದು ಫಸ್ಟ್ ಟೈಮ್ ಕರ್ನಾಟಕದಲ್ಲಿ 25 ಪರ್ಸೆಂಟ್ ಪ್ರಮೋಷನ್ ಕೊಡಬೇಕೆಂದು ತೀರ್ಮಾನ ಮಾಡಿದ್ದು to fill up the backlog on all direct recruitments. ಅದನ್ನು ಅಷ್ಟೇ ಸೂಕ್ಷ್ಮವಾಗಿ ನಿಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಎಲ್ಲಾ ಡಿವಿಷನ್‌ವೈಸ್ ಮಾಡಿಸಿದ್ದೇನೆ. ಶೆಡ್ಯೂಲ್ಡ್ ಕ್ಯಾಸ್ಟ್ ಎಷ್ಟು ಇದ್ದಾರೆ, ಬ್ಯಾಕ್‌ವರ್ಡ್ ಕ್ಲಾಸ್ ಎಷ್ಟು ಇದ್ದಾರೆ, ಅಲ್ಲಿಂದ ಒಕ್ಕಲಿಗರು ಎಷ್ಟು ಇದ್ದಾರೆ, ಲಿಂಗಾಯಿತರು ಎಷ್ಟು ಇದ್ದಾರೆ, ಅದಷ್ಟೂ ಎಲ್ಲಾ ಮಾಡಿಸಿದ್ದೇನೆ. ಅದನ್ನು ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಕಾಪೀಸ್ ಕಳುಹಿಸಿಕೊಡುತ್ತೇನೆ ನಿಮಗೆ. ಕೆಲವು ಕಡೆ ಸ್ವಲ್ಪ ವೇರಿಯೇಷನ್ ಆಗಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಸರಿಪಡಿಸಲಿಕ್ಕೂ ಸಹ ಪ್ರಯತ್ನ ಮಾಡುತ್ತೇನೆ ಎಂಬ ಆಶ್ವಾಸನೆ ನಿಮಗೆ ಕೊಡುತ್ತೇನೆ. ಏನು ತಾವು ಹೇಳಿದಿರಿ, ಒಂದು ಎರಡುಮೂರು ಜಿಲ್ಲೆಯೊಳಗೆ ಸ್ವಲ್ಪ ನನ್ನ ಮನಸ್ಸಿಗೆ ಸಮಾಧಾನ ಇಲ್ಲ, ಅದನ್ನು ಸರಿಪಡಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದಷ್ಟೇ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತು ಇನ್ನೂ ನಾಲ್ಕು ಮಾಡಿಫೈಡ್ ಆರ್ಡರ್ಸ್ ಇಷ್ಯೂ ಮಾಡಬೇಕು ಎಂದೂ ಮಾಡುತ್ತೇನೆ. ಯಾರು ಈಗ ನಿತ್ಯಾನಂದ ಎನ್ನುವವರನ್ನು ಸೆಕ್ರೆಟರಿ ಮಾಡಿದ್ದೇನೆ, ಅವರಿಗೂ ಹೇಳಿದ್ದೇನೆ, ಎಲ್ಲೆಲ್ಲಿ ಅನ್ಯಾಯವಾಗಿದೆ ಎಂದು ಕಂಡುಬರುತ್ತದೆ, ಪಟ್ಟಿ ಮಾಡಿ ನನಗೆ ಕೊಡಬೇಕು ಎಂದು ಹೇಳಿದ್ದೇನೆ. I have got the list. ಆದರೆ ಚೀಫ್ ಇಂಜಿನಿಯರ್ಸ್ ಲೆವೆಲ್‌ನಲ್ಲಿ ಆಗಿಲ್ಲ, ಎಸ್.ಇ.ಗಳ ಲೆವೆಲ್‌ನಲ್ಲಿ ಆಗಿಲ್ಲ.

ಆದರೆ ಎಕ್ಸಿಕ್ಯೂಟಿವ್ಸ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ಸ್ ಲೆವೆಲ್‌ನಲ್ಲಿ ಸ್ವಲ್ಪ ಇಂಬ್ಯಾಲೆನ್ಸ್, ಆಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಷ್ಟನ್ನೂ ನಾನು ಈ ಸಂದರ್ಭದಲ್ಲಿ ತಿಳಿಸಿ, ಸನ್ಮಾನ್ಯ ಅಧ್ಯಕ್ಷರೇ, ಇನ್ನು ಕರ್ನಾಟಕದ ಲಾ ಅಂಡ್ ಆರ್ಡರ್ ಬಗ್ಗೆ ಕೂಡ, ಇಲ್ಲಿ ರಾಜ್ಯದಲ್ಲಿ ಕಾನೂನು ಇದೆಯೇ? ರಾತ್ರಿ ಹೊತ್ತು ಹೆಣ್ಣುಮಕ್ಕಳು ತಿರುಗಾಡಲಿಕ್ಕೆ ಸಾಧ್ಯವಿದೆಯೇ? ಎಂದು ಕೇಳಿದ್ದಾರೆ. ಮಟ್ಕಾ ಮತ್ತು ಸಿಂಗಲ್ ಡಿಜಿಟ್ ಲಾಟರಿಯನ್ನು ನಿಲ್ಲಿಸಿದ್ದೇವೆ. ನಿಲ್ಲಿಸಿದೆ ಅಂದರೆ ಪೂರ್ಣ ತೆಗೆದುಹಾಕಲಿಕ್ಕೆ ಸಾಧ್ಯವಿಲ್ಲದೇ ಇರಬಹುದು, ಬಹುತೇಕವಾಗಿ ಅದರಲ್ಲಿ

ಯಶಸ್ಸು ಕಂಡಿದ್ದೇನೆ ಎಂದು ಅನ್ನಿಸುತ್ತದೆ, ಇನ್ನೂ ಅಲ್ಲೂಇಲ್ಲೂ ಇರಬಹುದು. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರನ್ನು ಹೋಗಿಬಿಟ್ಟು ಅವನನ್ನು ದುಡ್ಡಿನ ಸಮೇತ ಹಿಡಿದರೆ administrative tribunalನವರು ಸ್ಟೇ ಕೊಟ್ಟುಬಿಟ್ಟರು. ಸ್ಟೇ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ? ಇರಲಿ ಅದೆಲ್ಲಾ ಕೋರ್ಟ್ ವಿಷಯ. ಅದರ ಬಗ್ಗೆ ನಾನು ಕಾಮೆಂಟ್ ಮಾಡಲಿಕ್ಕೆ ಹೋಗುವುದಿಲ್ಲ, ಆಮೇಲೆ ಆಂಟೀ ಗೂಂಡಾ ಆಕ್ಟ್‌ನಲ್ಲಿ 1992ರಲ್ಲಿ 9 ಜನರನ್ನು ವಶಕ್ಕೆ ತೆಗೆದುಕೊಂಡಿದ್ದೇನೆ. 1993ರಲ್ಲಿ ಒಬ್ಬರನ್ನು ತೆಗೆದುಕೊಂಡಿದ್ದೇನೆ, 1994ರಲ್ಲಿ 19 ಜನರನ್ನು ತೆಗೆದುಕೊಂಡಿದ್ದಾರೆ. 1995ರಲ್ಲಿ 10 ಜನರನ್ನು ತೆಗೆದುಕೊಂಡಿದ್ದೇವೆ. ಇದು ಒಂದು ವರದಿಯನ್ನು ಸೂಕ್ಷ್ಮವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ಪಿ.ಸಿ.ಆರ್. ಕೇಸ್ ನಮ್ಮ ಕಾಲದಲ್ಲಿ ಏನು ನಡೆಯಿತು ಎಂಬುದನ್ನು ಹೇಳಬೇಕಾಗುತ್ತದೆ. ಜೂನ್ 1994ರ ವರೆಗೆ ಹೇಳುವುದಾದರೆ, ಜನವರಿ - 107, ಫೆಬ್ರವರಿ - 70, ಮಾರ್ಚ್ - 110, ಏಪ್ರಿಲ್ - 105, ಮೇ - 67, ಜೂನ್ - 87 ಹೀಗೆ ಒಟ್ಟು 537. ಜೂನ್30, 1995ರವರೆಗೆ 649. ಆಮೇಲೆ ಇದು ಅಟ್ರಾಸಿಟೀಸಲ್ಲಿ ಪಿ.ಸಿ.ಆರ್. ಆಕ್ಟ್ ಒಳಗಡೆ ಹಾಕಿರತಕ್ಕಂಥಾದ್ದು 228 ಜನವರಿಯಿಂದ ಜೂನ್ 94ರವರೆಗೆ ಒಂದು ಲೆಕ್ಕ ತೆಗೆದುಕೊಂಡರೆ 228 ಆಗಿದೆ. ಜೂನ್

1995ರವರೆಗೂ 217ಕ್ಕೆ ಪಿ.ಸಿ.ಆರ್. ಆಕ್ಟ್‌ನಲ್ಲಿ ಕೇಸ್ ರಿಜಿಸ್ಟರ್ ಮಾಡಿದ್ದೇವೆ. ಇನ್ನು ಬಾಂಬ್ ಬ್ಲಾಸ್ಟ್, ಇದು ಲೋಕಲ್ ಬಾಂಬ್ ಬ್ಲಾಸ್ಟ್‌ಗೆ ಸಂಬಂಧಪಟ್ಟಹಾಗೆ 1993ರಲ್ಲಿ 20 ಆಗಿದೆ. 1994ರಲ್ಲಿ 24 ಆಗಿದೆ. 1995ರ ಈ ಆರು ತಿಂಗಳು ಎಂದು ಇಟ್ಟುಕೊಳ್ಳೋಣ, ಅಲ್ಲಿ 3 ಆಗಿದೆ, ಬಾಂಬ್ ಬ್ಲಾಸ್ಟ್. ಆಮೇಲೆ ಎಸ್.ಪಿ., ಡಿ.ವೈ.ಎಸ್.ಪಿ., ಸಿ.ಐ.ಪಿ.,ಗಳ ವರ್ಗ - 1989ರಿಂದ ತಂದಿದ್ದೇನೆ. ಅದರ ಅವಶ್ಯಕತೆ ಇಲ್ಲ, ಕೊನೆಯದು ಹೇಳುತ್ತೇನೆ ನಾನು. 1994-95ರಲ್ಲಿ 619, 1995-96ರಲ್ಲಿ 547, 1993-94ರಲ್ಲಿ 613, 1992-93ರಲ್ಲಿ 468. ಯಾವುದು ಎಸ್.ಪಿ., ಡಿ.ವೈ.ಎಸ್.ಪಿ. ಮತ್ತು ಸರ್ಕಲ್ ಇನ್ಸ್‌ಪೆಕ್ಟರುಗಳು ಇಷ್ಟು ಮಾತ್ರ ತೆಗೆದುಕೊಂಡಿದ್ದೇನೆ, ಬಾಕಿ ಫಿಗರ್ಸ್ ತರಲಿಲ್ಲ, ಇವಿಷ್ಟನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. No of persons died in police firing. Up to June 1993 : 4:Up to June 94; 7; up to June 95 : 2. No. of cases registered under communal clashes : Up to June 93 : 73 ; Up to June 94 : 34; and up to June 95 : 144.

ಇದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ, During the current year, 1960 rowdies were arrested and there were totally 5000 rowdies counted on the basis of the communal incidents and other activities.

ಅದನ್ನು ಯಾವ ಯಾವ ಜಿಲ್ಲೆಗೆ ಎಷ್ಟು? 1,940 ಜನ ರೌಡಿಗಳು ಅರೆಸ್ಟ್ ಆಗಿದ್ದಾರೆ ಎಂದು ಫಿಗರ್ಸ್ ಕೊಟ್ಟಿದ್ದೇವೆ. Comparative crime figures ಬೇರೆ ಬೇರೆ ರಾಜ್ಯಕ್ಕೆ ಹೋಲಿಸುವ ಅವಶ್ಯಕತೆ ನಮ್ಮ ರಾಜ್ಯದಲ್ಲಿ 1,819 ಇದೆ ಮಹಾರಾಷ್ಟ್ರದಲ್ಲಿ ಪಾಪ್ಯುಲೇಷನ್ ಜಾಸ್ತಿ ಇದೆ, ಬಾಂಬೆಯಲ್ಲಿ ಸಿಟಿ ಪ್ರಾಬ್ಲಮ್ ಜಾಸ್ತಿ ಇರುತ್ತದೆ, 8613 ಇದೆ, ಉತ್ತರ ಪ್ರದೇಶದಲ್ಲಿ 21,459 ಇದೆ, ರಾಜಸ್ಥಾನದಲ್ಲಿ 3,573 ಇದೆ. ಈ ಒಂದು ಫಿಗರ್ಸ್ ತರಿಸಿದ್ದೇನೆ, ನಾನು. ಇವಿಷ್ಟು ಲಾ ಅಂಡ್ ಆರ್ಡರ್ ಬಗ್ಗೆ ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇನ್ನು ಕೊಜೆಂಟ್ರಿಕ್ಸ್ ಬಗ್ಗೆ ಹೇಳುವುದಾದರೆ ಕಿಕ್ ಬ್ಯಾಕ್, ಕಿಕ್ ಬ್ಯಾಕ್, ಎಂದು ಹೇಳುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಎನ್ರಾನ್‌ದು ಶುರು ಆಗುವವರೆಗೂ ಈ ಕೊಜೆಂಟ್ರಿಕ್ಸ್ ಬಗ್ಗೆ ಯಾರೂ ಮಾತೇ ಆಡಲಿಲ್ಲ. ನಂಜೇಗೌಡರು ನನ್ನ ಮೇಲೆ ಬಹಳ ಖಾರವಾಗಿ ಮಾತನಾಡಿದರು, ಪೇಪರ್‌ನಲ್ಲಿ ನಾನು ಏನೋ ಇಂಪ್ರೊಪ್ರೈಟರಿ ಮಾಡಿದೆ ಎಂದು ಹೇಳಿ. If I have done it, I must accept it.

ಅದು ಏನೂ ದೊಡ್ಡ ವಿಷಯ ಅಲ್ಲ, ಆದರೆ ಒಂದು ಏನಾಯಿತು ಎಂದರೆ ನಾನು ಸಿಂಗಾಪುರಕ್ಕೆ ಹೋದಾಗ ಕ್ವೆಶ್ಚನ್ ಅಂಡ್ ಆನ್ಸರ್ ಸೆಷನ್‌ನಲ್ಲಿ, ಯಾರು ಯಾರು ಬರುತ್ತಾರೆ, ಟಾಪ್ ಕಂಪೆನಿ ಹೆಡ್ಸ್, ಎಕ್ಸಿಕ್ಯೂಟಿವ್ ಹೆಡ್ಸ್ ಅವರೆಲ್ಲಾ ಕೇಳಿದರು. ನಿಮ್ಮಲ್ಲಿ ಅಧಿಕೃತ ವಿರೋಧ ಪಕ್ಷ ಬಿ.ಜೆ.ಪಿ. ಇದೆ, ಅವರು ವಿರೋಧ ಮಾಡುತ್ತಿದ್ದಾರೆ, ನೀವು ಕೊಜೆಂಟ್ರಿಕ್ಸ್ ಅನ್ನು ಕ್ಯಾನ್ಸಲ್ ಮಾಡುತ್ತೀರಾ ಎಂದು. ಆ ಸಂದರ್ಭದಲ್ಲಿ ಅವರು ಕೇಳಿದಾಗ ನಾವು ಮಾಡುವುದಿಲ್ಲ ಎಂದು ಹೇಳಬೇಕಾಯಿತು. ಹೊರತು ಅದರಿಂದ ನನಗೆ ಏನೂ ಬಾಯಿ ಚಪಲ ತೀರಿಸಿಕೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ, ಮಹಾರಾಷ್ಟ್ರದಲ್ಲಿ ಒಂದು ಸಮಸ್ಯೆ ಬಂತು. ಅದರಿಂದ ಅಲ್ಲಿ ಹೇಗೆ ಎನ್ರಾನ್ ತೆಗೆದುಹಾಕಿದ್ದಾರೆ. ಹೇಗೆ ಬಂದು ನಾವು ಇನ್‌ವೆಸ್ಟ್ ಮಾಡುವುದು ನಿಮ್ಮ ದೇಶದಲ್ಲಿ ಎಂದು ಕೇಳಿದರು. ಆ ಸಂದರ್ಭದಲ್ಲಿ ನಾನು ಅವರಿಗೆ ಕನ್ವಿನ್ಸ್ ಮಾಡಿದೆ. ಲೆಫ್ಟ್ ಪಾರ್ಟೀಸ್ ಪಾರ್ಲಿಮೆಂಟಿನಲ್ಲಿ, ವಿರೋಧ ಮಾಡುತ್ತಿದ್ದರು. ನಾನೂ ಕೂಡ ಪಾರ್ಲಿಮೆಂಟ್ ಮೆಂಬರ್ ಆಗಿದ್ದೆ, ಜನತಾ ದಳದಲ್ಲಿ ಕೆಲವರು ವಿರೋಧ ಮಾಡುತ್ತಿದ್ದರು. ಆದರೆ ಇವತ್ತು ಲೆಫ್ಟ್ ಪಾರ್ಟೀಸ್ ವೆಲ್‌ಕಂ ಮಾಡುತ್ತಿದ್ದಾರೆ.

Certain areas reservations may be there. Agriculture sector, food sectorನಲ್ಲಿ ನಮಗೂ ಸ್ವಲ್ಪ ವಿರೋಧ ಇದೆ. ಆದರೆ ಹೋಲ್‌ಸೇಲ್ ನಾವು ವಿರೋಧ ಮಾಡುವುದಿಲ್ಲ. ಆದ್ದರಿಂದ ನೀವು ನಮ್ಮ ದೇಶದಲ್ಲಿ ಏನೋ ಅನಾಹುತ ಆಗುತ್ತದೆ ಎಂದು ಹೇಳಿ ಮಿಸ್ಟೇಕ್ ಮಾಡಿಕೊಳ್ಳಬೇಕಾಗಿಲ್ಲ, ಇನ್‌ವೆಸ್ಟ್ ಮಾಡಬಹುದು ಎಂದು ಹೇಳಿದೆ. ಪಾರ್ಲಿಮೆಂಟ್ ಎಲೆಕ್ಷನ್ ಹತ್ತಿರ ಬರುವುದರಿಂದ ಈ ತರಹ ಸಮಸ್ಯೆಗಳು ಬರುತ್ತವೆ. ಆದ್ದರಿಂದ ನೀವು ಇದರಲ್ಲಿ ಏನೋ totally the whole thing is going to be reserved. ಎಂದು ಅಭಿಪ್ರಾಯ ಇಟ್ಟುಕೊಳ್ಳಬೇಕಾಗಿಲ್ಲ ಎಂದು ಹೇಳಿದೆ ನಾನು. ಸನ್ಮಾನ್ಯ ಅಧ್ಯಕ್ಷರೇ, ಇದರೊಳಗೆ ನಾನೇನು ಇಂಟರ್‌ನ್ಯಾಷನಲ್ ಲೀಡರ್ ಅಲ್ಲ, ನ್ಯಾಷನಲ್ ಲೀಡರ್ ಅಲ್ಲ, ನನ್ನ ರಾಜ್ಯಕ್ಕೆ ಏನಾದರು ಆತಂಕ ಆಗಬಾರದು ಎಂದು ಹೇಳಿದೆ, ಮತ್ತೆ ಇನ್ನೇನೂ ಇಲ್ಲ, We are not going to oppose it and even though the recognised opposition is saying this, we are not going to oppose. ಎಂದು ಹೇಳಿದೆ.

ಈಗ ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷ ನಾಯಕರು ಹೇಳಿದರು, ಜಯಪಾಲ್‌ರೆಡ್ಡಿ ಯಾವ ಪಾರ್ಟಿ ಮುದ್ನಾಳ್ ಯಾವ ಪಾರ್ಟಿ? ಬಿ.ಜೆ.ಪಿ.ಯವರು ವಿರೋಧ ಮಾಡಿ ಅವರು ಇನ್ನೂ ಒಂದು ಹೆಜ್ಜೇ ಮುಂದೆ ಹೋಗಬಹುದಾಗಿತ್ತು. ಗಾಡ್ಗೀಳ್‌ಯಾವ ಪಾರ್ಟಿ? ಈ ದೇಶದ ರಾಜಕಾರಣ ನನಗೂ ಸ್ವಲ್ಪ ಅರ್ಥವಾಗುತ್ತದೆ. It is not so simple to demolish a particular individual leadership so many forces work in this country.ಅಷ್ಟಕ್ಕೇ ಬಿಡುತ್ತೇನೆ. ಅಷ್ಟು ಸುಲಭ ಅಲ್ಲ ಈ ದೇಶದ ರಾಜಕಾರಣ. ಈ ದೋಶದ ರಾಜಕಾರಣ ಸಾಕಷ್ಟು ನೋಡಿದ್ದೇನೆ ನಾನು. ಸನ್ಮಾನ್ಯ ಅಧ್ಯಕ್ಷರೇ ಖೈನಾರ್ ಬರಬೇಕಾಗಿತ್ತಂತೆ. ಮುಂದೆ ಅದಕ್ಕೂ ಬರುತ್ತೇನೆ. ಇಲ್ಲಿ ಒಬ್ಬರು ಖೈನಾರ್ ಹುಟ್ಟ ಬೇಕಾಗಿತ್ತು ಎಂದು ಹೇಳಿದರು, ಇಲ್ಲಿ ಒಬ್ಬರು ಕೈನಾರ್ ಬರುತ್ತಾರೆ. Sir, on power cost of production ಬಗ್ಗೆ.

ಹೋದ ಸಲ ಉಪನಾಯಕರು ಹೇಳುತ್ತಾರೆ, ಸಭೆಗೆ ಸಬ್‌ಮಿಟ್ ಮಾಡಿದ್ದೇನೆ ಎಂದು ಕೊಜೆಂಟ್ರಿಕ್ಸ್ ಗೌಡ, ಕೊಜೆಂಟ್ರಿಕ್ಸ್ ಗೌಡ, ನನಗೆ ಅದರ ಹೆಸರೂ ಉಚ್ಚಾರ ಮಾಡಲಿಕ್ಕೆ ಆಗುವುದಿಲ್ಲ. on the 4th Unit, the cost of production per unit is Rs.2.50 paise and the Cogentrix has given an ofer for Rs.2.50 paise.

6.30 ಪಿ.ಎಂ.

ಸದನದಲ್ಲಿ ಚರ್ಚೆಯಾಗಲಿ. ನಾವು ಹರಿಬರಿಯಲ್ಲಿ ಒಪ್ಪಿಕೊಳ್ಳುವುದಿಲ್ಲ ಎಂದು ಸನ್ಮಾನ್ಯ ವಿರೋಧಿ ಪಕ್ಷದ ನಾಯಕರು ಹೇಳಿದ್ದಾರೆ, ಇಲ್ಲಿ ತೆರೆಮರೆಯಲ್ಲಿ ಚರ್ಚೆ ನಡೆಯಲಿ. ಯಾರು ಬೇಡವೆನ್ನುತ್ತಾರೆ? ಆದರೆ ಇಲ್ಲಿ ನನ್ನ ಹೆಸರು ತೆಗೆದು ಕೊಜೆಂಟ್ರಿಕೆ ಗೌಡ' ಎಂದು ಹೇಳಿದ್ದಾರೆ ಎಂದು ನಾನು ಹೇಳಿದೆ. The cost of production of the JV Unit Raichur Thermal 200 capacity. This is what figures that may officers have given to me. Cogentrix is 259. This is number one. After ten years, it is going to be scaled down.

ಬಾಕಿ ವಿವರವೆಲ್ಲಾ ಆಮೇಲೆ ನೀವು ಮಾತನಾಡಿ. ಇಲ್ಲಿಗೆ ನಾನು ನಿಲ್ಲಿಸುತ್ತೇನೇ. ಇದರಲ್ಲಿ ಕಿಕ್‌ಬ್ಯಾಕ್‌ಎಂದರೇನು? ಸರಿಯಾಗಿ ಇಂಗ್ಲೀಷ್ ಓದುವುದಕ್ಕಾಗುತ್ತದೆಯಾದರೂ ಸರಿಯಾಗಿ ಅರ್ಥವಾಗುವುದಿಲ್ಲ ನನಗೆ. ಗೌಡರು ಪಾರ್ಲಿಮೆಂಟರಿ ಡಿಬೇಟನ್ನು ತುಂಬಾ ಓದುತ್ತಾರೆ. What is kickback, ಎಂದು ನನಗೆ ಅರ್ಥವಾಗಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಅರ್ಥ ಮಾಡಿಕೊಡಲೇನು?

ಶ್ರಿ ಹೆಚ್.ಡಿ. ದೇವೇಗೌಡ : ನೀವು ಹೇಳಿದರೆ ನನಗೆ ಖುಷಿಯಾಗುತ್ತದೆ. ಏಕೆಂದರೆ ನಿಮ್ಮ ಬಾಯಿಯಿಂದ ಬರುವಾಗ ಸ್ವಲ್ಪವಾದರೂ ಮಿಸಿಂಗ್ ಫೂಲ್ ಆಗಿರುತ್ತದೆ. ನಾನು ಏನಾದರೂ ಮಾಡಿದ್ದರೆ ಶರಣಾಗುತ್ತೇನೆ.

ಶ್ರೀ ಹೆಚ್.ಎಸ್. ನಂಜೇಗೌಡ : ಮತ್ತೊಮ್ಮೆ ಚರ್ಚೆಗೆ ಇದು ಬರುತ್ತದದಲ್ಲಾ?

ಶ್ರೀ ಹೆಚ್.ಡಿ. ದೇವೇಗೌಡ : ಬರಲಿ ಈ ಸದನದಲ್ಲಿ ನಾನು ಒಂದು ಮಾತನ್ನು ಹೇಳಿದೆ. ನಿಷ್ಪಕ್ಷಕವಾಗಿ ಮಾತನಾಡೋಣ. 253 ಎಂ.ಓ.ಯುಗೆ ಸೈನ್ ಆಗಿದೆ. ಮೂರೂವರೆ ವರ್ಷಗಳಿಂದ ಸೈನ್ ಮಾಡಿಕೊಂಡು ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ ಇವತ್ತು ಕೆಲವು ರಂಗದಲ್ಲಿ ಪ್ರಗತಿಯಾಗಬೇಕಾಗಿದೆ. ಬರೇ ಎಂ.ಓ.ಯುಗೆ ಸೈನ್ ಮಾಡಿಕೊಂಡು ಅವವರು ಮನೆಯಲ್ಲಿ ಕುಳಿತಿಕೊಂಡರೆ ಏನು ಪ್ರಯೋಜನವಾಗುತ್ತದೆ? ಅಅದಕ್ಕೆ ಒಂದು ಡೆಡ್‌ಲೈನ್ ಕೊಡುತ್ತೇನೆ ಎಂಬ ಒಂದು ಮಾತನ್ನು ನಾನು ಹೇಳಿದೆ. I will give a open call to those people who have signed the MOU to come and submit teir proposals, ಎಂದು ಹೇಳಿದೆ ನಾನು. ಈ ಸದನದಲ್ಲಿ ಹೇಳಿದ್ದೇನೆ.

ನಾಲ್ಕು ಸಾರಿಯೋ ಐದು ಸಾರಿಯೋ ನಾನು ಡೆಲ್ಲಿಗೆ ಹೋದೆ. ಏನು ನೀರು ಬರುವುದಿಲ್ಲ, ಮಾಡಲ್ಲ, ಪ್ರತಿ ಸ್ಟೇಜ್. ಹೀಗಾಗಿ at one stage ಹೇಗೆ ಬಾಂಬೆಯಲ್ಲಿ ಟಾಟಾಗೆ ಕೊಟ್ಟಿದ್ದರಲ್ಲಾ, ಕಲ್ಕತ್ತಾದಲ್ಲಿ ಗೋಯಾಂಕಾ ಅವರಿಗೆ ಕೊಟ್ಟಿದ್ದಾರೋ, ಹಾಗೆ ಬೆಂಗಳೂರಿನಲ್ಲಿ ಒಂದಾದರೂ ತಲೆ ತಪ್ಪಿಸಿಕೊಳ್ಳೋಣ, ನಮಗೆ ಕುಡಿಯುವ ನೀರಿನ ಸಮಸ್ಯೇ ಬಹಳ್ ಇದೆ, ಜನರು ನಮ್ಮನ್ನು ಬೈಯ್ಯುತ್ತಾರೆ ಈ ಸದನದಲ್ಲೇ ಹಿಂದೆ 20 ದಿವಸಸಭೆ ನಡೆದಾಗ ಮೂರು ಸಾರಿ ವಿದ್ಯುಚ್ಛಕ್ತಿ ಹೋಯಿತು. ಆದ್ದರಿಂದ ಈ ಆಫೀಸರ್‌ಗಳದ್ದು ಏನು ಎಂದರೆ ಭಾರಿ ಇರುವುದೆಲ್ಲಾ ನಾವು ಡೀಲ್‌ಮಾಡಬೇಕಾದರೆ ಒಂದು ಗೈಡ್‌ಲೇನ್ಸ ಗವರ್ನಮೆಂಟ್ ಆಫ್ ಇಂಡಿಯಾ ದಿಂದ ಗೊತ್ತಾಗದೆ ನಾವು ಮಾಡುವುದಕ್ಕೆ ಆಗುವುದಿಲ್ಲ ಎಂದು This is the problem. ಈಗ 5,050 ಕೋಟಿ ಇವರು ವಿರೋಧ ಮಾಡಿದ ತಕ್ಷಣ, 4000 ಸಾವಿರ ಚಿಲ್ಲರೆ ಕೋಟಿ ಬಂದುಬಿಡುತ್ತದೆ. It is in your own period it has come.

ಇದು ಹೇಗೆ ಇಂಟರ್‌ಪ್ರಿಟೇಕ್ಷನ್, ಏನೋ ಈ ದೇಶದಲ್ಲಿ ನೀವು ನಾನು ಇಬ್ಬರೂ ಸೇರಿ, ಬಂಗಾರಪ್ಪನವರೂ ಸೇರಿಕೊಂಡಿರಬೇಕು ಎಂದು ಕಾಣುತ್ತದೆ ಇದರಲ್ಲಿ, 5,050 ಕೋಟಿಗೆ ಒಂದು ಪ್ರಿಲಿಮಿನರಿ ಪ್ರಾಜೆಕ್ಟ್ ರಿಪೋರ್ಟನ್ನು ಅವರು ಕೊಟ್ಟಿದ್ದಾರೆ. When once the Power Purchase Agreement, that too, also is a draft agreement, when it was signed,

4700 ಕೋಟಿಗೆ ಮತ್ತೆ ರಿಡಕ್ಷನ್ ಆಗುತ್ತದೆ. It is not now ನಾನು ಹೇಳಿ ಮಾಡಿಸಿದ್ದೇನೆ ಅಂತೂ ಇಲ್ಲ. It may go futher down. ಈಗ ಆರು ಕ್ಲಾಸನ್ನು ರಿಮೂವ್ ಮಾಡಿದ್ದಾರೆ. ನಾವು ಚರ್ಚೆ ಮಾಡಿದಮೇಲೆ; ನಮ್ಮ ಚೇರ್ಮನ್‌ರು ಹೋಗಿದ್ದಾರೆ, ನಮ್ಮ ಎನರ್ಜಿ ಸೆಕ್ರೆಟರಿಯವರು ಹೋಗಿದ್ದಾರೆ. 143 ಅಬ್ಜಕ್ಷನ್ಸ್ ರೈಸ್ ಮಾಡಿದ್ದೇವೆ. I do not know where we stand. It may further go down. Bidding infact they invited my chairman, ನಾನು ಹೇಳಿದ ಹೋಗುವುದು ಬೇಡ ಎಂದು. ಏಕೆಂದರೆ ಅದಕ್ಕೂ ಒಂದು ನಾಳೆ ಕಥೆಯನ್ನು ಕಟ್ಟುತ್ತಾರೆ. ನಾಳೆ ಅಲ್ಲೇನೋ ಬಿಡ್ಡಿಂಗ್ ಮೇಲೆ ಮ್ಯಾನ್ಯುಪಲೇಟ್ ಮಾಡುವುದಕ್ಕೆ ಕಳುಹಿಸಿದ್ದರು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಎಂದು ಬರುವುದು ಬೇಡ ಎಂದು ಬಿಡ್ಡಿಂಗ್ ಮಾಡಿದಮೇಲೆ ಬರಲಿ; ಬಂದಮೇಲೆ ನಮಗೆ ಕೇಂದ್ರಸರ್ಕಾರದವರು ಕಳುಹಿಸುತ್ತಾರೆ. 'At that stage we will take a decision. Let us not interface' ಎಂದು ನಾನು ಹೇಳಿದೆ. ಇರುವ ವಿಷಯ ಸದನಕ್ಕೆ ಹೇಳಿ ಅಷ್ಟಕ್ಕೆ ನಾನು ನಿಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನು

ಸ್ವಲ್ಪ ಮಾನ್ಯ ಮೊಯಿಲಿಯವರು, ಖರ್ಗೆಯವರು ಹೇಳಿದಂಥ ಮಾತು ನನ್ನ ಮನಸ್ಸಿಗೆ ನೋವಾಗಿದೆ. ನಿಜ, ಅವತ್ತು ಆಗಬಾರದಾಗಿತ್ತು. ಅವತ್ತು ಜನತಾದರ್ಶನದ ಕಾರ್ಯ ಕ್ರಮ ಅಲ್ಲ, ನಿಮಗೇ ಗೊತ್ತಿದೆ, ಬೇರೆ ಬೇರೆ ಪ್ರೋಗ್ರಾಮ್‌ಗಳಿಗೆ ಬಂದಿದ್ದರು. ನಾನು ಮುಂದೆಯೇ ಹೇಳುತ್ತೇನೆ. I do not know anything else, ಫೋನ್ ಮಾಡಿ ನೀವು ಬರಲೇಬೇಕು, ರಾಮವಿಲಾಸ್ ಪಾಸ್ವಾನ್ ಬರುತ್ತಾರೆ ಎಂದು ಹೇಳಿದರು.

ಮೂರು-ನಾಲ್ಕು ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಬಂದಿದ್ದೇ ಒಂದೂವರೆ ಗಂಟೆ ತಡವಾಗಿ. ಇದರಲ್ಲಿ ನಿಮ್ಮ ಮನಸ್ಸಿಗೆ ನೋವು ಮಾಡಿ ನಾನು ಅಲ್ಲಿ ಮಾಡುವ ಕ್ರಾರ್ಯಕ್ರಮ ಏಕೇ ಸಭೆಯಲ್ಲಿ ಭಾಷಣ ಮಾಡುವುದಿಲ್ಲ; ಇದು ಸೀಯಲ್ಲ ಎಂದು ನಾನು ಹೇಳಿದೆ. ನಮ್ಮ ಇಂಟರೆಸ್ಟಫಿಕ್ಸ್ ಮಾಡಬೇಕಾಗುತ್ತದೆ.47 ವರ್ಷಗಳಿಂದ ನಾವು ಹೇಗೆ ಎಲ್ಲಾ ರಾಜಕೀಯ ಪಕ್ಷಗಳು ನಡೆದುಕೊಂಡಿದ್ದೇವೆ ಎಂದು ಅದು ಒಟ್ಟಿಗೆ ನೀವು ಅಲ್ಲಿ ಸಭೆ ಮಾಡಿದ್ದರೆ ಚೆನ್ನಾಗಿತ್ತು, ಇಲ್ಲಿ ಏಕೆ ಮಾಡುವುದಕ್ಕೆ ಹೋದಿರಿ? ಈ ಮಾತನ್ನು ಸಭೆಯ ಒಳಗೇ ನಾನು ಹೇಳಿದ್ದೇನೆ. ಅದು ಏನೆ ಇರಲಿ, ಸನ್ಮಾನ್ಯ ಅಧ್ಯಕ್ಷರೇ, ತಾವು ಮತ್ತು ಎಲ್ಲ ವಿರೋಧ ಪಕ್ಷಗಳ ನಮ್ಮ ಹಿರಿಯ ಮುಖಂಡರುಗಳು ಮಾನ್ಯ ಯಡಿಯೂರಪ್ಪನವರು ಸೇರಿ ಹೇಳಿದಮೇಲೆ, 16ನೇ ತಾರೀಖು ನಾವು ಒಂದು ಅರ್ಡರನ್ನು ಇಷ್ಯು ಮಾಡಿದ್ದೇವೆ., ಎಂ.ಎಲ್.ಎ. ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಬೇಕು ಎಂದು ಹೇಳಿ. ಅದಾದ ಮೇಲೆ ಎಂ.ಪಿ.ಗಳ ಸಭೆ ನಡೆದಾಗ 'ಇದು ನಮಗೇನೂ ಗೊತ್ತಾಗುವುದಿಲ್ಲ' ಎಂದು ಹೇಳಿದರು ಅವರನ್ನೂ ಸೇರಿಸಿ ಮತ್ತು ಜಿಲ್ಲಾ ಎಂ.ಎಲ್.ಎ,, ಎಂಪಿಗಳು, ಮಿನಿಷ್ಟರುಗಳು ಇವರನ್ನು ಚೇರ್‌ಮನ್ ಮಾಡಿ ತಾಲ್ಲೂಕು ಪಂಚಾಯಿತಿಗೆ ಚೇರ್‌ಮನ್ ಮಾಡಿ, ಇನ್ನೊಂದು ಡಿಸ್ಟ್ರಿಕ್ಟ ಕಮಿಟಿಯನ್ನು ಕಾನ್ಸಟ್ಟ್ಯೂಟ್ ಮಾಡಿದ್ದೇವೆ. ಅದಾದಮೇಲೆ ಏನು 20ಅಂಶ ಕಾರ್ಯಕ್ರಮದ್ದು, ಜಿಲ್ಲಾ ಎಂ.ಎಲ್.ಎ. ಅಧ್ಯಕ್ಷತೆಯೊಳಗೆ ಇರಬೇಕೆಂದು ಅದನ್ನು ಕೂಡ ಒಂದು ಸರ್ಕಾರಿ ಆಜ್ಞೆಯನ್ನು ಇಷ್ಯೂ ಮಾಡಿದ್ದೇವೆ. ಇದಾದಮೇಲೆ ಬೆಳಿಗ್ಗೆ ಫ್ಲಾಗ್ ಕಮಿಟಿ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು, ನಾನು ಅಲ್ಲಿ ಕುಳಿತುಕೊಂಡು ಕೇಳುತ್ತಿದ್ದೆ. ನಾನು ಪ್ರಿಪರೇಷನ್ ಮಾಡಿಕೊಳ್ಳತ್ತಿರುವಾಗ ಮಧ್ಯೆ ನಮ್ಮ ಉಪನಾಯಕರು ಎದ್ದು ಸ್ವಲ್ಪ ಸಂಘರ್ಷ ಆಯಿತು. ಅವರೇನು ನೀವು ನಿಲ್ಲಿಸಿದ್ದೀರಿ ಎಂದು ಬೇಸರ ಮಾಡಿಕೊಂಡು 'ನಾನು ಮಾತೇ ಆಡುವುದಿಲ್ಲ' ಎಂದರು ಅದನ್ನು ನಾನು ಕೇಳಿಸಿಕೊಳ್ಳುತ್ತಿದ್ದೆ; ಯಾರ್‍ಯಾರು ಏನೇನು ಮಾತನಾಡುತ್ತಾರೆ ಎಂದು ಗವರ್ನಮೆಂಟ್ ಆಫ್ ಇಂಡಿಯಾದವರು ಒಂದು ಅರ್ಡರನ್ನು ಇಷ್ಯುಮಾಡಿದ್ದಾರೆ; ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು. ನಾನು ನಮ್ಮ ಮಿನಾಕ್ಷಿಸುಂದರಂ ಅವರಿಗೆ ಕಳುಹಿಸಿದ್ದೇನೆ. ನೀವು ಏನಾದರೂ ಚೇಂಜ್ ಮಾಡುವುದಕ್ಕೆ ಸಾಧ್ಯವಾದರೆ, ಈ ಸಾರಿಯಿಂದ ಎಂ.ಎಲ್.ಎಗಳಿಗೆ ಪ್ರತಿ ತಾಲ್ಲೂಕಿನಲ್ಲಿ ಫ್ಲಾಗ್ ಹಾಯಿಸ್ಟ ಮಾಡುವುದಕ್ಕೆ ಮೋಡಿ ಎಂದು ಹೇಳಿದ್ದೇನೆ. ನೀವು ಇದನ್ನು ನೋಡಿಸಿದ್ದೀರಿ, ಕ್ಯಾಬಿನೇಟ್‌ಗೆ ಬಂದು ಹಾಗೆಯೇ ನಿಂತು ಹೋಗಿದೆ. ಆ ಫೈಲನ್ನು ಕೂಡ ನಾನು ತರಿಸಿ ನೋಡಿದೆ. ಅದು ಯಾವುದಾದರೂ ಅಫೀಷಿಯಲ್ಸ್ ಸ್ಟೇಟಸ್ ಇದ್ದವರು ಮಾಡುವುದಕ್ಕೆ ಬರುತ್ತದೇಯೋ ಹೊರತು ಬೇರೆಯವರು ಮಾಡಬಾರದು ಎಂದು ಒಂದು ಕೋಡ್‌ನ್ನು ಮಾಡಿದ್ದಾರೆ. ಆದ್ದರಿಂದ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥಾದ್ದು ಇದೆ. ನನಗೆ ಈ ಸಾರಿ ಕೊಡಬೇಕು ಎಂಬ ಆಸೇ ಇತ್ತು, ಆದರೆ ನಮ್ಮ ಅಧಿಕಾರಿಗಳು ಹೇಳಿದರು ಗವರ್ನಮೇಂಟ್ ಆಫ್ ಇಂಡಿಯಾದ ರೂಲ್‌ಗೆ ವಿರುದ್ಧವಾಗಿ ಹೋಗುವುದಕ್ಕೆ ಆಗುವುದಿಲ್ಲ ಎಂದು. ಇದು ನೂರೇ ವಿಷಯ. 20 ಪಾಯಿಂಟ್ ಪ್ರೋಗ್ರಾಮ್,

ಮತ್ತೊಂದು ರಿಲೀಫ್ ಕಮಿಟಿಗೆ ಎಂ.ಎಲ್.ಎ.ಗಳನ್ನು ಚೇರ್ಮನ್ ಮಾಡಿದ್ದೇವೆ. ಡಿಸ್ಟ್ರಿಕ್ಟ ಮಿನಿಸ್ಟರನ್ನು ಡಿಸ್ಟ್ರಿಕ್ ರಿಲೀಫ್ ಕಮಿಟಿಗೆ ಮಾಡಿದ್ದೇವೆ., ಆದರೆ ಫ್ಲಾಗ್ ಹಾಯಿಸ್ಟಿಂಗ್ಗೆ ಮಾಡುವುದಕ್ಕೆ ಇದು ಆತಂಕ ಇದೆ. ಎನ್ನತಕ್ಕನಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ನಾನು ಎಲ್ಲೂ ಕೇಂದ್ರ ಸರ್ಕಾರ ನಮಗೆ ದುಡ್ಡು ಕೊಟ್ಟಿಲ್ಲ ಎಂದು ಹೇಳಿಲ್ಲ, ಇದನ್ನು ರಾಜಕೀಯ ಮಾಡುವುದಕ್ಕೆ ನಾನು ಹೋಗಿಲ್ಲ. ಎಲ್ಲಿಯಾದರೂ ಎಂದು ಕಡೆ ನಾನು ಹೇಳಿದ್ದೇನೆ. ಎಂದು ನಿಮ್ಮ ಕಡೇಯಾರಾದರೂ ಹೇಳುವುದಿದ್ದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂಕದರೆ ಇರುವ ಪರಿಸ್ಥಿತಿ ಪ್ರಕಾರ ನಮಗೆ ಫಿಕ್ಸ್ ಮಾಡಿದ್ದಾರೆ, 39.6 ಕೋಟಿ ಎಂದು ಫಿಕ್ಸ್ ಮಾಡಿದ್ದಾರೆ; 10ನೇ ಫೈನಾನ್ಸ ಕಮಿಷನ್ನಲ್ಲಿ ಅದನ್ನು ನಾವು ಬಳಕೆ ಮಾಡಿಕೊಳ್ಳಬೇಕು, ಅಷ್ಟೆ. ಭೇಟಿಯಾದ ಮೇಲೆ ಅವರು ಏನು ಹೇಳಿದರು ಎಂದರೆ, ಎಂಪ್ಲಾಯ್‌ಮೆಂಟ್ ಓರಿಯಂಟಡ್ ಸ್ಕೀಮ್, ನೀವು ಎಷ್ಟು ಬೇಕಾದರೂ ಖರ್ಚು ಮಾಡಿ, ನಾನು ಹಣ ತೊಡುತ್ತೇನೆ ಎಂದು ಇದರ ಬಗ್ಗೆ ನೀವು ಅನಾವಶ್ಯಕವಾಗಿ ವರಿ ಮಾಡಿಕೊಳ್ಳುವುಕದು ಬೇಡ ಎಂದು ಹೇಳದರು. ಅಷ್ಟೇ ಅಲ್ಲ, I went to Rural Development Minister Jagannath Mishra ಅವರು ಹೇಳಿದರು ಈಗ ಮೊದಲನೆಯ ಕಂತು 128 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು. This is the 2nd instalment also we a re going to release. ಇದರಲ್ಲಿ ಪಾಲಿಟಿಕ್ಸ ಮಾಡುವುದಕ್ಕೆ ನನಗೆ ಇಷ್ಟ ಇಲ್ಲ, ಏಕೆಂದರೆ ಕೇಂದ್ರಸರ್ಕಾರದವರು 80 ಪರ್ಸೆಂಟ್ ಕೊಡುತ್ತಾರೆ, ನಾವು 20 ಪರ್ಸೆಂಟ್ ಕೊಡುತ್ತೇವೆಂದು ಅದನ್ನು ಹೇಳಿದಾಗ ಬೆಳಿಗ್ಗೆ ಇಲ್ಲಿ ತರ್ಕ ಆಯಿತು. ನಾನು ಅದನ್ನು ನಮ್ಮದ್ದೇ ಎಂದು ವಾದ ಎಲ್ಲೂ ಮಾಡಿಲ್ಲ, ಈಗ ನಾನು 16ಜಿಲ್ಲೆಗಳನ್ನು ರಿವ್ಯೂ ಮಾಡಿದ್ದೇನೆ. ತಾವು ಇದ್ದೀರಿ, ತಮ್ಮ ಜಿಲ್ಲೆಯೊಳಗೆ. ಆಕ್ಷನ್ ಪ್ಲಾನ್ ಇಲ್ಲದಿದ್ದರೂ ಕೆಲಸ ಮಾಡಿ ಎಂದು ನಾನು ನಿಮ್ಮದುರಿಗೇ ಹೇಳಿದ್ದೇನೆ. ಆದ್ದರಿಂದ ಅನೇಕ ಕಡೇ ನಮ್ಮ ಶಾಸಕರು ಪ್ರೆಸೆಂಟ್ ಆಗಿದ್ದಾರೆ, ಎಂ.ಪಿ.ಗಳು ಪ್ರೆಸೆಂಟ್ ಆಗಿದ್ದಾರೆ. ಇವತ್ತು ಎಲ್ಲ ಕಡೇ 8 ಕೋಟಿ, 10ಕೋಟಿ. 12 ಕೋಟಿ, ಕೆಲವು ಕಡೆ ಮಲೆನಾಡು ಡೆವಲಪ್‌ಮೆಂಟ್‌ದ್ದು ಹಣ ಇದೆ. ಬಾರ್ಡರ್ ಡೆವಲಪ್‌ಮ್‌ಟ್‌ನದ್ದು ಹಣ ಇದೆ.

In addition to Minor Irrigation and other normal Schemes. Employment Affirmation ನಲ್ಲಿದೆ; Soil Conservation ನಲ್ಲಿದೆ. ಡಿಸ್ಟ್ರಿಕ್ಟ್ ಸೇಕ್ಟರ್‌ನ ಎಲ್ಲಾ ಹಣವನ್ನೂ ರಿಲೀಸ್ ಮಾಡಿದ್ದೇವೆ. ಆದ್ದರಿಂದ ಹಣ ಇಲ್ಲ ಎನ್ನುವ ಪ್ರಶ್ನೆ ಇಲ್ಲ. ಇನ್ನು ಆಕ್ಷನ್ ಪ್ಲಾನ್ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ಬಿಟ್ಟುಬಿಡಿ, ಆಯಾ ತಾಲ್ಲೂಕಿನಲ್ಲಿ ಶಾಸಕರು ಏನು ಹೇಳುತ್ತಾರೆ, ಅದರಂತೆ ನೀವು ಕೆಲಸ ಶುರು ಮಾಡಿ ಎಂದು ಹೇಳಿದ್ದೇವೆ. ಪ್ರತಿಯೊಂದು ಕಡೆಯಲ್ಲೂ ಬೆಳಿಗ್ಗೆ ಜನತಾ ಸಂದರ್ಶನ ಮಾಡಿದರೆ, ಮಧ್ಯಾಹ್ನ ಎಲ್ಲಾ ಅಧಿಕಾರಿಗಳನ್ನೂ ಕರೆದು ರಿವ್ಯೂ ಸಭೆ ಮಾಡ್ಡಿನೆ. ಆದುದರಿಂದ, ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಿಲ್ಲ. ಯಾವ ಯಾವಾಗ, ಎಲ್ಲೆಲ್ಲಿ, ಎಷ್ಟೆಷ್ಟು ಕೆಲಸ ಪ್ರಾರಂಭ ಮಾಡಿದ್ದೆ, ಮತ್ತು ಎಷ್ಟು ಪೇಮೆಂಟ್ ಆಗಿದೆ ಎನ್ನುವುದನ್ನು ಕೊಡುತ್ತೇನೆ. ಆಮೇಲೆ ಕುಡಿಯುವ ನೀರಿನ ಬಗ್ಗೆ ನಾನು ಎಲ್ಲವನ್ನೂ ಓದುವುದಕ್ಕೆ ಹೋಗಲಿಲ್ಲ, ಒಟ್ಟಿನಲ್ಲಿ ಸಾಕಷ್ಟು ಹಣ ಇದೆ. ಇಷ್ಟು ಮಾತ್ರ ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ರೂರಲ್‌ವಾಟರ್ ಸಪ್ಲೈ. ಕುಡಿಯುವ ನೀರಿಗೆ ಸ್ಟೇಟ್ ಸೆಕ್ಟಾರ್‌ನಲ್ಲಿ 21 ಕೋಟಿ 43 ಲಕ್ಷ ರೀಲಿಸ್ ಮಾಡಿದ್ದೇವೆ. ಇದರಲ್ಲಿ 9 ಕೋಟಿ ಖರ್ಚುಮಾಡಿದ್ದಾರೆ. ಸೆಂಟ್ರಲ್ ಮಾಡಿದ್ದೇವೆ. ಇದರಲ್ಲಿ ಇದುವರೆಗೆ 3 ಕೋಟಿ 72 ಲಕ್ಷ ಖರ್ಚು ಮಾಡಿದ್ದಾರೆ. ನಾವು ಅಧಿಕಾರಿಗಳಿಗೆ ಹೇಳಿದ್ದೇವೆ, ಮಳೆ ಬಿದ್ದರೂ, ಹೈಸ್ಪೀಡ್ ರೀಗ್ಸನ್ನೂ ಬಾಡಿಗೆಗೆ ತೇಗೆದುಕೊಳ್ಳಿ,

ಕೊಟೇಷನ್ ಕರೆಯುವುದಕ್ಕೆ ಹೋಗಬೇಡಿ, ಹಿಂದಿನ ವರ್ಷ ಏನು ಕೊಟ್ಟಿದ್ದಾರೆ, ಅದೇಪ್ರಕಾರ ಈ ವರ್ಷವೂ ತೆಗೆದುಕೊಂಡು ಕೆಲಸ ಮಾಡಿ ಎಂದು ಬರವಣಿಗೆಯಲ್ಲಿ ನಿರ್ದೇಶನ ಕೊಟ್ಟಿದ್ದೇವೆ. ಇನ್ನೂ ಬರಗಾಲದ ಬಗ್ಗೆ ಬಿಡುಗಡೆ ಮಾಡಿರುವುದು 9 ಕೋಟಿ 30 ಲಕ್ಷ. ಇದರಲ್ಲಿ ಇದುವರೆಗೂ ಖರ್ಚಾಗಿರುವುದು 331 ಲಕ್ಷ, ಇನ್ನೂ ಬ್ಯಾಲೆನ್ಸ ಇದೆ. ಇದರಲ್ಲಿ ಹಣದ ಕೊರತೇ ಇಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಳೆ ಬಿದ್ದರೂ ಕೆಲಸ ನಿಲ್ಲಿಸಬೇಡಿ ಎಂದು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾಧ್ಯವಾದರೆ, ಇದುವರೆಗೂ ಎಷ್ಟು ಮಾಡಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ತಮಗೆ ಒಂದು ಪಟ್ಟಿಯನ್ನೇ ಕೊಟ್ಟಿದ್ದೇವೆ. ಅದನ್ನು ಓದಿಕೊಳ್ಳಿ. ತಾವು ಏನೇನೂ ಮಾಡಿಲ್ಲವೆಂದು ಹೇಳಿದಿರಿ. ಅದರಲ್ಲಿ ಬರಗಾಲ ಎಂದು ಬರೆದಿಲ್ಲ. ಯಾವಯಾವ ಕೆಲಸಗಳು ಎಂಬುದನ್ನು ಹೇಳಿದೆ. ಬಹುಶಃ ಮಾನ್ಯ ನಂಜೇಗೌಡರು ವಿರೋಧ ಪಕ್ಷದಲ್ಲಿ ನನಗಿಂತ ಹೆಚ್ಚು ಕೆಲಸ ಮಾಡಿದ್ದಾರೆಂದು ಕಾಣುತ್ತೆ. ಬರಗಾಲ ಬಂದಾಗ, ವಿರೋಧ ಪಕ್ಷದಿಂದ ತಾವು ಡೆಲಿಗೇಷನ್ ಹೋಗಿದ್ದೀರಿ, ಬಹಳ ಸಂತೋಷ. ಅದಕ್ಕೆ ನಮ್ಮದೇನೂ ಅಡ್ಡಿ ಇಲ್ಲ ಆದರೆ, ಮೊದಲನೇ ಬಾರಿಗೆ ಹೊಸ ಸಂಪ್ರದಾಯವನ್ನು ಹಾಕಿದ್ದೀರಿ. ಇನ್ನೂ ಏನಾದರೂ ಇಲ್ಲಿ ನಾವು ಅಧಿಕಾರಕ್ಕೆ ಬಂದೆವು, ಮಳೆ ಹೆಚ್ಚು ಬಂದರೆ, ರಿಲೀಸ್ ಮಾಡೋಣ. ಆಮೇಲೆ, ಹೋಯಿತು ಎಂದು ಹೇಳುತ್ತಾರೆ. ಆದರೆ, ಮಹಾರಾಷ್ಟ್ರದಲ್ಲಿ, ರೈತರು ದನಗಳಿಗೆ ಮೇವಿಲ್ಲದೆ ಕಷ್ಟದಲ್ಲಿದ್ದಾರೆಂದು, ಕಬ್ಬನ್ನು ಮೇವಾಗಿ ಪರಿವರ್ತನೆ ಮಾಡಿದ್ದಾರೆ. ನಾಲ್ಕು ನೂರು ರೂಪಾಯಿ ಕೊಟ್ಟು ರೈತರು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದಿರಿ. ನಾನು ಬಾಂಬೆ ಮುಖ್ಯ ಕಾರ್ಯದರ್ಶಿಯವರಿಗೆ ಫ್ಯಾಕ್ಸ್ ಮೆಸೇಜ್ ಕಳುಹಿಸಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಪ್ರಕೃತಿ ಯಾವುದಾದರೂ ಪಕ್ಷದ ಮೇಲೆ ಅವಲಂಬಿಸುತ್ತದೆಯೇ? ನಾವು ಬಂದಾಗ ಬರ ಬಂತು ಎಂದು ಹೇಳುತ್ತಾರೆ. ಮಹಾರಾಷ್ಟ್ರದಲ್ಲಿ ಭೂಕಂಪ ಆದಾಗ ಯಾರು ಬಂದರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ನಾವು ಹೇಳುವುದಿಲ್ಲ, ನಿಮ್ಮ ಪಾರ್ಟಿಯ ಶಾಸಕರೇ ಹೇಳುತ್ತಿದ್ದಾರೆ. ಜನತಾ ಸರ್ಕಾರ ಯಾವಾಗ ಬರುತ್ತದೆ, ಆಗ ಬರಗಾಲ. 1984ರಲ್ಲಿ ಬರಗಾಲ, 1988ರಲ್ಲಿ ಬರಗಾಲ ಈಗ ಅಧಿಕಾರಕ್ಕೆ ಬಂದಿರಿ, ಮತ್ತೆ ಬರಗಾಲ.

ಶ್ರೀ ಹೆಚ್.ಡಿ. ದೇವೇಗೌಡ : ಈಗ ಮಳೆಯೂ ಬರುತ್ತಾ ಇದೆ. ನಮಗೆ ಇನ್ನೂ ಕೆಲವು ತಾಲ್ಲೂಕುಗಳಿಂದ ವಿವರಗಳು ಬರಬೇಕಾಗಿದೆ. ನಾನು ಇದರ ಬಗ್ಗೆ ಹೆಚ್ಚು ಹೇಳುವುದಿಲ್ಲ, ಕಾರಣ ಬೇರೆಯಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಹೆಚ್ಚು ಚರ್ಚೆ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬರಗಾಲ ಕಾಮಗಾರಿ ಬಗ್ಗೆ ಸದನಕ್ಕೆ ಸ್ವಲ್ಪವಾದರೂ ವಿವರ ಕೊಡಿ. ನಮ್ಮ ಅವಿಶ್ವಾಸ ಸೂಚನೆಯಲ್ಲಿ ಬಹಳ ಪ್ರಾಮುಖ್ಯವಾಗಿ ಬರಗಾಲ ಕಾಮಗಾರಿಗೆ ದುಡ್ಡುಕೊಟ್ಟಿಲ್ಲ ಮತ್ತು ಖರ್ಚು ಮಾಡಿಲ್ಲ ಎಂಬುದೂ ಒಂದು. ಮೂವತ್ತೊಂಭತ್ತುವರೆ ಕೋಟಿ ರೂಪಾಯಿಗಳಲ್ಲಿ ಏನಾದರೂ ಬಿಡುಗಡೆ ಮಾಡಿದ್ದೀರಾ, ಎಷ್ಟು ಖರ್ಚು ಮಾಡಿದ್ದಾರೆ ಎನ್ನತಕ್ಕ ಅಂಕಿಅಂಶ ಕೊಟ್ಟರೆ ಸಾಕು.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಈಗ ತಾನೇ ಹೇಳಿದೆ. 9 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೇನೆ. ಅದರಲ್ಲಿ 3 ಕೋಟಿ 77 ಲಕ್ಷ

ಖರ್ಚಾಗಿದೆ ಎಂದು ಹೇಳಿದ್ದೇನೆ. ಮಳೆ ಬಿದ್ದಿರತಕ್ಕ ತಾಲ್ಲೂಕುಗಳಲ್ಲೂ ಕೆಲಸ ಮಾಡಿ. ಇನ್ನೂ ನೀರಿಗೆ ತೊಂದರೆ ಇದೆ, ಅಂಡರ್ ಗ್ರೌಂಡ್ ವಾಟರ್ ಹೆಚ್ಚಾಗಬೇಕೆಂದು ಹೇಳಿದ್ದೇನೆ. ಇದಕ್ಕೆ ಸರ್ಕಾರದ ಆದೇಶ ಕೊಟ್ಟಿದ್ದೇವೆ. ಇದಕ್ಕಿಂತ ಮತ್ತೆ ಹೆಚ್ಚೇನೂ ಇಲ್ಲ, ಶಾಸಕರು ಹೇಳಿದರೂ ಮಾಡಲಿಲ್ಲ, ಅಧಿಕಾರಿ ದುರ್ವತನೆ ಮಾಡಿದ್ದಾರೆಂದು ಹೇಳಿದರೆ, ಅಂತಹ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಬರಗಾಲದ ಬಗ್ಗೆ ಪ್ರತ್ಯೇಕವಾದ ಚರ್ಚೆ ಮಾಡಬೇಕೆಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ ಮತ್ತು ಇಲ್ಲಿಯೂ ಕೂಡ ಅನೇಕ ಸದಸ್ಯರು ಹೇಳಿದ್ದಾರೆ. ಆಳುವ ಪಕ್ಷದವರು, ವಿರೋಧ ಪಕ್ಷದವರೂ ಈ ವಿಷಯವನ್ನು ಪ್ರತ್ಯೇಕವಾಗಿ ಚರ್ಚೆ ಮಾಡಿದ ಮೇಲೆ, ತಾವು ವಿವರವಾಗಿ ಉತ್ತರ ಕೊಡುವುದಕ್ಕೆ ಸುಲಭವಾಗುತ್ತದೆ. ಇವತ್ತು ಸಾಂದರ್ಭಿಕವಾಗಿ ಪ್ರಸ್ತಾಪವಾಗಿದೆ. ಆದ್ದರಿಂದ, ನೀವು ಅಂಕಿಅಂಶ ಮತ್ತೊಂದು ವಿವರವಾಗಿ ಹೇಳುವುದಕ್ಕ ಸಾಧ್ಯವಾಗಲಾರದು. ಈ ವಿಷಯ ಪ್ರತ್ಯೇಕವಾಗಿ ಚರ್ಚೆಗೆ ಬರುತ್ತದೆಂದು ಅನೇಕ ಜನ ಮಾನ್ಯ ಸದಸ್ಯರು ಅದರ ಮೇಲೆ ಬೆಳಕು ಚೆಲ್ಲಲಿಲ್ಲ, ಈ ವಿಚಾರವನ್ನು ಇವರು ಕೇಳಬಾರದು ಅಥವಾ ಅವರು ಉತ್ತರ ಕೊಡಬಾರದು ಎನ್ನುವುದಕ್ಕೋಸ್ಕರ ಹೇಳುತ್ತಾ ಇಲ್ಲ, ಇಲ್ಲಿ ಪ್ರತ್ಯೇಕವಾಗಿ ಚರ್ಚೆಯಾಗಲಿ, ಅಮೇಲೆ ಉತ್ತರ ಕೊಡಬೇಕು. ಅನೇಕ ಮಾನ್ಯ ಸದಸ್ಯರು, ಹಲವಾರು ವಿಷಯಗಳನ್ನು ಮಾತನಾಡುತ್ತಾರೆ. ಆಗ, ನೀವು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರು ಸೂಕ್ತವಾಗಿ ನೆನಪು ಮಾಡಿಕೊಟ್ಟರೆ, ಎರಡು ಕಡೆಯವರಿಗೂ ಅನುಕೂಲವಾದೀತು ಎಂದು ನನ್ನ ಭಾವನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಹೇಳಿದ್ದುದು ಅಷ್ಟೇ ಅಲ್ಲ, ಎಲ್ಲರೂ ಇದನ್ನೇ ಹೇಳಿದ್ದಾರೆ. ಅದಕ್ಕೋಸ್ಕರವೇ ಈ ಅಧಿವೇಶನವನ್ನೂ ಕರೆದಿದ್ದು. ರೂಲ್ 69ರ ಕೆಳಗಡೆ ಮಾನ್ಯ ಖರ್ಗೆಯವರು ಇದನ್ನು ತೆಗೆದುಕೊಳ್ಳಬೇಕೆಂದು ಮೂವ್ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆಯಾಗುತ್ತದೆ. 21ನೇ ತಾರೀಖು ಸೇರಿದಾಗ, ಬೇಕಾದರೆ ರೆವಿನ್ಯೂ ಡಿಪಾರ್ಟ್‌ಮೆಂಟ್ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ನನ್ನದೇನೂ ಅಡ್ಡಿ ಇಲ್ಲ, ನಾನು ಅಡ್ಡಿ ಬರುವುದೂ ಇಲ್ಲ, ಅಷ್ಟು ಹೊತ್ತಿಗೆ, ತಾಲ್ಲೂಕು ವೈಸ್, ಎಷ್ಟೆಷ್ಟು ಹಣ ಖರ್ಚಾಗಿದೆ, ಏನೇನು ಕೆಲಸಗಳಾಗಿದೆ ಎಂಬ ವಿವರಗಳನ್ನು ಸಭೆಯ ಮುಂದೆ ಇಡುತ್ತೇನೆ. ಬೇಕಾದರೆ ದಿನವೆಲ್ಲಾ ಚರ್ಚೆಯಾಗಲಿ. I am prepared to produce all necessary documents. There is nothing to hide. ಸದನಕ್ಕೆ ಮುಚ್ಚಿಡುವುದು ಏನೂ ಇಲ್ಲ, ಹಾಗೆ ಮಾಡುವುದಾದರೆ, ಈ ವ್ಯವಸ್ಥೆಗೆ ತಿಲಾಂಜಲಿ ಅರ್ಪಿಸಿದ ಹಾಗೆ ಆಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರದ ಮುಖ್ಯಕಾರ್ಯದರ್ಶಿಯವರಿಗೆ ದಯಮಾಡಿ ಕಳುಹಿಸಿಕೊಡಿ ಎಂದು ಫೋನ್ ಮಾಡಿದೆವು. ಕೆಲವು ಕಡೆ ಹೆಚ್ಚು ಕಬ್ಬು ಇರುವುದರಿಂದ, ಕಬ್ಬನ್ನು ಕೊಂಡು ರೈತರನ್ನು ಉಳಿಸಿಕೊಳ್ಳುವುದಕ್ಕಾಗಿ, ರೈತರ ದನಕರುಗಳಿಗೆ, 400ರೂಪಾಯಿಗಳಿಗೆ ಮೇವಾಗಿ ಕೊಡುತ್ತಿದ್ದಾರೆ ಎಂದು ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅಲ್ಲಿ ಆ ರೀತಿ ಇಲ್ಲ, ಹಿಂದಿನ ವರ್ಷ ಮತ್ತು ಅದರ ಹಿಂದಿನ ವರ್ಷ ಶರದ್ ಪವಾರ್ ಅವರು ಮುಖ್ಯಮಂತ್ರಿ ಇದ್ದಾಗ, 400 ರೂಪಾಯಿಗಳಿಗೆ ತೆಗೆದುಕೊಂಡು, ಕೆಲವು ಏರಿಯಾದಲ್ಲಿ ನಾವು ಮಾಡಿದ್ದೆವು. ಈ ಸಾರಿ ಮಾತ್ರ ಮಾಡಲಿಲ್ಲ, This is the fax sent by the Chief Secretary of Maharashtra Govt.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೇನು ಪತ್ರ ಬಂದಿದೆ, ನಾನೂ ಕೂಡ ಅವರಿಂದ ಉತ್ತರವನ್ನು ತರಿಸಿದ್ದೇನೆ. ಹಿಂದಿನ ಸರ್ಕಾರ ಎಂದರೆ, ಹೋದವರ್ಷ

ಮಳೆ ಇಲ್ಲದೆ ಒಣಗಿ ಹೋಗಿತ್ತು. ಅದನ್ನು ಈ ರೀತಿ ಮೇವಾಗಿ ಖರೀದಿ ಮಾಡುವುದಕ್ಕೋಸ್ಕರ, 400 ರೂಪಾಯಿಗಳಿಗೆ ಈ ಸರ್ಕಾರ ಬಂದಮೇಲೆ ತೀರ್ಮಾನ ಮಾಡಿ ಪರಿಹಾರ ಕೊಟ್ಟಿದ್ದಾರೆ ಎಂದು ಹೇಳಿರುವುದು ನನ್ನ ಹತ್ತಿರವೂ ಇದೆ. ಇದರ ಕಾಪಿಯನ್ನೂ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ಪೈಸೆಯನ್ನೂ ಕೊಟ್ಟಿಲ್ಲ, ಹೋದ ಸರ್ಕಾರ ಕೊಟ್ಟಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಅವರಲ್ಲಿ ಒಂದು ಕಳಕಳಿಯಿಂದ ಮನವಿ ಮಾಡಿಕೊಂಡೆ. ಈಗಾಗಲೇ ಯಾರು ಆ ಬೀದರ್ ಸಹಕಾರಿ ಸಂಘದವರು ಕಬ್ಬನ್ನು ತೆಗೆದುಕೊಂಡಿದ್ದಾರೆ. ಆ ಫ್ಯಾಕ್ಟರಿಯವರು ಅದೇ ಸುಮಾರು 10 ಕೋಟಿ ರೂಪಾಯಿ ಆಗುತ್ತದೆ. ಅದಕ್ಕೆ ಅವರ ಹತ್ತಿರ ಹಣ ಇಲ್ಲ. ತೊಗರಿಗೆ ಯಾವ ರೀತಿಯಲ್ಲಿ ಪ್ರೋತ್ಸಾಹ ಬೆಲೆ ಕೊಟ್ಟಿದ್ದೀರಿ ಅದೇ ರೀತಿಯಲ್ಲಿ ಕೊಡಿ ಎಂದು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಖರ್ಗೆಯವರೇ, ತಾವು ಬಹಳ ಬುದ್ಧಿವಂತರಿದ್ದೀರಿ. ತಾವು ಹೆಚ್ಚು ಅನುಭವಸ್ಥರಿದ್ದೀರಿ. ನಾನು ಆ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ತೊಗರಿ ವಿಷಯವೇ ಬೇರೆ ಅಲ್ಲಿ ಸುಮಾರು 70 ಕಂಪನಿಗಳು ಯಾರು ಡ್ರಗ್ಸ್ ಪೆಸ್ಟಿಸೈಡ್ಸ್ ಕೊಟ್ಟರು ಅದು ಅಡಲ್ಟ್‌ರೇಟೆಡ್ ಆಗಿ ಕ್ರಿಮಿನಾಶಕ ಔಷಧಿಯಿಂದ ಏನು ಖಾಯಿಲೆ ಬಂತು ಅದು ಹೋಗಲಿಲ್ಲ. ಅವರ ಭಿತ್ತನೆ ಬೀಜ ಮತ್ತು ಕ್ರಿಮಿನಾಶಕಗೆ ಔಷದಿ ಸಂಬಂಧಪಟ್ಟಂತೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಡಿ.ಸಿ.ಯವರು ವರದಿ ಕೊಟ್ಟಿದ್ದಾರೆ. ಆಗ ಏಳು, ಏಳೂವರೆ ಕೋಟಿಯವರೆಗೆ ರೆಡ್ಯೂಸ್ ಮಾಡಿದ್ದು. ಆದರೆ, ಅದೇ ಸೂರ್ಯಕಾಂತಿ, ರಾಯಚೂರು, ಧಾರವಾಡದ ಕೆಲವು ಭಾಗ ಸಂಪೂರ್ಣ ನಾಶವಾಗಿದೆ. ನನಗೂ ಈಗ ಕೇಳುತ್ತಿದ್ದಾರೆ. ಹಾಸನದಲ್ಲಿ 42 ಸಾವಿರ ಎಕರೆಯಲ್ಲಿ ಅಲೂಗೆಡ್ಡೆ ಹೋಗಿದೆ. ನಾನು ಎಲ್ಲಿಂದ ಕೊಡಲಿ? ನಾನು ಕೊಡುತ್ತೇನೆಂದು ಹೇಳಿದರೆ, ಒಂದು ಕಡೆ ಕೊಟ್ಟು, ಒಂದು ಕಡೆ ಬಿಡಲಿಕ್ಕೆ ಆಗುವುದಿಲ್ಲ. ಇವತ್ತು ಎಲ್ಲಾ ಜಿಲ್ಲೆಗಳಿಗೂ ಎಷ್ಟೆಷ್ಟು ಶುಗರ್, ಹಾಲಿ ಸ್ಟಾಂಡಿಂಗ್ ಕ್ರಾಪ್ ಒಣಗುತ್ತಿದೆ ಎನ್ನುವುದನ್ನು ನೋಡಿದಾಗ, ಬರೀ ಬೀದರ್ ಒಂದು ಕಡೆ ಮಾತ್ರ ಕೊಡುತ್ತೇನೆ, ಬಾಕಿ ಕಡೆ ಕೊಡುವುದಿಲ್ಲವೆಂದು ಹೇಳಿದಾಗ, ಬಾಕಿಯವರೂ ಬಿಡುವುದಿಲ್ಲ, ಏಕೆ ಬಿಡುತ್ತಾರೆ. ಆ ರೀತಿ ನಾವು ಪರಿಹಾರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ಇಡೀ ರಾಜ್ಯಕ್ಕೆ ಅನ್ವಯ ಮಾಡಿ, ಒಂದು ಪಾಲಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಪರಿಹಾರ ಕೊಡುವುದಾದರೆ, ಯಾವುದೋ ಒಂದು ಜಿಲ್ಲೆಗೆ ಕೊಡುತ್ತೇನೆ, ನನ್ನ ಸ್ವಂತ ಜಿಲ್ಲೆಗೇ, ಶ್ರೀಮಾನ್ ನಂಜೇಗೌಡರು ಕುಳಿತಿದ್ದಾರೆ. ಒಂದು ಷುಗರ್ ಫ್ಯಾಕ್ಟರಿಯಲ್ಲಿ ಅರೆಯುವುದಕ್ಕಾಗದೇ ಬೆಂಕಿ ಹಾಕುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಸ್ಟಾಂಡಿಂಗ್ ಕ್ರಾಪ್ ನಿಂತಿದೆ. ಶಿವಮೊಗ್ಗದಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲೂ, ಇದೆ. ಯಾರೇ ಸರ್ಕಾರ ನಡೆಸಲಿ, ನೀವು ಸರ್ಕಾರ ನಡೆಸಬಹುದು, ನಾವೂ ಸರ್ಕಾರ ನಡೆಸಬಹುದು. ನಾಳೆ ನೀವೂ ಬರಬಹುದು, ನಾವೇನು ಶಾಶ್ವತವಾಗಿ ಇಲ್ಲಿಯೇ ಕುಳಿತುಕೊಳ್ಳುತ್ತೇವೆ.

ಮೊಳೆ ಹೊಡೆದುಕೊಂಡು ಎಂದು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಇವತ್ತು 800 ಕೋಟಿ ರೂಪಾಯಿ ಷುಗರ್ ದಾಸ್ತಾನು ಬಿದ್ದಿದೆ ನಮ್ಮ ಕರ್ನಾಟಕದಲ್ಲಿ. ಅದನ್ನು ಲಿಫ್ಟ್ ಮಾಡುವುದಕ್ಕೆ ಸರ್ಕಾರ, ನಾಲ್ಕು ಪತ್ರ ಬರೆದಿದೆ. ಷುಗರ್ ಮಿನಿಸ್ಟರನ್ನು ಭೇಟಿ ಮಾಡಿದ್ದೇನೆ, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಹಣಕಾಸಿನ ಸಚಿವರನ್ನು ಭೇಟಿ ಮಾಡಿದ್ದೇನೆ. ಇದಕ್ಕಿಂತ ಇನ್ನು ಏನು ಮಾಡುವುದಕ್ಕಾಗುವುದಿಲ್ಲ, ಆದರೂ ಏನು ಹೇಳಿದ್ದೇವೆ. ನಮ್ಮ ಷುಗರ್ ಮಿನಿಸ್ಟರು ತುಂಬಾ ಉತ್ಸಾಹದಲ್ಲಿ, ಒಂದು ಮೀಟಿಂಗ್ ಮಾಡಿ, 6 ಕೋಟಿ ರೂಪಾಯಿಗಳನ್ನು

ತಾತ್ಕಾಲಿಕವಾಗಿ ತೊಡಗಿಸಿದರೆ, ಕ್ರಷಿಂಗ್ ಮಾಡಬಹುದೆಂಬ ಅಭಿಪ್ರಾಯ ಕೊಟ್ಟರು. ನಾನು ಹೇಳಿದೆ, ಮೊದಲು ಯಾರಿಗಾದರೂ ಜವಾಬ್ದಾರಿ ನಿಗದಿ ಮಾಡಿ, ಒಬ್ಬರು ಆಡಳಿತಾಧಿಕಾರಿಯನ್ನು ಹಾಕಿ, ನೀವೇ ಪ್ರಪೋಸ್ ಮಾಡಿ ಎಂದು ಹೇಳಿದೆ. ಅದರಲ್ಲಿ ಯಾರೂ ಖಾಸಗಿಯವರು ಇರುವುದು ಬೇಡ. ಅವರು ಜವಾಬ್ದಾರಿ ತೆಗೆದುಕೊಂಡು, 6 ಕೋಟಿ ರೂಪಾಯಿಗಳ ಹಣವನ್ನು, ಬ್ಯಾಂಕ್‌ನಿಂದ ಸರ್ಕಾರ ಗ್ಯಾರಂಟಿ ನಿಂತು ಕೊಡಿಸಿದರೆ, ಅದೂ ಹಾಳಾಗಬಹುದೆಂದು ನಾನು ಊಹಿಸಿದೆ. ಮಹದೇವ ಟೆಕ್ಸ್‌ಟೈಲ್‌ನವರಿಗೆ ಸರ್ಕಾರ ಎಷ್ಟು ಸಾರಿ ಸಾಲ ಕೊಡಿಸಿ, ಮುಳುಗಿ ಹೋಗಿದೆ. ಅನೇಕ ಕಡೆ, ಹೋದವರ್ಷ ಸರಬರಾಜು ಮಾಡಿದಂಥ ಕಬ್ಬಿಗೆ ರೇಟ್ ಕೊಟ್ಟಿಲ್ಲ, ಚುಂಚನಕಟ್ಟೆಯಲ್ಲಿ 3 ಕೋಟಿ ರೂಪಾಯಿ ಬಾಕಿ ಇದೆ,

ನಾವು ಗ್ಯಾರಂಟಿ ನಿಲ್ಲಬೇಕೆಂದು ಹೇಳಿದ್ದಾರೆ. ಇಂಥಾದ್ದು ಅನೇಕ ಕಡೆ ಇದೆ. ಇದು ಬರೀ ಹಳ್ಳಿಕೇಡ್ ಎಂದು ಒಂದು ಕಡೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಒಂದೇ ಒಂದು ವಿಷಯವೆಂದರೆ, 16 ಕೋಟಿ ರೂಪಾಯಿ ತಿಂದು ಹಾಕಿದ್ದಾರೆ, ಸಿ.ಓ.ಡಿ.ಗೆ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇನೆ. ಕಬ್ಬು ಬೆಳೆಯದೇ ಇದ್ದರೂ 600 ಟನ್, 800 ಟನ್ ಎಂದು ಬರೆದುಕೊಂಡಿದ್ದಾರೆ. ಕಬ್ಬು ಬೆಳೆಯದೇ ಇರುವವನು 600-800 ಟನ್ ಎಂದು ಸಪ್ಲೈ ಮಾಡಿದ್ದಾನೆ. ಸಿ.ಓ.ಡಿ. ಎನ್‌ಕ್ವೈರಿ ವರದಿ ಬಂದ ಮೇಲೆ ಹೇಳುತ್ತೇನೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಹಳ್ಳಿಕೇಡ್ ಷುಗರ್‌ಫ್ಯಾಕ್ಟರಿ ಬಗ್ಗೆ, ಅದನ್ನೇನಾದರೂ ಪುನಶ್ಚೇತನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದರ ಬಗ್ಗೆ ಪ್ರಯತ್ನ ಮಾಡುತ್ತೇವೆ ಇಷ್ಟು ಮಾತ್ರ ಹೇಳುತ್ತೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಆಸ್ಪತ್ರೆಯೊಳಗೆ ಕೊಂಡಿರುವ ಉಪಕರಣದ ಬಗ್ಗೆ ಹೇಳಿದರು. ಅದು ನನ್ನ ಕಾಲದಲ್ಲಿ ಕೊಂಡಿದ್ದಲ್ಲ, ನೀವೇನು ಹೇಳಿದ್ದೀರಿ, ಅದನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಅಂಕೋಲ ರಸ್ತೆ, 9 ಕೋಟಿ ರೂಪಾಯಿ ಆರ್ಬಿಟ್ರೇಷನ್ ಬಗ್ಗೆ ಕೋರ್ಟ್ ಮುಂದೆ ಅರ್ಜಿ ಹಾಕಿಕೊಂಡಿದ್ದೇವೆ. ಅದು ನನ್ನ ಕಾಲದಲ್ಲಿ ಆಗಿಲ್ಲ, ಅದೇನಾಗುತ್ತದೆಯೋ ಗೊತ್ತಿಲ್ಲ, ಅರ್ಬಿಟ್ರೇಷನ್ ಹಣೆ ಬರಹ ಏನಾಗುತ್ತದೆಂದು ಅವರಿಗೂ ಗೊತ್ತಿದೆ. ಆಮೇಲೆ ಕೇಬಲ್ ಬಗ್ಗೆ ಹೇಳಿದ್ದೀರಿ. ಅದನ್ನೂ ಕೊಟ್ಟಿಲ್ಲ, ನೀವೇನು ಮೂರು ವಿಷಯಗಳನ್ನು ಹೇಳಿದ್ದೀರಿ, ಅದಕ್ಕೆ ನಮ್ಮಿಂದ ಪೇಮೆಂಟ್ ಮಾಡಿಲ್ಲ ಎಂಬುದನ್ನಷ್ಟೇ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಂಕೋಲ ಡಾಂಬರ್‌ದ್ದು, 9 ಕೋಟಿ ರೂಪಾಯಿಗಳ ತುಂಡುಗುತ್ತಿಗೆ, ಮೊನ್ನೆ ನಾನೇ ಸರ್ಕಾರಿ ಆದೇಶ ಮಾಡಿದ್ದೇನೆ. ಎಲ್ಲೆಲ್ಲಿ ಒಂದು ಲಕ್ಷ ರೂಪಾಯಿನಲ್ಲಿ ಇರಿಗೇಷನ್ ವರ್ಕ್ಸ್ ಕೊಡಬಹುದು. ಸಿ ಅಂಡ್ ಬಿ ನಲ್ಲಿ 50 ಸಾವಿರ ರೂಪಾಯಿವರೆಗೆ ಕೊಡಬಹುದೆಂದು ನಿಯಮಾವಳಿಯಲ್ಲಿಯೇ ಇದೆ. ಈಗ ಮೆಟೀರಿಯಲ್ ಕಾಸ್ಟ್ ಜಾಸ್ತಿಯಾಗಿರುವುದರಿಂದ, ಒಂದು ಲಕ್ಷ ಮಾಡಬೇಕೆಂದು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಒಂದು ವಾರ ಆಗಿದೆ. ಸರ್ಕಾರಿ ಆದೇಶ ಇಷ್ಯೂ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇರತಕ್ಕ ವ್ಯವಸ್ಥೆಯೇ ಮುಂದುವರಿದಿದ್ದರೆ, ಅಭಿವೃದ್ಧಿ ಕಾರ್ಯಗಳು ಆಗುತ್ತಿದ್ದವು. ಅದರಿಂದ 4 ತಿಂಗಳು ಪ್ರಗತಿಯಾಗುತ್ತಿತ್ತು. ನಿಮಗೂ ಹೆಸರು ಬರುತ್ತಿತ್ತು.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ವಿರೋಧಿಪಕ್ಷದ ನಾಯಕರು ಅರ್ಥಮಾಡಿಕೊಳ್ಳಬೇಕು. ಒಬ್ಬೊಬ್ಬರಿಗೆ 30 ಕೋಟಿ 10 ಕೋಟಿ ಕೊಡುವುದಕ್ಕೂ ಒಂದು ಲಕ್ಷ, 50 ಸಾವಿರ ಕೊಡುವುದಕ್ಕೂ ಇರತಕ್ಕ ವ್ಯತ್ಯಾಸವನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಅರ್ಥಮಾಡಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಕೋಡಲ್ ರೂಲ್ಸ್‌ನಲ್ಲೇ 50 ಸಾವಿರ ಇದೆ. ನಾನು ಮಾಡಿದ್ದು ಅಲ್ಲಿ, 10 ಕೋಟಿ 15 ಕೋಟಿ ಪೀಸ್ ವರ್ಕ್‌ಗೆ ಕೊಡುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪೀಸ್ ವರ್ಕ್ ಮಾಡಬೇಡಿ ಎಂದು ನಿಲ್ಲಿಸಿದ್ದು ಏಕೆ, 50 ಸಾವಿರ ಇದ್ದುದ್ದನ್ನು, ಒಂದು ಲಕ್ಷ ಮಾಡಿ, ಕೆಲಸ ಮಾಡಿ ಎಂದು ಹೇಳುವುದೇಕೆ? ಅಧ್ಯಕ್ಷರೇ, ತಾವಾದರೂ ಹೇಳಿ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂಬುದನ್ನು ತಾವು ಗಮನಿಸಲಿಲ್ಲ. ನೀವಾದರೂ ಹೇಳಿ ಎಂದು ನನಗೆ ಕೇಳಿದರು, ಪಿ.ಡಬ್ಲ್ಯು.ಡಿ. ಖಾತೆ ನನ್ನ ಹತ್ತಿರ ಇರುವ ಹಾಗೆ ಕೇಳಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ನಬಾರ್ಡ್ ಬಗ್ಗೆ ಒಂದು ಸಂಘರ್ಷ ಬಂತು. ಈ ವಿಷಯದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಸರ್ಕಾರ ಜೀವಂತವಾಗಿಲ್ಲ, ರೈತರಿಗೆ ವಿರೋಧವಾದದ್ದು, ರೈತರ ಮಕ್ಕಳು, ಮಣ್ಣು ತಿನ್ನುತ್ತಿದ್ದಾರೆ. ಈ ಶಬ್ದ ಪ್ರಯೋಗ ಮಾಡಿದ್ದಾರೆ. ಅವರಿಗೆ ಬಡ್ಡಿ ಮನ್ನಾ ಮಾಡಿದ್ದು, ಅದಕ್ಕೆ ನಬಾರ್ಡ್ ಸಹಾಯ ಮಾಡಿದ್ದಾರೆ. ಮೊದಲು ಕನ್‌ಫ್ರಾನ್‌ಟೇಷನ್ ಆಗುತ್ತದೆ ಎಂಬ ಸ್ಟೇಜ್‌ಗೆ ಹೋಯಿತು. ಕೊನೆಗೆ ಹಣಕಾಸಿನ ಸಚಿವರು, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ ಮೇಲೆ ಸಮಸ್ಯೆ ನಿವಾರಣೆಯಾಯಿತು. ಏಕೆಂದರೆ, ನಾವು ರೈತರ ಬಗ್ಗೆ ಏನು ಮಾಡಲೇ ಇಲ್ಲ, ಹಾಗೆಯೇ ಕೂತಿದ್ದೇವೆ ಎಂಬ ಅಭಿಪ್ರಾಯ ಬರಬಾರದು.

7.00 ಪಿ.ಎಂ

ಆಮೇಲೆ ಕೃಷಿ ನೀತಿಯನ್ನು ಕೂಡ ತರಬೇಕೆಂದು ನಿರ್ಣಯ ಮಾಡಿ ತಂದಿದ್ದೇವೆ. ಅದರ ಬಗ್ಗೆ ಚರ್ಚೆ ಮಾಡಿ ಏನೇನು ಸಲಹೆಗಳನ್ನು ಕೊಡುತ್ತಾರೋ ಅದನ್ನು ಸ್ವೀಕಾರ ಮಾಡುತ್ತೇವೆ. ರೈತರ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್‌ಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಇನ್ನು ಕೊನೆಯದಾಗಿ ಟ್ರಾನ್ಸ್‌ಫರ್ ವಿಷಯಕ್ಕೆ ಬರುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಯವರು ಟ್ರಾನ್ಸ್‌ಫರ್ ವಿಷಯಕ್ಕೆ ಬರುವ ಮೊದಲು ನಾನು ಒಂದು ಗಂಭೀರವಾದ ಪ್ರಶ್ನೆಯನ್ನು ಕೇಳುತ್ತೇನೆ. ಕಾವೇರಿ ಜಲ ವಿವಾದದ ಬಗ್ಗೆ ರಾಜ್ಯ ಸರ್ಕಾರದ ಅರ್ಜಿ ಸೇರಿ, ನನ್ನ ಅರ್ಜಿ ಸೇರಿ ಹಾಗೂ ಇತರೆ ಖಾಸಗಿ ಅರ್ಜಿಗಳು ಸೇರಿ ಒಟ್ಟು 5-6 ಅರ್ಜಿಗಳು ಸುಪ್ರೀಮ್ ಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ನಾನು ಒಂದು ಸಾರಿ ಈ ಸಭೆಯಲ್ಲಿ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದೆ, ಸುಪ್ರೀಮ್ ಕೋರ್ಟ್ ಅಂದರೆ ತಮಿಳುನಾಡಿನವರಿಗೆ ತವರು ಮನೆ. ನಮಗೆ ಅದು ಅತ್ತೆ ಮನೆಯಾಗಿ ಬಿಟ್ಟಿದೆ. ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚುವುದು ಒಂದು ಬಾಕಿ ಇದೆ. ಇದು ಸುಪ್ರೀಮ್ ಕೋರ್ಟ್ ಒಂದು ಧೋರಣೆ ನೋಡಿ. ನಾನು ಸುಪ್ರೀಮ್ ಕೋರ್ಟ್‌ಮೇಲೆ ಟೀಕೆ ಮಾಡಬೇಕೆಂದು ನನ್ನ ಇಷ್ಟವಿಲ್ಲ, ಅವರ ಅರ್ಜಿಗೆ 24 ನೇ ತಾರೀಖಿನಂದು ಹಿಯರಿಂಗ್ ಫಿಕ್ಸ್ ಮಾಡಿಬಿಟ್ಟರು. ನಮ್ಮ ಅರ್ಜಿಗಳು ವರ್ಷಗಟ್ಟಲೆ ಪೆಂಡಿಂಗ್ ಇದ್ದರೂ ಇನ್ನೂ ಹಿರಿಯರಿಂಗ್‌ಗೆ ಬಂದಿಲ್ಲ. ಇದರಲ್ಲಿ ಎಲ್ಲಿ ಲೋಪ ಇದೆ ಎನ್ನತಕ್ಕಂಥದ್ದು ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಅವರ ಅರ್ಜಿಗಳನ್ನು ಸುಪ್ರೀಮ್ ಕೋರ್ಟ್‌ನವರು ಅಡ್ಮಿಟ್ ಮಾಡುವುದು, ಅವರ ಅರ್ಜಿಗಳ ಹಿಯರಿಂಗ್ ಕೇಳುವುದು,ಇದು ಒಂದು ರೀತಿ ಪ್ರಕಾರ ಆಗುವುದು, ಬರತಕ್ಕಂಥ ವರದಿಯಲ್ಲಿ ಕರ್ನಾಟಕದವರು ಬಂದ ಜನ ಎನ್ನತಕ್ಕಂಥ ಪ್ರಚಾರಕ್ಕೆ ಅವಕಾಶವಾಗುವಂಥ ವಾತಾವರಣ ಕಾಣುತ್ತಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಅರ್ಜಿಗಳೆಲ್ಲಾ ಪೆಂಡಿಂಗ್ ಇವೆ. ಅವುಗಳ ಬಗ್ಗೆ ತಿರುವು ನೋಡುವ ಹಾಗಿಲ್ಲ, ಹಿಯರಿಂಗ್ ತೆಗೆದುಕೊಳ್ಳುವ ಹಾಗಿಲ್ಲ, ಡೇಟ್ ಕೊಡುವ ಹಾಗಿಲ್ಲ, ತಮಿಳುನಾಡಿನವರ ಅರ್ಜಿ ಹೋದ ತಕ್ಷಣ ಎಂಟರ್‌ಟೇನ್ ಮಾಡುವುದು, ಇದು ಮೊದಲನೆಯ ಸಾಲಿ ಅಲ್ಲ, ಮೊದಲನೆ ಸಾರಿ ಆದರರೆ ಏನೋ ಅಂದು ಕೊಳ್ಳಬಹುದು. ಅನೇಕ ಸಾರಿ ನಮಗೆ ಇದು ಅನುಭವವಾಗಿದೆ. ಬಹುಶಃ ಸುಪ್ರೀಮ್ ಕೋರ್ಟ್‌ನ ತೀರ್ಮಾನವನ್ನು ಅನುಷ್ಠಾನಕ್ಕೆ ತರದೆ ಇರತಕ್ಕಂಥ ಪರಿಸ್ಥಿತಿ ರಾಜ್ಯ ಸರ್ಕಾರಕ್ಕೆ ಬರಬಹುದು. ರಾಜ್ಯ ಸರ್ಕಾರಕ್ಕೂ ಸುಪ್ರೀಮ್ ಕೋರ್ಟ್ ತೀರ್ಮಾನಿಕ್ಕೂ ಸಂಘರ್ಷ ಉಂಟಾಗಬಹುದು. ಏಕೆಂದರೆ ಇದರಲ್ಲಿ ತಾವು ಸ್ವತಂತ್ರರಲ್ಲ, ಸುಪ್ರೀಮ್ ಕೋರ್ಟ್‌ನವರು ಕಣ್ಣು ಮುಚ್ಚಿಕೊಂಡು ಯಾವುದಾದರೂ ಒಂದು ತೀರ್ಮಾನ ಕೊಟ್ಟು ಬಿಟ್ಟರೆ,ಏಕೆಂದರೆ, now a days they are already trying to legislatre matters,....

ಅವರೂ ಸಹ ಎಲ್ಲರನ್ನೂ ಸಮಾನವಾಗಿ ನೋಡತಕ್ಕಂಥ ದೃಷ್ಟಿಯಲ್ಲಿ ಇಲ್ಲ. ಸುಪ್ರೀಮ್ ಕೋರ್ಟ್‌ನ ಧೋರಣೆ ನೋಡಿದರೆ ಇದರಿಂದ ಗಾಬರಿಯಾಗುತ್ತದೆ. ತಮಿಳು ನಾಡಿನವರಾ ಅರ್ಜಿಗೆ ಒರವಸೆ ಕೊಡತಕ್ಕಂಥ ವಿಚಾರ ನೋಡಿದರೆ ನಮಗೆ ನಿಜಕ್ಕೂ ಗಾಬರಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಮನನ ಮಾಡಿಕೊಂಡು ಈ ಸದನದಲ್ಲಿ ನಮಗೆ ಏನಾದರೂ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ ನಂಜೇಗೌಡರು ಏನು ಎತ್ತಿದ್ದಾರೆ, ಇಂಟರಿಮ್ ಅವಾರ್ಡ್‌ನ್ನು ನೋಟಿಫೈ ಮಾಡಲಿಕ್ಕೆ ಆದೇಶ ಕೊಡಬೇಕೆಂದು 1992 ರಲ್ಲಿ ಸುಪ್ರೀಮ್ ಕೋರ್ಟ್ ಮುಂದೆ ಒಂದು ಅರ್ಜಿಯನ್ನು ಹಾಕಿದ್ದಾರೆ. ಅದು ನಿನ್ನೆ ದಿನ ಬಂದಿದೆ. ನಾವು ನಮ್ಮ ಅಡ್ವೋಕೇಟ್ ಜನರಲ್ ಅವರನ್ನು ಕಳುಹಿಸಿದ್ದೇವೆ. ಇರಿಗೇಷನ್ ಸೆಕ್ರೆಟರಿ ಹೋಗಿದ್ದಾರೆ. ಕಾವೇರಿ ಜಲ ವಿವಾದ ವಿಷಯದಲ್ಲಿ ಹಿಂದೆ ನೇಮಕವಾಗಿದ್ದಂಥ ಹಿರಿಯ ಅಡ್ವೋಕೇಟ್‌ಗಳು ನಮ್ಮ ಸರ್ಕಾರದ ನಿಲುವನ್ನು ಹೇಳಿದ್ದಾರೆ. ಟ್ರಿಬ್ಯುನಲ್ ಮುಂದೆ ರಿವಿಷನ್ ಪಿಟೀಷನ್ ಹಾಕಿದಾಗ ಯಾವ ಸ್ಟೇಟ್‌ಗೆ ಎಫೆಕ್ಟ್ ಆಗುತ್ತದೋ, ಮಂತ್‌ಲಿ ಬೇಸಿಸ್ ಮೇಲೆ ನೀರು ಕೊಡತಕ್ಕಂಥ ಸಂದರ್ಭದಲ್ಲಿ ನ್ಯಾಚುರಲ್ ಕೆಲಾಮಿಟಿ ಅಥವಾ ಡ್ರಾಟ್ ಬಂದಾಗ ಪುನಃ ಟ್ರಿಬ್ಯುನಲ್ ಮುಂದೆ ಬರಬೇಕು, ಅದಕ್ಕೆ ಟ್ರಿಬ್ಯುನಲ್ ಆಯಾ ಸನ್ನಿವೇಶಕ್ಕೆ ಸರಿಯಾಗಿ ನಿರ್ಣಯ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ಹಂತದಲ್ಲಿ ಸುಪ್ರೀಮ್ ಇದಕ್ಕೆ ಇಂಟ್ರರ್‌ಫಿಯರ್ ಆಗುವ ಹಾಗಿಲ್ಲ. ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಆಕ್ಟ್ ಕೆಳಗಡೆ ಸುಪ್ರೀಮ್ ಕೋರ್ಟ್ ಈ ವಿಷಯದಲ್ಲಿ ಇಂಟರ್‌ಫಿಯರ್ ಆಗಲೇಕೂಡದು. ಒಂದು ಪಕ್ಷ ಇದರಲ್ಲಿ ಏನಾದರೂ ಜಿಜ್ಞಾಸೆ ಉಂಟಾದರೆ ಇದರ ಬಗ್ಗೆ ಪಾರ್ಲಿಮೆಂಟ್‌ಗೆ ಎನಕ್ಟ್ ಮಾಡುವ ಪ್ರಾವಿಷನ್ ಇದೆಯೇ ಹೊರತಾಗಿ ಸುಪ್ರೀಮ್‌ಕೋರ್ಟ್‌ಗೆ ಆ ಅಧಿಕಾರ ಇಲ್ಲ. ಈ ನಿಲುವನ್ನು ತೆಗೆದುಕೊಳ್ಳಬೇಕೆಂದು ನಮ್ಮ ಅಡ್ವೋಕೇಟ್ ಜನರಲ್ಲಿ ಮತ್ತು ಯಾರು ಅಲ್ಲಿ ವಕಾಲತ್ ಮಾಡುತ್ತಿದ್ದಾರೋ ಅವರಿಗೆ ನಾನು ಸರ್ಕಾರದ ಪರಿವಾಗಿ ಅಭಿಪ್ರಾಯವನ್ನು ಹೇಳಿದ್ದೇನೆ. ನಿನ್ನೆ ಕೂಡಾ ಏನೂ ಚರ್ಚೆ ಆಗಿಲ್ಲ, ಅದನ್ನು 26ನೇ ತಾರೀಖಿಗೆ ಪೋಸ್ಟ್ ಪೋನ್ ಮಾಡಿದ್ದಾರೆ.

ಶ್ರೀ ಹೆಚ್.ಎಸ್. ನಂಜೇಗೌಡ : ನಮ್ಮ ಸರ್ಕಾರದ ಅರ್ಜಿ ಏನಾಯಿತು?

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮ ಸರ್ಕಾರದ ಅರ್ಜಿಯನ್ನು ತೆಗೆದುಕೊಂಡಿಲ್ಲ, 1992 ರಿಂದ ಈಗ 95 ಕ್ಕೆ ಬಂದಿದೆ. ನಾನು ಒಂದು ವಿಷಯವನ್ನು ಹೇಳುತ್ತೇನೆ, ಟ್ರಿಬ್ಯುನಲ್ ಮುಂದೆ ಈ ವಿಷಯ ಇರುವಾಗ ಸುಪ್ರೀಮ್ ಕೋರ್ಟ್ ಈ ವಿಷಯವನ್ನು ಇಂಟರ್‌ಫಿಯರ್‌ಆಗುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. Under Intor-State Dispute Act, when once the final award is passed, the concerned States must sit together and come to certain understading. ನಾನು ಕೋಆಪರೇಟ್ ಮಾಡಿದಾಗ Parliament is to enact ಇದು ವಾಸ್ತವ ಪರಿಸ್ಥಿತಿ ಇರತಕ್ಕಂಥಾದ್ದು, ಇದು ನಮ್ಮ ಅರ್ಜಿ ಅವರ ಅರ್ಜಿ ಎಂದಲ್ಲ, ಇದರ ಬಗ್ಗೆ ಸುಪ್ರೀಮ್ ಕೋರ್ಟ್ ಮುಂದೆ ಮೈನ್‌ಟೆನೆಬಲ್ ಅಲ್ಲ ಎನ್ನತಕ್ಕ ಸ್ಟ್ಯಾಂಡ್ ತೆಗೆದುಕೊಳ್ಳಬೇಕೆಂದು ನಮ್ಮ ವಕೀಲರುಗಳಿಗೆ ತಿಳಿಸಲಾಗಿದೆ. 26ನೇ ತಾರೀಖು ಏನಾಗುತ್ತದೆಂದು ಕಾದು ನೋಡೋಣ. ಇದರ ನಿಲುವಿನಲ್ಲಿ ರಾಜ್ಯ ಸರ್ಕಾರದ್ದು ಯಾವುದೇ ಬದಲಾವಣೆ ಇಲ್ಲ.

(ಅಧ್ಯಕ್ಷ ಪೀಠದಲ್ಲಿ ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿಯವರು ಆಸೀನರಾದರು)

ಶ್ರೀ ಎಸ್. ಬಂಗಾರಪ್ಪ : ಬೆಂಗಳೂರು ಪ್ಯಾಲೆಸ್ ಬಗ್ಗೆ ಏನಾಯಿತು

ಶ್ರೀ ಹೆಚ್.ಡಿ. ದೇವೇಗೌಡ : ಪ್ಯಾಲೆಸ್ ಬಗ್ಗೆ ಏನು ಆರ್ಡಿನೆನ್ಸ್ ತಾವು ಮಾಡಿದ್ದೀರೋ ಅದನ್ನು ಪುನಃ ಕಳುಹಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಸಾಧ್ಯವಾದರೆ, ಇದರ ಬಗ್ಗೆ ರಾಷ್ಟ್ರಪತಿಯವರನ್ನು, ಪ್ರಧಾನ ಮಂತ್ರಿಯವರನ್ನು ಮತ್ತು ಲಾ ಮಿನಿಸ್ಟರ್‌ರವರನ್ನು ಭೇಟಿಮಾಡಬೇಕೆಂದು ಇದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಎಲ್ಲಾ ಪಕ್ಷದವರೊಡನೆ ಇದರ ಬಗ್ಗೆ ಚರ್ಚೆ ಮಾಡಿ ವಿಷಯವನ್ನು ತಿಳಿಸುತ್ತೇವೆ ಎನ್ನತಕ್ಕ ಮಾತನ್ನು ಈ ಮೊದಲು ಹೇಳಿದ್ದೀರಿ. ನಮ್ಮ ಬೆಂಗಳೂರಿನಲ್ಲಿ ಒಂದು ಪಬ್ಲಿಕ್ ಭಾಷಣ ಮಾಡುವುದಕ್ಕೂ ಜಾಗ ಇಲ್ಲ; ಇರುವ ಕಬ್ಬನ್ ಪಾರ್ಕ್ ಈಗಾಗಲೇ ಹಾಳಾಗಿ ಹೋರುತ್ತಿದೆ. ಈ ಜಾಗದಲ್ಲಿ ಒಂದು ಇಂಚು ಜಾಗವನ್ನು ಹೋಗದ ಹಾಗೆ ಉಳಿಸಿಕೊಳ್ಳಬೇಕೆಂಬುದರ ಬಗ್ಗೆ ನಮ್ಮ ಸರ್ಕಾರ ಇದ್ದಾಗಲೇ ಯೋಜನೆ ಮಾಡಿತ್ತು. ಅದರಲ್ಲಿ ಡಿಸ್ನಿ ಲ್ಯಾಂಡ್ ಅಥವಾ ಇನ್ನಾವುದೇ ಪಬ್ಲಿಕ್ ಪರ್ಪಸ್‌ಗೆ ಯೂಸ್ ಮಾಡಬೇಕೆಂದು ನಮ್ಮ ಸರ್ಕಾರ ಇದ್ದಾಗಲೆ ಯೋಜನೆ ಹಾಕಿತ್ತು; ಅದೇ ರೀತಿ ತಾವು ಸಹ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ನಾನು ಪತ್ರಿಕೆಗಳಲ್ಲಿ ಒದಿದ್ದೇನೆ. ಅದು ಸರಿ ಇದೆ. ಆದರೆ ಅದರ ಬಗ್ಗೆ ನಮ್ಮನ್ನು ಕರೆಸಿ ಒಂದು ಸಾರ್ತಿ ಮಾತನಾಡಿದ್ದರೆ ಒಳ್ಳೇಯದಾಗುತ್ತದೆಂಬುದು ನನ್ನ ಭಾವನೆ.

ಶ್ರೀ ಹೆಚ್.ಡಿ. ದೇವೇಗೌಡ : ಇದರ ಬಗ್ಗೆ ಎಲ್ಲರನ್ನೂ ಕರೆಯಿಸಿ ಚರ್ಚೆ ಮಾಡುತ್ತೇನೆ. ಆಮೇಲೆ ಸನ್ಮಾನ್ಯ ಅಧ್ಯಕ್ಷರೆ, ಜನತಾ ದರ್ಶನದ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡು ರಾಜಕೀಯ ಮಾಡುತ್ತಿದ್ದಾರೆ, ಪಾರ್ಲಿಮೇಂಟ್ ಚುನಾವಣೆ ದೃಷ್ಟಿ ಇಟ್ಟುಕೊಂಡು ಇದು ಮಾಡತಕ್ಕಂಥಾದ್ದು, ಅರ್ಜಿಗಳನ್ನು ತೆಗೆದುಕೊಳ್ಳುವಕ್ಕೆ ಅಲ್ಲಿಗೆ ಏಕೆ ಹೋಗಬೇಕು? ಇಲ್ಲೇ ತೆಗೆದುಕೊಳ್ಳಬಹುದಾಗಿತ್ತು, ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಜನತಾ ಸಂದರ್ಭನ ಕಾರ್ಯಕ್ರಮಕ್ಕೆ ತಮ್ಮ ಪಾರ್ಟಿ ಅಧ್ಯಕ್ಷರನ್ನೂ ಜೊತೆಗೆ ಕರೆದುಕೊಂಡು ಹೋಗುತ್ತಿದ್ದಾರೆ, ಅಲ್ಲಿ ಪಾರ್ಟಿಯವರನ್ನೂ ಮಿಟ್ ಮಾಡುತ್ತಿದ್ದಾರೆ, ಎಂದು ಹೇಳಿದ್ದಾರೆ. ಜನತಾದರ್ಶನ ನಡೆಯುತ್ತಿದ್ದ ಸಂದರ್ಭದಲ್ಲಿ ಸೋಮವಾರ ಪೇಟೆಯಲ್ಲಿ ಲಾಕಾಪ್ ಡೆತ್ ಅಗಿದ್ದರೂ ತವು ಅಲ್ಲಿಗೆ ಹೋಗಲಿಲ್ಲವಂದು ಉಳಿಸಿದ್ದಾರೆ. ಆ ವಿಷಯವನ್ನು ನನ್ನ ಗಮನಕ್ಕೆ ಯಾರೂ ತಂದಿರಲಿಲ್ಲ, 'ನಿಮಗೆ ಸಂವಿಧಾನದಲ್ಲಿ ನಂಬಿಕೆ ಇಲ್ಲ, ಅಧಿಕಾರ ಬಿಟ್ಟು ತೊಲಗಿ ಎಂದು ಸಹ ಹೇಳಿದ್ದಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಮತ್ತು ಅವರು 1977ರಲ್ಲಿ

1983ರಲ್ಲಿ, 1989ರಲ್ಲಿ ಮಿತ್ರರಾಗಿದ್ದವರು. ಮತ್ತೆ ಯಾವಾಗ ಫ್ರೆಂಡ್ಸ್ ಆಗುತ್ತಿರೋ ಯಾರಿಗೆ ಗೊತ್ತು?

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮ ಉಪನಾಯಕರು ನಿನ್ನೆ ಹೇಳಿದ್ದರು. ನ್ಯಾಯಾಂಗದ, ಸಂವಿಧಾನಕ್ಕೆ ನಾನು ವಿರುದ್ಧವಾಗಿ ನಡೆದುಕೊಂಡಿದ್ದೇನೆ. ನಾನು ಮುಖ್ಯಮಂತ್ರಿ ಆಗಿದ್ದೇನೋ ಇಲ್ಲವೋ ಗೊತ್ತಿಲ್ಲ. ಇವತ್ತು ಅದರ ಪರೀಕ್ಷೆಯಾಗಬೇಕಾಗಿದೆ. ಅವೊತ್ತು ನಮ್ಮ ಗೂಂಡಾಗಳೆಲ್ಲರೂ ಸೇರಿ ಅಲ್ಲಿ ಮೇಲೆ ಬಾವುಟವನ್ನು ಹಾರಿಸುವುದಕ್ಕೆ ಹೋಗಿದ್ದರು. ಸುಪ್ರೀಂ ಕೋರ್ಟ್ ಮುಂದೆ ಅಫಿಡವಿಟ್ ಹಾಕಿ ಪ್ರಮಾಣವಚನವನ್ನು ಸ್ವೀಕಾರ ಮಾಡಿ ಭಜನೆ ಮಾಡತ್ತೇವೆ ಎಂದು ವಚನೊ ಕೊಟ್ಟು 500 ವರ್ಷಗಳ ಒಂದು ಪೂಜಾ ಸ್ಥಳವಲ್ಲಿ ತಮ್ಮ ಬಾವುಟವನ್ನು ಹಾರಿಸಲಿಕ್ಕೆ ಹೋದರಲ್ಲಾ ಜನ...

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂದಿರ ಕಟ್ಟುವುದಕ್ಕೆ ಹೋಗಿದ್ದೆವು, ಮಂದಿರ ಕಟ್ಟಿ ಬಂದೆವು. ಅಲ್ಲಿ ಬಾವುಟ ಏಕೆ ಹಾರಿಸುವುದಕ್ಕೆ ಹೋಗುತ್ತೇವೆ.? ನಮ್ಮ ಪುರಾತನವಾದಂಥ ದೇವಸ್ಥಾನವನ್ನು ಕಟ್ಟಬೇಕೆಂದು ಹೋದೆವು; ಈಗ ಸಣ್ಣದೊಂದು ದೇವಸ್ಥಾವನ್ನು ಕಟ್ಟಿದ್ದೇವೆ, ದೊಡ್ಡ ದೇವಸ್ಥಾನವನ್ನು ಕಟ್ಟುವ ಕಾಲ ಬಂದರೆ ಆಗ ಕಟ್ಟುತ್ತೇವೆ. ಬರೀ ಬಾವುಟ ಅಲ್ಲ, ದೇವಸ್ಥಾನ ಕಟ್ಟಲು ನಾವು ಹೋಗಿದ್ದೆವು

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಸುಪ್ರೀಂ ಕೋರ್ಟ್‌ನ ಮುಂದೆ ನಾವು ಅವರೆಲ್ಲರೂ ಒಟ್ಟಿಗೆ ಹೋದೆವು. ಇಂದಿರಾ ಗಾಂಧಿಯವರು ವ್ಯಕ್ತಿ ಸ್ವಾತಂತ್ರ್ಯ ನ್ಯಾಯಾಂಗದ ಸ್ವಾತಂತ್ರ್ಯದ ಹರಣ ಮಾಡುತ್ತಿದ್ದಾರೆ ಎಂದು ಹೇಳಿದಾಗ ಜೈಲಿಗೆ ಹೋದೆವು. ಆದರೆ ನೀವು ಸುಪ್ರೀಂಕೋರ್ಟ್‌ನ ಮುಂದೆ ಭಜನೆ ಮಾಡುತ್ತೇವೆ ಎಂದು ಅರ್ಜಿ ಹಾಕಿದಿರಿ. ಅದರೆ ಅಲ್ಲಿ ಹಾರಿಸಿದ್ದು ಬಾವುಟ. ಆದೇ ನಮ್ಮ ತುಂಟ ಹುಡುಗರು ಈ ದೇಗುಲದ ಮೇಲೆ ಹಾರಿಸುವುದಕ್ಕೆ ಹೋದರೆ ಅದು ಸಂವಿಧಾನ ಬಾಹಿರ: ಅಲ್ಲಿ ನೀವು ಮಾಡಿದ್ದು ಸಂವಿಧಾನದ ರಕ್ಷಣೆಯೇ?

ನಾವು ನಮ್ಮ ಹುಡುಗರು ಮಾಡಿದ್ದಕ್ಕೆ ಕ್ಷಮೆ ಕೇಳಿದ್ದೇನೆ. ನಾವು ಸಣ್ಣವರು ಕ್ಷಮೆ ಕೇಳುತ್ತೇವೆ. ಅವರು ನಮ್ಮ ಸಂವಿಧಾನಕ್ಕಿಂತಲೂ ದೊಡ್ಡವರು. ಅವರು ಈ ದೇಶದ ಮೊದಲನೇ ಪಾರ್ಟಿ. ಮುಂದೆ ಕೇಂದ್ರ ಸರಕಾರವು ಅವರ ಕೈಗೆ ಬರುತ್ತದೆ. ನಥಿಂಗ್ ಟು ಬಾದರ್. ನಾವು ನೀವು ಹೊಡೆದಾಡಿಕೊಂಡು ಇದ್ದೇವೆ. ಅವರು ಮಾತ್ರ ಒಳ್ಳೆಯ ಪಾರ್ಟಿಯವರು. ಅವರದ್ದು ವ್ಯಾಲ್ಯು—ಬೇಸ್ಡ್—ಪಾರ್ಟಿ. ಈ ದೇಶದಲ್ಲಿ ಮೌಲ್ಯಗಳು ನಾಶವಾಗಿರತಕ್ಕಂಥ ಕಾಲದಲ್ಲಿ ಅದನ್ನು ಮೇಲೆತ್ತಲು ಇವೊತ್ತು ಆ ಪಾರ್ಟಿಯು ಸೃಷ್ಟಿಯಾಗಿದೆ. ನಾನು ಇಲ್ಲಿ ಗುಂಡಾಗಿರಿ ಮಾಡಿ ಮುಖ್ಯಮಂತ್ರಿಯಾದರು ಇಲ್ಲಿ ಕುಳಿತುಕೊಂಡಿದ್ದೇನೆ. ಅದಕ್ಕಾಗಿ ನಾನು ಜನರ ಕ್ಷಮೆಯನ್ನು ಕೂಡ ಕೇಳಿದ್ದೇನೆ. ಇವರೆಲ್ಲಾ ಏನು ತಿಳಿದುಕೊಂಡಿದ್ದರು? ಬಾಬರಿ ಮಸೀದಿಯನ್ನು ಒಡೆದ ತತ್‌ಕ್ಷಣ ನಾಲ್ಕು ರಾಜ್ಯಗಳಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ತಿಳಿದುಕೊಂಡಿದ್ದರು. ಇಡೀ ಹಿಂದೂಸ್ಥಾನದ ಮಾಧ್ಯಮಗಳೆಲ್ಲವೂ ಬರೆದದ್ದೇ ಬರೆದದ್ದು. ತಾಹು ಪಾರ್ಟಿ ಪ್ರೆಸಿಡೆಂಟ್. ಬಿಬಿಸಿಯವರು ಬಂದು ನನ್ನನ್ನು ಡೆಲ್ಲಿನಲ್ಲಿ ಇಂಟರ್‌ವ್ಯೂ ಮಾಡಿದರು. Mr. Deve Gowda, what do you say about this " ಎಂದು ಕೇಳುತ್ತಾರೆ.

ನಾನು ಹೇಳಿದೆ, ಈ ದೇಶದಲ್ಲಿ ಅಷ್ಟು ಸುಲಭ ಇಲ್ಲ, ನಾನು ಅಲ್ಲಾ ಹೆಸರಿನಲ್ಲಿ ಕೇಳಿದೆ, ಇವರು ರಾಮನನ್ನು ನಿಲ್ಲಿಸಿ ಬಿಟ್ಟು ಅ ರಾಮನನ್ನು... ಏನಾದರೂ ಮಾತನಾಡಬೇಕಾದರೆ ಸ್ವಲ್ಪ ಮಟ್ಟಿಗೆ ಆಧಾರ... ಬಾಕಿಯವರಿಗೂ ಬಗುತ್ತದೆ ಮಾತನಾಡಲು. Yes, Janata dal has no force. I admit it. I am not going to say that we are going to rule the centre ನಮಗೆ ಅಗರ್ವ ಇಲ್ಲ, ಇವರು ರಾಜಸ್ಥಾನದಲ್ಲಿ ಹೇಗೆ ಸರಕಾರವನ್ನು ನಡೆಸಿದರು ಎಂಬುದು ನನಗೆ ಗೊತ್ತು. ಬೇರೆ ಬೇರೆ ಪಾರ್ಟಿಯ 15 ಜನರನ್ನು ಸೇರಿಸಿಕೊಂಡು ಸರಕಾರ ಮಾಡಿದ್ದಾರೆ. ಇವೊತ್ತು ಮುಂಬೈಯಲ್ಲಿ they are the minor party to day and we are running 4 States ಎಂಬ ವಾದ ಮಾಡಿದರು. ಬರಲಿ ಸಂತೋಷ. ಅವರೆಲ್ಲರೂ ವ್ಯಾಲ್ಯೂಬೇಸ್ಡ್. ನಾವೆಲ್ಲರೂ ಸಮಯ ಸಾಧಕರು. ನಾನು ಫೋನ್ ಮಾಡಿದರೆ 10ಕೋಟಿ ಬಂದು ಬಿಡುತ್ತದೆ ಎಂದು ಯಾವ ಟೆಸ್ಟನಲ್ಲಿ ಹೇಳಿದೆ? ಅದು ಬಂದುದು ಇವೊತ್ತು ಅವರು ಯಾವ ಪತ್ರಿಕೆಯನ್ನು ಸೀಲ್ಡ್ ಕವರ್‌ನಲ್ಲಿ ಅಧ್ಯಕ್ಷರಿಗೆ ಸಲ್ಲಿಸಿದಗಲೆಲ್ಲಾ ಅದು... ನಾನೇನು ತಿಳಿದುಕೊಂಡೆ ಅದರಲ್ಲಿ ಸಸ್ಪೆನ್‌ಷನ್ ಆರ್ಡರೆ ಇರಬಹುದು ಪಾಪ ಬಂದು" ಬಿಟ್ಟಿದೆ 'ಇವರ ಕೈಯಲ್ಲಿ ಎಂದು. ಆಗ ನಾನು ಸಜನ್ಯತೆಯಿಂದ ನಡೆದುಕೊಳ್ಳ ಬೇಕೆಂದು ಹೇಳಿ ಅದನ್ನು ಒಡೆಯಿರಿ ಎಂದು ಸಹ ಹೇಳಲಿಲ್ಲ, ಇವೊತ್ತು ಎಲ್ಲಾ ಪತ್ರಿಕೆಗಳನ್ನು ನೋಡುತ್ತೇನೆ. Captioin ನಲ್ಲಿ : "Produced the document by the leader of the opposition" ನಾನು ಈ ಪಾಲಿಟಿಕ್ಸನ್ನು ಕಾಮಾಗಿ ಅನಾಲೈಸ್ ಮಾಡಿತ್ತಾ ಇದ್ದೇನೆ. ನಾನು ಅಧಿಕಾರದ ದುರುಪಯೋಗ ಮಾಡಿಕೊಂಡಿದ್ದೇನೆ. ಇವರಿಗೆ ಕೊಟ್ಟಿರುವ ಕಾರ್‌ನಲ್ಲಿ ಇವರ ಪಾರ್ಟಿಯ ಜನರಲ್ ಸೆಕ್ರೆಟರಿ ಟೂರ್ ಮಾಡುವುದಿಲ್ಲ, ವಿರೋಧ ಪಕ್ಷದ ನಾಯಕರು ಒಬ್ಬರೇ ಟೂರ್ ಮಾಡುವುದು.

ಏಕೆಂದರೆ ನಾವು ಆತ್ಮಸಾಕ್ಷಿಯಾಗಿ ಮಾತನಾಡಬೇಕಾಗುತ್ತದೆ. ಹೌದು ಅವರು ನಮ್ಮ ಜೊತೆಗೆ ಬಂದಿದ್ದಾರೆ. ಹಾಗಾದರೆ ಇವರು ಹೋಗುವ ಕಾರ್‌ನಲ್ಲಿ ಇವರ ಪಾರ್ಟಿಯ ಜನರಲ್ ಸೆಕ್ರೆಟರಿ ಹೋಗುವುದಿಲ್ಲವೇ? ಇವರ ಪಾರ್ಟಿಯ ಪ್ರೆಸಿಡೆಂಟ್ ಹೋಗುವುದಿಲ್ಲಳವೇ? ಹಾಗಾದರೆ ಇವರು It is the leader of the opposition party, get out ಎಂದು ಹೇಳಲಿಲ್ಲ ಇವರು ಪಾಪ ನನ್ನ ಮೇಲೆ ಚಾರ್ಜ್ ಮಾಡಿದರು. ಸ್ವಾಮಿ, ರಥ ಯಾತ್ರೆ ಮಾಡಿದರಲ್ಲಾ, ನಾಲ್ಕು ಜನ ಮುಖ್ಯಮಂತ್ರಿಗಳು ನಿಮಗೆ ಎಲ್ಲಾ ಸವಲತ್ತುಗಳನ್ನು ಒದಗಿಸಿದರಲ್ಲಾ, ಬಹಳ ಸಂವಿಧಾನದ ಚೌಕಟ್ಟಿನಲ್ಲಿ ನಡೆದುಕೊಂಡಂಥ ಮಹಾ ದೊಡ್ಡ ಮೌಲ್ಯಾಧಾರಿತ ರಾಜಕಾರಣ ಮಾಡತಕ್ಕಂಥವರು ಅವರು....

(ಗೊಂದಲ)

ಮಾನ್ಯ ನರಸಿಂಹರಾಯರಿಗೂ ನನಗೂ ಭಾರೀ ಸಂಬಂಧ!

ಹೌದು. He is the Prime Minister of the country. ವಿದೇಶಕ್ಕೆ ಹೋಗುತ್ತಾರೆ ಇವರ ಅಧ್ಯಕ್ಷರು. After Lal Bahadur Sastri, the only Prime Minister which we can recdongnise in this country is Mr. Narasimha Rao ಎಂದು ಹೇಳುತ್ತಾರೆ.

SRI B.S. YEDIYURAPPA : That is our leader's greatness.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೀಗೆ ಮಾಡಿದರೆ ಗ್ರೇಟ್‌ನೆಸ್ ಅಗುವುದಿಲ್ಲ.

ಶ್ರೀ ಬಿ.ಎಸ್ ಯಡಿಯೂರಪ್ಪ : ಈವತ್ತು ಹೊರ ದೇಶಕ್ಕೆ ಹೋದಾಗ ನಮ್ಮ ದೇಶದ ಪ್ರಧಾನಿಯನ್ನು ಹೊಗಳುವಂಥಾದ್ದು ನಮ್ಮ ಕಲ್ಚರ್, ಸುಪ್ರೀಂಕೋರ್ಟ್ ಮುಂದೆ ಅಫಿಡೆವಿಟ್ ಹಾಕಿ ಒಡೆಯುವುದು ನಿಮ್ಮ ಕಲ್ಚರ್!

(ಗೊಂದಲ)

The Paliament has got the supremacy even to amend the constitution., This country has amended the Indian Constitution 74 times. Because....

ಈ ಕಂಟ್ರಿ ಪರಿಸ್ಥಿತಿ : ಹಲವಾರು ಧರ್ಮಗಳು ಹಲವಾರು ಭಾಷೆಗಳು, ಹಲವಾರು ಜಾತಿಗಳಿರುವ ಈ ಸಮಾಜದಲ್ಲಿ ಎಲ್ಲರ ಸಂರಕ್ಷಣೆಗೆ ಪಾರ್ಲಿಮೆಂಟ್ ತನ್ನ ಕರ್ತವ್ಯ ಮಾಡಬೇಕಾಗುತ್ತದೆ.

It is not a confrontation with the Supreme court. ಸುಪ್ರೀಂಕೋರ್ಟ್ ತನ್ನ ಅಭಿಪ್ರಾಯ ವ್ಯಕ್ತಪಡಿಸುವಂತಹ ಕಾಲದಲ್ಲಿ ಪಾರ್ಲಿಮೆಂಟ್ ಒಂದು ವೇಳೆ ತಿದ್ದುಪಡಿ ಮಾಡಬೇಕು ಅಂದರೆ ಮಾಡುವಂತಹ ಸಾರ್ವಭೌಮತ್ವ ಅಧಿಕಾರ ಪಾರ್ಲಿಮೆಂಟಿಗಿದೆ. ಅದರ ಬಗ್ಗೆ ದೊಡ್ಡ ಚರ್ಚೆ ಬೇಡ. ಅದರೆ ನಾನು ಇಬ್ರಾಹಿಂನನ್ನು ಕರೆದುಕೊಂಡು ಹೋದರೆ ಅಪರಾಧ. ರಥಯಾತ್ರೆ ವ್ಯವಸ್ಥೆ ಮಾಡಿಕೊಂಡು 4ರಾಜ್ಯದ ಮುಖ್ಯಮಂತ್ರಿಗಳು ಹೋದರಲ್ಲಾ ಸ್ವಾಮಿ: ಇಡೀ ಹಿಂದೂಸ್ಥಾದಲ್ಲಿ ಭ್ರಷ್ಟ ರಾಜಕಾರಣ ಮಾಡುವಂಥದ್ದು ಕಾಂಗ್ರೆಸ್, ಜನತಾದಳ, ಈ ದೇಶದಲ್ಲಿ ಬಿಜೆಪಿ ಬಿಟ್ಟರೆ ಎರಡನೇ ಮಾತೇ ಇಲ್ಲ, ಒಂದು ಪತ್ರಿಕೆಯಲ್ಲಿ ಬರೆದು, ದೇವೇಗೌಡರ ಮಗ ಬಾರ್ಟನ್ ಕೋರ್ಟನಲ್ಲಿ ರೂಂ ಮಾಡಿಕೊಂಡು, ಫೋನ್ ಮಾಡಿದರೆ ಯಾರಾದರೂ ದುಡ್ಡು ತಂದುಕೊಡುತ್ತಾರೆಯೇ? ಇಟ್ಟಿಗೆ ತೋರಿಸಿಕೊಂಡು ಸಾವಿರ ಕೋಟಿ ಹೊಡೆದ ಜನ....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಇನ್ನೂ ಮುಗಿಸಿಲ್ಲ, ಪಾರ್ಲಿಮೆಂಟ್ ದಾಖಲೆ ಹೇಳುತ್ತೇನೆ. Nothing doing please...

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆ ದಿವಸ ದಾಖಲೆ ಕೊಡಿ ಎಂದು ಕೇಳಿದಿರಿ. ಯಾವ ಕಾನೂನಿದೆ, ಯಾವ ದಾಖಲೆ ಇದೆ ಹೇಳಿ ಈಗ. ಒಬ್ಬ ಮುಖ್ಯಮಂತ್ರಿಯಾಗಿ ಮಾತನಾಡುವ ಧಾಟಿಯೇ ಇದು?

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಗಳು ಏನೋ ಒಂದು ಮಾತು ಹೇಳಿದ್ದಾರೆ. ಏನು ಕೇಳೋದ್ದೋ ದಯಮಾಡಿ ಒಬ್ಬೊಬ್ಬರೇ ಮಾತನಾಡಿ. ಏಕೆ ಈಶ್ವರಪ್ಪನವರೇ ಹೀಗೆ ಮಾಡುತ್ತೀರಿ? ನೀವು ಸೀನಿಯರ್ ಮೆಂಬರ್, ದಯಮಾಡಿ ಕುಳಿತುಕೊಳ್ಳಿ, ಅವರು ಕೇಳುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ನಮ್ಮ ಪಕ್ಷದ ಮಾನ ಮರ್ಯಾದೆ ಪ್ರಶ್ನೆ, ನೀವ್ಯಾಕೆ ಸ್ವಾಮಿ ಕೋಪ ಮಾಡಿಕೊಳ್ಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ನಾನು ಏನು ಹೇಳಿದೆ ಕೇಳಿಕೊಳ್ಳಲಿಲ್ಲ ನೀವು. ನಾನು ಹೇಳಿದ್ದನ್ನು ನೀವು ಕೇಳಿದ್ದರೆ ನೀವು ಆತುರಪಡುತ್ತಿರಲಿಲ್ಲ, ನಾನು ಹೇಳಿದ್ದಿಷ್ಟೆ. ಮುಖ್ಯಮಂತ್ರಿಗಳು ಒಂದು ಮಾತು ಹೇಳಿದ್ದಾರೆ ಅದಕ್ಕೆ ತಾವು ವಿರೋಧಪಕ್ಷದ ನಾಯಕರು ಪ್ರತಿಕ್ರಿಯಿಸಿರಿ, ಎಲ್ಲರೂ ಏಳುವುದು ಬೇಡ ಎಂದು ಮತ್ತೆ ಈಶ್ವರಪ್ಪನವರು ನೀವು ಸೀನಿಯರ್ ಮೆಂಬರ್ ಇದ್ದೀರಿ, ತಾವು ಏಕೆ ಏಳುತ್ತೀರಿ, ನಿಮ್ಮ ನಾಯಕರಿದ್ದಾರೆ ಅವರು ಮಾತನಾಡುವುದು ಬೇಡ ಎಂದು ನಾನು ಹೇಳಲಿಲ್ಲ, ಕೇಳೋ ಮಾತು ಪೂರ್ತಿ ಕೇಳಿದರೆ ಅದಕ್ಕೆ ಪ್ರತಿಕ್ರಿಯಿಸುವುದು ಸುಲಭವಾಗುತ್ತದೆ. ಅರ್ಧರ್ಧ ಕೇಳಿದರೆ ಏನಾಗುತ್ತದೆ ಹೇಳಿ? ಈಗ ನೀವಾದರೂ ಅಥವಾ ನಿಮ್ಮ ಮುಖಂಡರಾದರೂ ಹೇಳಿ, ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಹೇಳುತ್ತಾರೆ, ಅವರೇನು ಓಡಹೋಗುತ್ತಿಲ್ಲವಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಒಂದು ಮಾತು ಹೇಳಲು ದಯವಿಟ್ಟು ಅವಕಾಶ ಕೊಡಿ. ನಿನ್ನೆ ದಾಖಲೆ ಕೊಡಬೇಕು, ಕಾನೂನೂ ಪ್ರಕಾರವಾಗಿ ಸನ್ಮಾನ್ಯ ರೇವಣ್ಣನವರ ಬಗ್ಗೇ ನಮ್ಮ ನಾಯಕರು ಪ್ರಸ್ತಾಪ ಮಾಡಲಿಲ್ಲ, ನಿಮಗೆ ಸೂಚನೆ. ಕೊಡಲಿಲ್ಲ, ಇವತ್ತು ಇಡೀ ದೇಶದಲ್ಲಿ ಒಂದು ರಾಷ್ಟ್ರೀಯ ಪಕ್ಷ ಇಡೀ ದೇಶದ ಕೋಟಿಗಟ್ಟಲೆ ಹಿಂದೂಗಳು ಅಲ್ಲಿ ಒಂದು ರಾಮಮಂದಿರ ಕಟ್ಟುವ

ಅಪೇಕ್ಷೆಪಟ್ಟಿರುವಂಥ ಸಂದರ್ಭದಲ್ಲಿ ಆ ಒಂದು ಸೂಕ್ಷ್ಮತೆಯನ್ನು ಅರಿತು ಅಲ್ಲಿ ಹೋಗಿ ನಾವು ಒಂದು ರಾಮಮಂದಿರ ಕಟ್ಟಿಬಂದಿದ್ದೇವೆ. ನಿನ್ನೆ ಕಾನೂನುಪ್ರಕಾರವಾಗಿ ಮಾತನಾಡಲಿಲ್ಲವೆಂದು ಇಡೀ ಕರ್ನಾಟಕದ ಜನತೆ ಮುಂದೆ ದೊಡ್ಡಸ್ತಿಕೆ ತೋರಿಸಬೇಕು ತಮ್ಮ ಮಾತಿಗೆ ಗೌರವ ಕೊಡಬೇಕೆಂಬ ಒಂದೇ ಉದ್ದೇಶದಿಂದ ನಮ್ಮ ನಾಯಕರು ವಿಷಾದ ವ್ಯಕ್ತಪಡಿಸಿದ್ದಾರೆ. ನಾನು ನಿಮಗೆ ಕೈಮುಗಿದು ಕೇಳುತ್ತೇನೆ. ಅದರಂತೆ ಇವತ್ತು ಅವರು ಕೋಟೆ ಹೊಡೆದಿದೆ ಎಂದು ಹೇಳಿರುವುದಕ್ಕೆ ಅವರು ವಿಷಾದ ವ್ಯಕ್ತಪಡಿಸಲೇಬೇಕು. ಅದಕ್ಕೆ ಅವರು ದಾಖಲೆ ಕೊಡಲೇಬೇಕು.

MR. SPEAKER : I will allow him to speak and then you can react.

7.30 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಒಂದು ಮಾತನ್ನು ಪುನರುಚ್ಚಾರ ಮಾಡುತ್ತೇನೆ. ರಾಮನ ಹೆಸರಿನಲ್ಲಿ ಇಟ್ಟಿಗೆಯನ್ನು ತೋರಿಸಿ ಒಂದು ಸಾವಿರ ಕೋಟಿ ರೂಪಾಯಿ ವಸೂಲಿಯಾದದ್ದು ನನಗೆ ಗೊತ್ತಿದೆ ಎಂದು ಹೇಳಿದೆ, ಹೇಗೆ ಪಾರ್ಲಿಮೆಂಟ್‌ನಲ್ಲಿ ಶ್ರೀ ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದಾಗ ಅವರಿಗೆ ಬೆಂಬಲ ಕೊಡತಕ್ಕಂತಹ ಕಾಲದಲ್ಲಿ ಯಾವ ಇನ್‌ಕಂ ಟ್ಯಾಕ್ಸ್ ಆಫೀಸರ್ ನೋಟೀಸ್ ಕೊಡುತ್ತಾನೋ 244 ಗಂಟೆಗಳಲ್ಲಿ This has been debated in the parliament and he has been suspended and sent home because VP singh has to survive with the mercy of the BJP and they said he should get out.

ನೋಟೀಸ್ ಕೊಟ್ಟಿದ್ದು ಅಸತ್ಯವೇ ? ಆ ಅಧಿಕಾರಿಯನ್ನು ಹೊರಗೆ ಹಾಕಿದ್ದು ಅಸತ್ಯವೇ? If it is not true, I am going to get out of this House Why?

(ಗೊಂದಲ)

SRI H.D DEVE GOWDA : IT had been debated in thee House.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ,.....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಆ ಇನ್‌ಕಂ ಟ್ಯಾಕ್ಸ್.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಕೋಟಿ ಕೋಟಿ ಜನರ ಭಾವನೆಯನ್ನು ತೃಪ್ತಿಪಡಿಸುವುದಕ್ಕೋಸ್ಕರ ನಾವು ರಾಮ ಮಂದಿರ ಕಟ್ಟಿದೆವು. ಯಾವುದೇ ಒಬ್ಬ ವ್ಯಕ್ತಿ ಕರ್ನಾಟಕರಾಜ್ಯದಲ್ಲಿ ಇರಲಿ ಇಲ್ಲವೇ ಇಡೀ ದೇಶದಲ್ಲಿರುವ ಒಬ್ಬ ವ್ಯಕ್ತಿ ವಿಧಾನ ಸೌಧದಲ್ಲಿ ನಡೆದಂತಹ ಘಟನೆಯನ್ನು ಮೆಚ್ಚಿದ್ದಾನೆ ಎಂದು ಹೇಳಿದರೆ ನಾನು ನೀವು ಹೇಳುವುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ ಭಾರತ ದೇಶದಲ್ಲಿ ಹಿಂದೂ ಸ್ಥಾನದಲ್ಲಿ ಅಲ್ಲಿ ರಾಮ ಮಂದಿರ ಕಟ್ಟಬೇಕೆಂಬ ಕೋಟಿ ಕೋಟಿ ಜನರು ಅಪೇಕ್ಷೆ ಪಟ್ಟಿದ್ದನ್ನು ಪೂರೈಸಸಿದ್ದೇವೆ. ಇದರಲ್ಲಿ ವಿಷಾದ ಇಲ್ಲ, ಸಂತೋಷಪಡುತ್ತೇವೆ. ಒಬ್ಬ ರಾಜ್ಯದ ಮುಖ್ಯ ಮಂತ್ರಿ ಅನೇಕ ವರ್ಷಗಳ ಹಿಂದೆ ಯಾರೋ ಪುಣ್ಯಾತ್ಮರು ಕಟ್ಟಿದಂತಹ ಈ ವಿಧಾನ ಸೌಧ ಪ್ರಜಾಪ್ರಭುತ್ವದ ದೇಗುಲವೆಂದು ತಿಳಿದುಕೊಂಡ ಈ ವಿಧಾನ ಸೌಧದಲ್ಲಿ ಗೂಂಡಾಗಿರಿ ನಡೆಸಿ ಗ್ಲಾಸ್‌ಗಳನ್ನು ಪುಡಿ ಪುಡಿ ಮಾಡಿ ಮುಖ್ಯ ಮಂತ್ರಿಯಾಗಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅಯೋಧ್ಯೆಗೆ ಇದಕ್ಕೆ ಹೋಲಿಸಬೇಡಿ. ಆಕಾಶಕ್ಕೂ ಭೂಮಿಗೂ ಹೋಲಿಸಿದ ಹಾಗೆ. ರಾಕ್ಷಸರಿಗೂ ದೇವರಿಗೂ ಹೋಲಿಸಿದ ಹಾಗೆ, ಅಯ್ಯೋಧ್ಯೆಗೂ ಈ ಗೂಂಡಾಗಿರಿದೆ ಹೋಲಿಸಿದರೆ ರಾಕ್ಷಸರಿಗೂ ದೇವರಿಗೂ ಹೋಲಿಸಿದ ಹಾಗೆ. ನಾನು ಅದಕ್ಕೋಸ್ಕರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಒಂದು ಸಾವಿರ ಕೋಟಿ ರೂಪಾಯಿ ಲೂಟಿ

ಮಾಡಿದ್ದಾರೆಂದು ಭಾರತೀಯ ಜನತಾ ಪಕ್ಷದ ಮೇಲೇನು ಆಪಾದನೆ ಮಾಡಿದ್ದಾರೆ ಅದಕ್ಕೆ ತಕ್ಷಣ ಕ್ಷಮೆ ಕೇಳಬೇಕು. ವಿಷಾದ ವ್ಯಕ್ತಪಡಿಸಬೇಕು. ಇಲ್ಲದಿದ್ದೆ ಖಂಡಿತ ಇದನ್ನು ಬಿಡುವುದಕ್ಕೆ ಸಾಧ್ಯವಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ಹೂಡಿದಂತಹ ಅನಾಚಾರ ನಮ್ಮಲ್ಲಿ ಬಹಳ ಜನಕ್ಕೆ ಕಾನೂನು ಗೊತ್ತಿಲ್ಲ. ನಾನು ಒಪ್ಪುತ್ತೇನೆ ಕಾನೂನು ಗೊತ್ತಿಲ್ಲದೇ ಇರತಕ್ಕಂತಹ ಜನ ಕಾನೂನು ಗೊತ್ತಿಲ್ಲದೆಯೇ ಒಬ್ಬ ಮುಖ್ಯಮಂತ್ರಿಯ ಮಗನ ಬಗ್ಗೆ ಪ್ರಸ್ತಾಪ ಮಾಡಿದದು ನಿಜ. ಕಾನೂನು ಗೊತ್ತಿಲ್ಲದೆ ಅದನ್ನು ನಾವು ಒಪ್ಪಿಕೊಂಡಿದೆವು. ಆದರೆ ದೊಡ್ಡಸ್ಥಿಕೆ ಕಾನೂನು ಗೊತ್ತಿರುವಂತಹ ಜನರು....

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಆ ಇಟ್ಟಿಗೆಯನ್ನು ತೆಗೆದುಕೊಂಡು ಹೋಗಿ ಏನು ಮಾಡಿದಿರಿ....

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ನಾವು ಜಿಲ್ಲಾ ಪರಿಷತ್ ಅದ್ಯಕ್ಷರು ಬೇರೆ ಅಗಿದ್ದೀರಿ, ನೀವು ಅಲ್ಲೇ ಸಭೆ ನಡೆಸುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸಭಾನಾಯಕರು ಲೂಟಿ ಅಂತಲೂ ಹೇಳಿಲಿಲ್ಲ. ನಾನೊಂದು ಚೆಕ್‌ಕೊಟ್ಟರೆ 10 ಕೋಟಿ ಕಳಿಸುವವರು ಇದ್ದಾರೆ ಅಂತ ಆ ಹಿನ್ನಲೆಯಲ್ಲಿ ಫೋನ್ ಮಾಡಿದರೆ, ನೀವು ಇಟ್ಟಿಗೆ ತೋರಿಸಿ ಸಾವಿರಾರು ಕೋಟಿ ರೂಪಾಯಿ ಕಲೆಕ್ಟ್ ಮಾಡಿದರಲ್ಲಾ ಹೇಗೆ ಮಾಡಿದಿರಿ ಎಂದು ಹೇಳಿದರು. ಲೂಟಿ ಎಂದು ಅವರು ಹೇಳಲಿಲ್ಲ. ಇಟ್ಟಿಗೆ ತೋರಿಸಿದ್ದು ಹೌದು ಹಣ ಕಲೆಕ್ಟ್ ಮಾಡಿದ್ದು ಹೌದು ನಮ್ಮ ಹಳ್ಳಿಗಳಲ್ಲಿ ದಾವಣಗೆರೆಯಲ್ಲಿ ಜನರು ದುಡ್ಡು ಕೊಟ್ಟಿದ್ದೂ ಹೌದು. ಅದು ಫ್ಯಾಕ್ಟ್ ಆದರೂ ಸಾವಿರಾರು ಕೋಟಿ ಎಂದು ಅವವು ಏಕೆ ಹೇಳಿದರು ಅಂದರೆ ಪಾರ್ಲಿಮೆಂಟ್‌ನಲ್ಲಿ ಈ ವಿಷಯ ಬಂದಿದ್ದರಿಂದ ಇನ್‌ಕಂ ಟ್ಯಾಕ್ಸ್ ನೋಟೀಸ್ ಕೊಟ್ಟಿದ್ದರಿಂದ. ಸಾವಿರ ಕೋಟಿ ಎಂದು ಹೇಳಿದ್ದು ಬಹಳ ಸಣ್ಣದಾಯಿತು. ಅವರಿಗೆ ಸಿಟ್ಟು ಏಕೆ ಬಂತು ಅಂದರೆ ಬರೀ ಸಾವಿರ ಕೋಟಿಯೇ ಇವರು ಹೇಳಿದ್ದು ಇನ್ನೂ ಜಾಸ್ತಿ ಮಾಡಿದ್ದಾರೆ.......

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಈಶ್ವರಪ್ಪನವರಿಗೆ ಬಂತು, ಮಾನ್ಯ ಯಡಿಯೂರಪ್ಪನವರಿಗೆ ಬಂತು ಎಂದು ಅವರು ಹೇಳಲಿಲ್ಲ. ಇವರಿಗೆ ಬಂದಿದ್ದಾರೆ ಚೆನ್ನಾಗಿತ್ತು ಇವರಿಗೆಲ್ಲಾ ಆ ಹಣ ಬರುವುದಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ ......

ಅಧ್ಯಕ್ಷರು : ಮಾನ್ಯ ನಂಜೇಗೌಡರೇ. ಮಾನ್ಯ ಈಶ್ವರಪ್ಪನವರು ಅವೇಶದದಲ್ಲಿದ್ದರು .ಅವರು ಮಾತನಾಡುತ್ತಾ ಒಂದು ಮಾತನ್ನು ಪ್ರಸ್ತಾಪ ಮಾಡಿದರು. ಆಡಳಿತ ಪಕ್ಷಕ್ಕೆ ಒಂದು ನಮಗೆ ಒಂದು ಎನ್ನುತಕ್ಕಂತಹ ಮಾತನ್ನು ಹೇಳಿದ್ದಾರೆ. ಅಮೇಲೆ ಸಂವಿಧಾನವೆಂದು ಪಾಪ ಹುಷಾರಾದರು. ಇಲ್ಲಿ ಸಂವಿಧಾನ ಪ್ರಶ್ನೆ ಬರುವುದಿಲ್ಲ. ನಾನು ಈ ಸ್ಥಾನದಲ್ಲಿ ಕೂತಿದ್ದಾಗ ಒಂದು ಅಲ್ಲ 10 ಸಂದರ್ಭಗಳಲ್ಲಿ ಹೇಳಿದ್ದೇನೆ. ನಾನು ಬಹಳ ಸಾಮಾನ್ಯ ಈ ಸ್ಥಾನ ಮಾತ್ರ ಬಹಳ ದೊಡ್ಡದು. ಸಾಮಾನ್ಯನಾಗಿರತಕ್ಕಂತಹ ನಾನು ಈ ಸ್ಥಾನಕ್ಕೆ ಬಂದಿದ್ದೇನೆಂದು ಹೇಳಿದ್ದೇನೆ. ಪ್ರತ್ಯಕ್ಷವಾಗಿ ಪರೋಕ್ಷವಾಗಿ ಯಾರು ಯಾವುದೇ ಸಂದರ್ಭದಲ್ಲಿ ಆಡತಕ್ಕಂಥ ಮಾತು ಈ ಸ್ಥಾನದ ಗೌರವಕ್ಕೆ

ಚ್ಯುತಿ ಬರತಕ್ಕಂತಹದ್ದು ದಾಖಲೆಯಲ್ಲಿರುವ ಬೇಕೆಂದು ಸದನದ ಅಪೇಕ್ಷೆ ಇದ್ದರೆ ನನ್ನ ಅಭ್ಯಂತರ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ ; ಅದೇನೇ ಇದ್ದರೂ ನೀವು ನೋಡಿ ತೆಗೆಸಿಹಾಕಿ.

ಅಧ್ಯಕ್ಷರು : ನಾನು ಈ ಸ್ಥಾನದಲ್ಲಿ ಕುಳಿತಿದ್ದೇನೆ. ನನ್ನ ಕರ್ತವ್ಯ ನೋಡಿ ನಾನು ಮೈಮರೆತು ಕುಳಿತುಕೊಳ್ಳುವ ಹಾಗಿಲ್ಲ ಆದ್ದರಿಂದ ನಿಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಸಭಾನಾಯಕರು ಏನೋ ಹೇಳಿ ನಾವು ಮಾಡುವುದನ್ನೆಲ್ಲಾ ಜಸ್ಟಿಫೈ ಮಾಡಿಕೊಳ್ಳುತ್ತೇವೆಂದು ಹೇಳುವುದು ಬೇರೆ. ನಿಮ್ಮ ಅಪಾರಾಧಗಳನ್ನೆಲ್ಲಾ ಜಸ್ಟಿಫೈ ಮಾಡಿಕೊಳ್ಳುವುದ್ಯಕೆ ನಾವು ಇನ್ನೇನ್ನೋ ತೋರಿಸುತ್ತೇವೆಂದು. ನ ವು ಇಟ್ಟಿಗೆ ಕಲೆಕ್ಟ್ ಮಾಡಿದಿರಿ ಅದರಿಂದ ನಾನು 10 ಕೋಟಿ ತರಿಸಿಕೊಂಡರೆ ತಪ್ಪು ಇಲ್ಲ ಎದು ಹೇಳುವುದಿದ್ದರೆ.......

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನೀವೇಕೆ ಸುಮ್ಮನೆ ಮಾತನಾಡುವುದಕ್ಕೆ ಹೋಗುತ್ತೀರಿ? ನಿಮಗೆ ಅದ್ಯಕೆ ಸಂಬಂಧ ಇಲ್ಲ. ನೀವು ಇಟ್ಟಿಗೆ ತೆಗೆದುಕೊಂಡು ಹೋಗುವಾಗ ವೈ ರಾಮಕೃಷ್ಣ ಇದ್ದರಾ.......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜೀವರಾಜ ಆಳ್ವರವರಿಗೆ, ನಂಜೇಗೌಡರಿಗೆ ಅನ್ವಯವಾಗುವುದಿಲ್ಲ, ಈ ರೀತಿ ಹಚ್ಚಿಕೊಂಡೇ ಬೆಂಕಿ ರಾಜಕಾರಣ ಮಾಡಿಕೊಂಡು ಬಂದಿರಿ......

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ನೀವು ಇಟ್ಟಿಗೆ ತೋರಿಸಿ ದುಡ್ಡು ಕಲೆಕ್ಟ್ ಮಾಡಿದಿರಿ. ಅದು ಹೌದಲ್ಲವೇ? ಕಲೆಕ್ಟ್ ಮಾಡಿದ್ದು ಹೌದು ನಿಮಗೆ ಅಂತಲ್ಲ ನಿಮ್ಮ ಸ್ವಂತಕ್ಕೆಂದು ಅಲ್ಲ, ಈಶ್ವರಪ್ಪನವರಿಗೆ ಎಂದು ಅಲ್ಲ, ಬಿಜೆಪಿಯವರು ಇಟ್ಟಿಗೆ ತೋರಿಸಿ ಸಾವಿರ ಕೋಟಿ ಹಣ ಕಲೆಕ್ಟ್ ಮಾಡಿದ್ದು ಹೌದು. ಮಸೀದಿ ಕೆಡವುದಕ್ಕೆ ಮಾಡಿದರೋ ಮಂದಿರ ಕಟ್ಟುವುದಕ್ಕೆ ತೆಗೆದುಕೊಂಡರೋ. ಒಟ್ಟಿನಲ್ಲಿ ಹಣಎ ಕಲೆಕ್ಟ ಮಾಡಿದಿರಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ವಿಶ್ವಹಿಂದೂ ಪರಿಷತ್ತಿನಲ್ಲಿ ರಾಮ ಮಂದಿರ ಕಟ್ಟುವಂತಹ ಸಂದರ್ಭ ಬಂದಾಗ ಈ ನಾಡಿನ ಮೂಲೆ ಮೂಲೆಗಳಿಂದ ರಥಯಾತ್ರೆ ಮಾಡಿ ಯಾವ ಮಹತ್ವವಾದಂಥ ಅಲ್ಲ ಕೆಲಸವಾಗುತ್ತಿದೆ. ಅದರಲ್ಲಿ ಒಂದು ಸದ್ಭಾವನೆಯನ್ನು ಇಟ್ಟುಕೊಂಡಿರುವಂತಹ ಜನರಿಂದ ಇಟ್ಟಿಗೆ ಕಲೆಕ್ಟ್ ಮಾಡಿ ಅವರ ಒಂದು ಪರಿಶ್ರಮದ ಇಟ್ಟಿಗೆಯನ್ನು ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟಿಗೆ ಜೋಡಿಸಿ ಮಂದಿರವನ್ನು ಕಟ್ಟಿದೆವು.....

(ಗೊಂದಲ)

ಶ್ರೀ ಆರ್. ಶ್ರೀನಿವಾಸ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಅವರು ವಿರೋಧ ಪಕ್ಷದ ನಾಯಕರು ಅವರಿಗೆ ಮಾತನಾಡುವ ಹಕ್ಕು ಇಲ್ಲವೇ? ಅವರು ಮಾತನಾಡುವಾಗ ಸಹಕರಿಸಿ. ಇಲ್ಲಿ ಧೀಮಂತ ನಾಯಕರಿದ್ದಾರೆ. ಅವರು ಮಾಡುತ್ತಾರೆ. ನಿಮಗೆ ಅದೆಲ್ಲಾ ಮಾಡುವುದಕ್ಕೆ ಸಮಯ ಬೇಕು ನೀವು ಕುಳಿತುಕೊಳ್ಳಿ. ನೀವು ನನ್ನ ಹತ್ತಿರ ಬಂದು ಹೇಳಿ. ನಾನು ನೀನು ಒಂದೇ ಊರಿನವರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡತಕ್ಕಂತಹ ಒಂದು ಸಂದರ್ಭದಲ್ಲಿ ಕೇಂದ್ರದ ಯಾವುದೇ ಒಬ್ಬ ಸಚಿವರ ಬಗ್ಗೆ ಅವರ ಸರ್ಕಾರದ ಬಗ್ಗೆ ಒಂದು ಶಬ್ದ ಹಗುರವಾಗಿ ಮಾತನಾಡಿಲ್ಲ, ನೀವು ಯಾವ ಭಾರತೀಯ ಜನತಾ ಪಾರ್ಟಿ ಒಂದು ಪೈಸೆ ಸಹ ಆ ರಾಮಜನ್ಮ ಸ್ಥಾನದಲ್ಲೆ ಸಂಗ್ರಹ ಮಾಡದೇ ಇರುವಂತಹ ಕಾಲದಲ್ಲಿ ಸಾವಿರ ಕೋಟಿ ಸಂಗ್ರಹ ಮಾಡಿದ್ದೀರಿ ಎಂದು ಹೇಳಿದ್ದು ಅಕ್ಷಮ್ಯ ಅಪರಾಧ. ನೀವು ಕ್ಷಮಾಪಣೆ ಕೇಳಬೇಕು. ಇಲ್ಲದಿದ್ದರೆ ಪ್ರೂವ್ ಮಾಡಬೇಕು. ಇಲ್ಲದಿದ್ದರೆ ಈ ದೇಶದ ಜನ ಎಂತಹ ಒಬ್ಬ ವ್ಯಕ್ತಿಯನ್ನು ಈ ನಾಡಿನ ಮುಖ್ಯಮಂತ್ರಿಯಾಗಿ ಮಾಡಿಕೊಂಡಿರಪ್ಪ ಎಂದು ಜನರು ಪಶ್ಚಾತ್ತಾಪ ಪಡುತ್ತಾರೆ. ಅವರು ಕ್ಷಮಿಸುವುದಿಲ್ಲ, ಆ ಸ್ಥಾನದಲ್ಲಿ ಶೋಭೆ ತರುವಂತೆ ಮಾತನಾಡಿ ಸಂಯಮವನ್ನು ಕಳೆದುಕೊಂಡು ಆಸ್ಥಾನದ ಗೌರವವನ್ನು ಕೆಳಗೆ ಇಳಿಸುವಂತಹ ಕೆಲಸ ಮಾಡಬೇಡಿ ಎಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಲೋಕಸಭೆಯಲ್ಲಿ........

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಇದರಲ್ಲಿ ನಮ್ಮನ್ನು ಮೂರೇ ತಿಂಗಳಿಗೆ ಕೋಟಿ ಲೂಟಿ ಎಲ್ಲಾ ನಾವು ಮಾಡಿದ್ದೇವೆಂದು ಹೇಳಿದರು. ನಾನೇನು ಅವರು ತೆಗೆದುಕೊಂಡರು ಎಂದು ಹೇಳಲಿಲ್ಲ, ಶ್ರೀಮಾನ್ ಯಡಿಯೂರಪ್ಪನವರು ಸತ್ಯವನ್ನು ಹೇಳಿದರು. ಹೌದು ಕೋಟಿ ಕೋಟಿ ಹಿಂದೂಗಳು ಈ ದೇಶದಲ್ಲಿ ಸದ್ಭಾವನೆಯಿಂದ ಹಣವನ್ನು ಕೊಟ್ಟರು. ನಿಜ ಇದೆಲಲಾ ಹೇಳಿದರು. ಈಗ ಹಣವನ್ನು ಕೊಟ್ಟಿದ್ದು ಒಪ್ಪಿಕೊಂಡಿದ್ದಾರೆ. ಒಂದು ನೋಟೀಸ್ ಕೊಟ್ಟರೆ ಅಪ್ಪಾ ಇಷ್ಟು ಹಣವನ್ನು ಕೊಟ್ಟಿದ್ದೇವೆ, ನಾವು ದೇವಸ್ಥಾನ ಕಟ್ಟುತ್ತೇವಮೆ ಎಂದು ಒಂದು ಮಾತು ಹೇಳಿದ್ದಕ್ಕೆ ಆ ಇನ್‌ಕಂ ಟ್ಯಾಕ್ಸ್ ನೋಟೀಸ್ ಕೊಟ್ಟಂಥ ಅಧಿಕಾರಿ ಯಾವ ಅಪರಾಧವನ್ನು ಮಾಡಿದ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಜೆಪಿ ಕೊಟ್ಟಿದ್ದರೆ ನೀವು ಹೇಳಿ. I will agree. ತಾವು ಆ ನೋಟೀಸನ್ನು ಬಿಜೆಪಿ ಕೊಟ್ಟಿದ್ದಾರೆ ಎಂದು ರೆಕಾರ್ಡ್‌ನಲ್ಲಿ ಹೋಗಲಿ. ಆಮೇಲೆ ನಾವು ಪ್ರಿವಿಲೇಜ್ ಮೂವ್ ಮಾಡೋಣ. ಇವತ್ತೇ ಅದರ ಬಗ್ಗೆ ಚರ್ಚೆಯಾಗಲಿ. ಬೇರೆ ವಿಷಯ ಅದು.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೇಳಲಿಲ್ಲ, ನಾನು ಏನು ಹೇಳಿದೆ ಎಂದರೆ ವಿಶ್ವಹಿಂದೂ ಪರಿಷತ್ ಹೆಸರೂ ಹೇಳಲಿಲ್ಲ, ಬಿಜೆಪಿ ಹೆಸರೂ ಹೇಳಲಿಲ್ಲ, ನಾನು ಏನು ಹೇಳಿದ್ದೇನೆ. ಇನ್ನೊಂದು ಸಾರಿ ಹೇಳುತ್ತೇನೆ. ಪ್ರೊಸಿಡಿಂಗ್ಸ್‌ನ್ನು ತರಿಸಿ. ನಾನೇನು ಅದನ್ನು ಫೋರ್ಜ್ ಮಾಡಬೇಕಾದ ಅಗತ್ಯವಿಲ್ಲ, ನಾನು ಶ್ರೀಮಾನ್

ವಿ.ಪಿ. ಸಿಂಗ್‌ರವರು ಭಾಜಾಪದ ಬೆಂಬಲ ತೆಗೆದುಕೊಂಡ ಪರಿಣಾಮ ಆ ಇನ್‌ಕಂ ನೋಟೀಸ್ ಕೊಟ್ಟು ಅಧಿಕಾರಿಯನ್ನು 24 ತಾಸಿನಲ್ಲಿ ಇವತ್ತು ಮನೆಗೆ ಕಳುಹಿಸಿದರು.

(ಗೊಂದಲ)

ಡಾ॥ ಯು. ಆರ್. ಚಿತ್ತರಂಜನ್ : ಅದು ಶುದ್ಧ ಸುಳ್ಳು.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಇನ್‌ಕಂ ಟ್ಯಾಕ್ಸ್ ಆಫೀಸರನ್ನು ತೆಗೆಯದೇ ಇದ್ದರೆ ಇನ್‌ಕಂ ಟ್ಯಾಕ್ಸ್ ಆಫೀಸರನ್ನು ಹೊರಗೆ ಕಳುಹಿಸದಿದ್ದರೆ 24 ಗಂಟೆಯೊಳಗೆ ನನಗೆ ದಯಮಾಡಿ ನೀವು ಟೈಮ್ ಕೊಡಿ. ನಾಳೆ ಬೆಳಗ್ಗೆ ದೆಹಲಿಯಿಂದ ತರಿಸುತ್ತೇನೆ. ಇವರು ಆ ಅಧಿಕಾರಿಯನ್ನು ಹೊರಗೆ ಕಳುಹಿಸದಿದ್ದರೆ. Why that officer had to be sent out of the account is to be straight forward? ಯಾವುದಾದರೂ ಎತ್ತಿಕೊಳ್ಳಲಿ. ಯಾರು ಅದನ್ನು ಇಟ್ಟುಕೊಂಡಿದ್ದಾರೋ ಅದು ನನಗೆ ಸಂಬಂಧ ಇಲ್ಲ. ನೋಟೀಸ್ ಯಾರಿಗೆ ಕೊಟ್ಟರು ಎಂದು ನಾನು ಹೇಳಲಿಲ್ಲ. ಒಬ್ಬ ಇನ್‌ಕಂ ಟ್ಯಾಕ್ಸ್ ಅಧಿಕಾರಿ ಈ ದೇಶದಲ್ಲಿ ಪ್ರಾಮಾಣಿಕವಾಗಿ ತನ್ನ ಕರ್ತವ್ಯ ಮಾಡಿದರೆ ವಿ.ಪಿ ಸಿಂಗ್ ಅವರಿಗೆ ಗತ್ಯಂತರವಿರಲಿಲ್ಲ. ಇದರ ಬೆಂಬಲ ಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹತ್ತು ನಿಮಿಷ ಹೌಸನ್ನು ಅಡ್ಜರ್ನ್ ಮಾಡಿ ಸ್ವಾಮಿ. ದಾಖಲೆ ತರಿಸಿ ಸ್ವಾಮಿ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ತರಿಸಿ ಸ್ವಾಮಿ. ಅವರೇ ಹೇಳಿದ್ದಾರೆ. ಹಣ್ಣವನ್ನು ವಸೂಲಿ ಮಾಡಿದ್ದೇವೆ ಎಂದು. It has been debated in the parliament.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇವೆ. ದಾಖಲೆಯನ್ನು ತರಿಸಿ ಮುಂದುವರಿಸಿ ಸ್ವಾಮಿ. ದಾಖಲೆಯನ್ನು ತರಿಸಿ ಮಾತನಾಡಲಿ. ಆಮೇಲೆ ಮುಂದುವರಿಸಲಿ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಈಗ ದಾಖಲೆಯನ್ನು ನೋಡುವ ಅವಶ್ಯಕತೆ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಅದೇನೋ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡುತ್ತಿದ್ದಾರೆ. ನಾನು ಕುಳಿತುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಅವರು ಏನು ಹೇಳಿದರು ಎನ್ನುವುದಕ್ಕೆ ದಾಖಲೆ ನೋಡಬೇಕಾದ ಅವಶ್ಯಕತೆ ಇಲ್ಲ. ಅವರು ಹೇಳಿದ ರೀತಿ, ಜೆ.ಹೆಚ್. ಪಟೇಲ್ ಹೇಳಿದ ರೀತಿ ನಾವೇ ಹೋಗಿ ಕಲೆಕ್ಟ್ ಮಾಡಿಕೊಂಡುಬಿಟ್ಟಿದ್ದೇವೆ. ಬಿ.ಜೆ.ಪಿ ಯವರ ಕಡೆ ಕೈತೋರಿಸಿ ಹೇಳಿದರು.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೇಳಿದೆನೋ?

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ನಿಮ್ಮ ತಪ್ಪುಗಳನ್ನು ಜಸ್ಟಿಫೈ ಮಾಡಿಕೊಳ್ಳುವುದಕ್ಕೆ ಯಾವುದೋ ಒಂದುವಿಚಾರ ತಂದು ನೀವು ಅಸರ್ಟ್ ಮಾಡಿಕೊಂಡು ಜಸ್ಟಿಫೈ ಮಾಡುತ್ತೀರಾ?

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ನಂಜೇಗೌಡರೇ,ತಪ್ಪನ್ನು ಜಸ್ಟಿಫೈ ಮಾಡಿಕೊಳ್ಳಬೇಕಾಗಿಲ್ಲ. ನೀವು ಹಲವಾರು ವಿಷಯಗಳಲ್ಲಿ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಹಾಕಿದ್ದೀರಿ. ಎಲ್ಲಾ ತೆಗೆದುಕೊಂಡು ಬಂದ್ರಿ. you are a free bird. you are not afraid of anybody. ನೀವು ನಾಳೆ ಬೆಳಿಗ್ಗೆ ಈ ಸರ್ಕಾರ ಏನಾದರೂ ತಪ್ಪು ಮಾಡಿ ಲೂಟಿ ಮಾಡಿದೆ ಎಂದರೆ you go to any extent, take action. ನಮ್ಮದೇನೂ ತಕರಾರು ಇಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಲೂಟಿ ಎಂದರೆ ಒಂದು ಆಗುತ್ತಲ್ಲಾ.....

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮದು ಕೋಟಿ ಲೂಟಿ ಒಂದು ಆಗುವುದಿಲ್ಲವೇ? ನಮ್ಮದು ಕೋಟಿ ಲೂಟಿ. ಇದು ಕೋಟಿ ಲೂಟಿ ಒಂಭತ್ತು ತಿಂಗಳಲ್ಲೇ ನಾವು ಕೋಟಿ ಲೂಟಿ ಮಾಡಿದ್ದೇವೆ ಇಲ್ಲಿ ಕುಳಿತುಕೊಂಡು ನಾವು. ಮೂರು ತಿಂಗಳಿಗೆ ಕೋಟಿ ಲೂಟಿ ಮಾಡಿದ್ದೇವೆ ನಾವು.

ಶ್ರೀ ಹೆಚ್.ಎನ್. ನಂಜೇಗೌಡ : ಮಾತು ಮಾತಿಗೆ ಕೋಟಿ ಲೂಟಿ,. ಕೋಟಿ ಲೂಟಿ ಒಂದು ಹೇಳುತ್ತಿರುವುದರಿಂದ ನೀವು ಏನು ಹೇಳುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ.

SRI H.D. DEVE GOWDA : I am going to take the proceedings.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಅದಕ್ಕೆ ನೀವು ಯಾರೋ ಇಟ್ಟಿಗೆ ಕಲೆಕ್ಟ್ ಮಾಡಿದರು ಎಂದು.......

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ನಿಮ್ಮನ್ನು ಹೇಳಿದೆನಾ?

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಬಿಜೆಪಿ ಯವರಿಗೆ ಹೇಳಿದಿರಾ? ಹಾಗಾದರೆ ಬಿಜೆಪಿಯವರಿಗೆ ಹೇಳಲಿಲ್ಲವೇ?

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ನಿಮಗೆ ಹೇಳಿದೆನಾ ಎಂದೆ. ನೋ. ನಾನು ಏನು ಹೇಳಿದೆ ಎಂದರೆ ಒಬ್ಬ ಅಧಿಕಾರಿ......

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ತರಿಸಿ ದಾಖಲೆಯನ್ನು ಸ್ವಾಮಿ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ವಿ.ಪಿ. ಸಿಂಗ್‌ರವರು ಅವತ್ತು ಬಿಜೆಪಿ ಬೆಂಬಲ ತೆಗೆದುಕೊಂಡು ಅಧಿಕಾರಿ ನಡೆಸಬೇಕಾಗಿದ್ದರಿಂದ ಆ ಇನ್‌ಕಂ ಟ್ಯಾಕ್ಸ್ ಆಫೀಸರ್ ಮನೆಗೆ ಹೋದ ಎಂದು ಹೇಳಿದೆ. I am going to stand by that.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ನಮಗೆ ಹೊರನೋಟಕ್ಕೆ ಮಾತ್ರ ಬಿಜೆಪಿ ಎಂದು ಕಂಡಿತ್ತು.

(ಗೊಂದಲ)

ಶ್ರೀ ಹೆಚ್. ಎನ್. ನಂಜೇಗೌಡ : ವಿ.ಪಿ. ಸಿಂಗ್ ಅವರು ಅಧಿಕಾರದಲ್ಲಿ ಇರುವಲ್ಲಿವರೆಗೆ ಆ ಅಧಿಕಾರಿಯನ್ನು ನೋಟೀಸ್ ಕೊಟ್ಟು ಅವನನ್ನು ಮನೆಗೆ ಕಳುಹಿಸಿದರು. ಅದೇ ವಿ.ಪಿ. ಸಿಂಗ್‌ರವರು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಕಾವೇರಿ ತಲೆಮೇಲೆ ಕಲ್ಲು ಹಾಕಿ. ಟ್ರಿಬ್ಯೂನಲ್‌ಗೆ ನಾಮಿನೇಟ್ ಮಾಡಿದರು. ಕರುಣಾನಿಧಿ ಸಪೋರ್ಟ್‌ಗೋಸ್ಕರ ಏನು ಮಾತನಾಡುತ್ತೀರಿ? ಆದರೆ ವಿ.ಪಿ. ಸಿಂಗ್ ಮಾಡಿದ್ದನ್ನು ನೀವು ಗಣನೆಗೆ ತೆಗೆದು ಕೊಂಡು ನಮ್ಮ ಅಸೆಂಬ್ಲಿಯಲ್ಲಿ ನಿಮ್ಮ ಆಗುಹೋಗುಗಳು ನಮ್ಮ ಆಗುಹೋಗುಗಳನ್ನು ನಾವು ತೀರ್ಮಾನ ಮಾಡುವುದಾದರೆ ಅದೇ ಒಂದು ಚರ್ಚೆ ನಡೆಯಲಿಯ ವಿ.ಪಿ. ಸಿಂಗ್‌ರವರು ಆ ರಾಜ್ಯಕ್ಕೆ ಏನು ಅನ್ಯಾಯ ಮಾಡಿದ್ದಾರೆ. ಬೇರೆ ರಾಜ್ಯಕ್ಕೆ ಏನು ಮಾಡಿದ್ದಾರೆ. ಯೂರ್‍ಯಾರಿಂದ ಏನೇನು ಮಾಡಿದ್ದಾರೆ. ದಳದಿಂದ ಏನು ಮಾಡಿದ್ದಾರೆ? ಬಿಜೆಪಿಯಿಂದ ಏನೇನು ಮಾಡಿದ್ದಾರೆ ಅದು ಚರ್ಚೆಯಾಗಲಿ.

ಶ್ರೀ ಜೆ.ಹೆಚ್. ಪಟೇಲ್ : ಈಗ ವಿಶ್ವ ಹಿಂದೂ ಪರಿಷತ್, ಭಜರಂಗ್ ದಳ್, ಸನ್ಯಾಸಿ ಸಂಸತ್.ಅವು ಈ ಸಂಘ ಪರಿವಾರ್‌ಇದೆಯೆಲ್ಲಾ, ಅದರಲ್ಲಿ ಬಿಜೆಪಿ B.J.P. is the smallest child. R.S.S. is the father. ನಿಮಗೆ ಗೊತ್ತಿಲ್ಲದಿದ್ದರೆ ಹೋಗಿ ತಿಳಿದುಕೊಂಡು ಬನ್ನಿ. R.S.S. is the father. ಇವೆಲ್ಲಾ ಮರಿಗಳು. ಅಲ್ಲಿ ದುಡ್ಡು ಕಲೆಕ್ಟ್ ಮಾಡಿದವರು ಅವರ ಸ್ವಂತಕ್ಕೆ ಮಾಡಿದರು ಎಂದು ಹೇಳಲಿಲ್ಲ. ಅಥವಾ ಇವರ ಸ್ವಂತಕ್ಕೆ ಮಾಡಿದರು ಎಂದು ಹೇಳಲಿಲ್ಲ. ನೀವು ಇಟ್ಟಿಗೆ ತೋರಿಸಿ ಸಾವಿರಾರು ಕೋಟಿ ರೂಪಾಯಿ ಕಲೆಕ್ಟ್ ಮಾಡಿದಿರಿ. ಸಾವಿರ ಅಲ್ಲ. ಏನು ಒಂಬೈನೂರೇನು? ಕಲೆಕ್ಟ್ ಮಾಡಿದ್ದು ಹೌದು. ನೀವು ಧಾರ್ಮಿಕ ದೃಷ್ಟಿ ಇಟ್ಟೇ ಕಲೆಕ್ಟ್ ಮಾಡಿದ್ದೀರಿ ಎಂದು ಇಟ್ಟುಕೊಳ್ಳಿ. ನೀವು ಸ್ವಂತಕ್ಕ ಮಾಡಿದ್ದೀರಿ ಎಂದು ಹೇಳಲಿಲ್ಲ. ಅವರು ಹಾಗೆ ಹೇಳಲೂ ಇಲ್ಲ. ನೀವು ಇಟ್ಟಿಗೆ ತೋರಿಸಿ ದುಡ್ಡು ಕಲೆಕ್ಟ್ ಮಾಡಿದಿರಿ ಎಂದರು. ಮಾಡಲಿಲ್ಲವೇ? ಪಾದುಕೆ ತೋರಿಸಿ ದುಡ್ಡು ಕಲೆಕ್ಟ್ ಮಾಡಿದಿರಿ. ಇಟ್ಟಿಗೆ ತೋರಿಸಿ ಕಲೆಕ್ಟ್ ಮಾಡಿದಿರಿ. ಆ ಮಕ್ಕಳಿಗೆ ಚೀಟಿ ಹಂಚಿದರು. ಕುಂಕುನ ಹಚ್ಚಿದಿರಿ. ಅದು ನಿಮ್ಮ ಕರ್ತವ್ಯ. ನಿಮ್ಮ ಕರ್ಮ ನಿಮ್ಮ ಸ್ವಂತಕ್ಕೆ ನೀವು ಕಲೆಕ್ಟ್ ಮಾಡಿದ್ದೀರಿ ಎಂದು ಹೇಳಲಿಲ್ಲ. ನಾವು ಕಾಂಗ್ರೆಸ್‌ನವರಿಗೂ ಬಹಳ ಸಾರಿ ಹೇಳುತ್ತೇವೆ. ನೀವು ಯಾವುದೋ ಹೆಸರಿನ ಮೇಲೆ ದುಡ್ಡು ಕಲೆಕ್ಟ್ ಮಾಡುತ್ತೀರಿ ಚುನಾವಣೆಗೆ ಎಂದು ಪಾರ್ಟಿ ಹೆಸರು ಬಗ್ಗೆ ಹೇಳಿದ್ದಕ್ಕೆ ನೀವೇನು ಹಾಗೆ ಕುಣಿದಾಡುತ್ತೀರಿ. ನೋಡಿ. ನಿನ್ನೆ ಬಂಗಾರಪ್ಪನವರು ಹೇಳಿದರು. ಮೊಯಿಲಿಯವರೂ ಹೇಳಿದರು. ಕೊಡುವುದಕ್ಕೂ ತಯಾರಿರಬೇಕು. ತೆಗೆದುಕೊಳ್ಳುವುದಕ್ಕೂ ತಯಾರು ಇರಬೇಕು ಎಂದು ನೀವೇನು ಹೇಳಿದರೂ ನಾವು ಸುಮ್ಮನ್ನೆ ಕೇಳಿದ್ದೇವೆ. ಅವರು ಸಾಂಕೇತಿಕವಾಗಿ ನೀವು ಇಟ್ಟಿಗೆ ತೋರಿಸಿ ದುಡ್ಡು ಕಲೆಕ್ಟ್ ಮಾಡಿದಿರಿ ಎಂದಕೂಡಲೇ ದಾಖಲೆ ಬೇಕು. ದಾಖಲೆಯೇನು? ಏನು ಕೊಡಬೇಕು ದಾಖಲೆ ಇಟ್ಟಿಗೆ ತರಲೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ದಾಖಲೆ ಕೊಡಬೇಕಾ? ಅವರ ಮಗ ಮುಖ್ಯಮಂತ್ರಿ ಕುರ್ಚಿ ಮೇಲೆ ಕೂತಿದ್ದಕ್ಕೆ ಏನು ದಾಖಲೆ ಕೊಡಬೇಕು?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಇದಕ್ಕೆ ಸಂಬಂಧವಿಲ್ಲ, ಮಾನ್ಯ ಅಧ್ಯಕ್ಷರೇ, ಇದೇ ದಾರಿ ತಪ್ಪುವುದು. ನಾವು ಹೇಳುತ್ತಿರುವುದೇ ಬೇರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಗೌರವದಿಂದ ವಿಷಾದವನ್ನು ವ್ಯಕ್ತಪಡಿಸಿದ್ದೇನೋ ಇಲ್ಲವೋ ನೋಡಿ. ದಾಖಲೆಯನ್ನು ತರಿಸಿ ನೋಡಿ ಸ್ವಾಮಿ .

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಪಾರ್ಲಿಮೆಂಟರಿ ಪ್ರಾಕ್ಟೀಸಸ್‌ನಲ್ಲಿ ಕೊಡುವುದಕ್ಕೂ ತಯಾರು ಇರಬೇಕು. ತಮ್ಮಲ್ಲಿ ನಾನು ಇಷ್ಟೇ ವಿನಂತಿ ಮಾಡುವುದು. ಮಾನ್ಯ ಸಭಾನಾಯಕರು ಮಾತನಾಡುವಾಗ ಅರ್ಥವಾಗದಿದ್ದರೆ ಅರ್ಥ ಮಾಡಿಕೊಳ್ಳಿ. ಈಗಲೂದರೂ ನಾವು ಬಹಳ ವಿನಯದಿಂದ ಇಲ್ಲಿಯವರೆಗೆ ಸಹಿಸಿ ಕೊಂಡು ಕೇಳುತ್ತಿದ್ದೇವೆ. ಇನ್ನಾದರೂ ಬಿಜೆಪಿ ಸ್ನೇಹಿತರು ಮತ್ತೂ ಅದೇದಾರಿ ಹಿಡಿದರೆ ನಾವು ಇದನ್ನು ಸಹಿಸುವುದು ಬಹಳ ಕಷ್ಟವಾಗುತ್ತದೆ. ತಮಗೆ ನಾವು ಮನವಿ ಮಾಡಿಕೊಳ್ಳುವುದು ಇಷ್ಟೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದೆಲ್ಲಾ ಕೇಳಿದ್ದೇವೆ. ಅವರು ನಮ್ಮ ಪಾರ್ಟಿ ಬಗ್ಗೆ ಹೇಳಿದ್ದ ಕೇಳಿದ್ದೇವೆ ಎಲ್ಲಾ ಕೇಳಿದ್ದೇವೆ. ಕೇಳಬೇಕು. ಅವರು ಎಷ್ಟು ಒಯ್ದರೂ ಬಯ್ಯಿಸಿಕೊಳ್ಳುವುದಕ್ಕೆ ನಾವು ತಯಾರು ಇದ್ದೇವೆ ಅದೂ within certain limits, ಚೌಕಟ್ಟು. ನಾವು ಹೇಳಿದ್ದೂ ಅವರ ಮೇಲೆ ಏನೂ ಅಪಾದನೆ ಮಾಡಲಿಲ್ಲ, ವೈಯಕ್ತಿಕವಾಗಿ ಯಾರ ಮೇಲೆ ಅಪಾದನೆ ಮಾಡಲಿಲ್ಲ.ಇಲ್ಲಿಯವರೆಗೂ ಇದೆಲ್ಲಾ ಇದು ಏನಾಯಿತು. ಹಂತ ಹಂತವಾಗಿ ಅವರು ಸರಿಯಾಗಿ ಉತ್ತರ ಕೊಡುತ್ತಾ ಬಂದಕೂಡಲೇ ಏನು ಬಂಡವಾಳ ಅವರಿಗೆ ಉಳಿಯಲಿಲ್ಲ, ಇದೇಕೆ ಇದು? ಕೊನೆಘಳಿಗೆಗೆ ಯೋಜನೆ ಮಾಡಿದ್ದಾರೆ ಇವರು. ಈಗೇನಾದರೂ ಒಂದು ಸಣ್ಣ ನಾಟಕ ಮಾಡಿ ಹೋಗೋಣ ಎಂದು ಹಾಗೆ ಮಾಡುವುದಾದರೆ ಮಾಡಿ ಹೋಗಿ ಯಾರು ಬೇಡ ಎನ್ನುತ್ತಾರೆ.

(ಗೊಂದಲ)

ಶ್ರೀ ಆರ್. ಶ್ರೀನಿವಾಸ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲೇ ನಾನು ಖುದ್ದಾಗಿ ನೋಡಿರುವ ಒಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಭಾರತೀಯ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷರ ಮುಖಂಡತ್ವದಲ್ಲಿ ನಮ್ಮ ಗ್ರಾಮಕ್ಕೆ ಒಂದು ದಿವಸ ರಾತ್ರಿ 11.00 ಗಂಟೆಯ ಸಮಯದಲ್ಲಿ ಒಂದು ಕಾರಿನಲ್ಲಿ ಇಟ್ಟಿಗೆ ಇಟ್ಟುಕೊಂಡಿದ್ದ ರಥಯಾತ್ರೆ ಬಂದಿತು. ನಮ್ಮ ಊರಿನಲ್ಲಿ ರಾಮ ಭಕ್ತರಿರುವುದರಿಂದ ರಥಯಾತ್ರೆ ಬರುವ ಸುದ್ದಿ ಕೇಳಿ ಸುಮಾರು ನೂರಾರು ಜನ ಹೆಣ್ಣುಮಕ್ಕಳೆಲ್ಲರೂ ಸ್ನಾನ, ಪೂಜಾದಿಗಳನ್ನು ಮಾಡಿ ಮುಗಿಸಿದರು. ರಥ ಯಾತ್ರೆ ಬಂದಾಗ ಕೂಲಿ ಮಾಡುವ ಜನರು ಸಹ ಹತ್ತು ರೂಪಾಯಿಗಳಿಗಿಂತ ಕಡಿಮೆ ಕೊಡಲಿಲ್ಲ, ನನ್ನ ಹತ್ತಿರ ಬಂದು ಹಣ ಕೇಳಿದರು. ನಾನು ಸುಮ್ಮನಿದ್ದೆ. ರಥಯಾತ್ರೆ ಗುಂಪಿನಿಲ್ಲಿದ್ದ ಒಬ್ಬನಿಗೆ ತಲೆಗೆ ಬೋಡಿ ಮಾಡಿ. ಮೈಗೆ ಕೆಂಪು ವಸ್ತ್ರ ಹೊದಿಸಿ ನಾಮ ಬಳಿದಿದ್ದರು. ಆತ ಯಾರೆಂದು ಗಮನಿಸಿದಾಗ ನಮ ಪಕ್ಷದ ಹಳ್ಳಿಯ ಪೋಸ್ಟ್ ಮಾಸ್ಟರ್ ಆಗಿದ್ದ. ಆಗ ನಾನು ಎನ್. ಸ್ವಾಮಿ. ನೀವು ಹೀಗೆ ಎಂದಾಗ ಅವರು

ಶ್ರೀನಿವಾಸ್‌ರವರೇ ಏನೋ ನನ್ನ ತಲೆ ಬೋಳಿಸಿ ನಾಮವಿಟ್ಟು ಕೆಂಪು ವಸ್ತ್ರ ಹೊದಿಸಿದ್ದಾರೆ. ಈ ವಿಷಯವನ್ನು ಬೇರೆಯವರಿಗೆ ಹೇಳಬೇಡಿ, ಎಂದರು ಈಗ ಆ ಇಟ್ಟಿಗೆಗಳೆಲ್ಲ ಎಲ್ಲಿಗೆ ಹೋಗಿದೆಯೆಂದರೆ ನಮ್ಮ ಊರಿನಲ್ಲಿಯೇ ಒಂದು ಆಂಜನೇಯಸ್ವಾಮಿ ದೇವಸ್ಥಾನವಿದ್ದು, ದೇವಾಸ್ಥಾನದ ಒಂದು ಮೂಲೆಯಲ್ಲಿ ಇಟ್ಟಿಗೆಗಳನ್ನು ಹಾಕಿದ್ದು .ಮತ್ತು ಜನರಿಂದ ಸಂಗ್ರಹಿಸಲಾದ ಹಣ ಎಲ್ಲಿಗೆ ಹೋಯಿತೋ ಗೊತ್ತಿಲ್ಲ,ನಾನು ಒಂದು ಸಾರಿ ಅಲ್ಲಿಗೆ ಹೋಗಿ ವಿಚಾರಿಸಿದಾಗ ಈ ಇಟ್ಟಿಗೆಗಳೆಲ್ಲಾ ಮಾರಾಟವಾಗುತ್ತವೆ.ಎಂದರು.ಆದರೆ ಇವರು ಹೇಳುತ್ತಾರೆ......

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ನಮ್ಮಲ್ಲಿ ಹೀಗೆ ಹೇಳುವುದು. ಕೂರುವುದು ಸ್ವಾಭಾವಿಕವಾಗಿ ಬಂದಂಥ ಗುಣವಾಗಿದೆ. ಒಂದು ಕಾಲದಲ್ಲಿ ಬಿಜೆಪಿ ಎಂದರೆ ಲೀಡರ್ ಅದವರು ಎದ್ದು ನಿಂತರೆಂದರೆ ಹಿಂದಿನವರು ಎದ್ದು ಹೇಳುವುದಕ್ಕಾಗುತ್ತಿರಲಿಲ್ಲ. ಈಗ ನಮ್ಮವರೆಲ್ಲಾ ಅಲ್ಲಿಗೆ ಹೋಗಿದ್ದಾರೆ. ಹೆಚ್ಚು-ಕಡಿಮೆ ಇದೇ ದೃಶ್ಯ ಅಲ್ಲಿಯೂ ಕಾಣುತ್ತಿದೆ. ಬಿಜೆಪಿ ಏನೂ ಗಟ್ಟಿಯಾಗಲಿಲ್ಲ. ದೇಶ ಹಾಳಾಗಿ ಹೋಯಿತು.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೆ. ನಾನು ಮೂರು ಸಲ ಶಾಸಕ ನಾಗಿರುವುದರಿಂದ ಮಾತನಾಡಲು ನನಗೆ ಅವಕಾಶ ಕೊಡಬೇಕು. ನಾನೇನೂ ಪ್ರಶ್ನೆ ಹಾಕುವುದಿಲ್ಲ.ಒಂದೇ ಒಂದು ಮಾತನ್ನು ಹೇಳುತ್ತೇನೆ.ನಾವು ರಾಮನ ವಂಶದವರು. ನನ್ನ ಹೆಂಡತಿ ಪರಮ ದೈವಭಕ್ತೆ ಇದನ್ನು ನಾನು ದೇವರ ಸಾಕ್ಷಿಯಾಗಿ ಹೇಳುತ್ತೇನೆ. ನಾನು ಊರಿನಲ್ಲಿಲ್ಲದಿದ್ದಾಗ ನಮ್ಮ ಊರಿಗ ಅದೇ ರೀತಿ ರಥಯಾತ್ರೆ ಬಂದಿತ್ತು. ನಾನು ಊರಿಗೆ ಬಂದಾಗ ನನ್ನ ಹೆಂಡತಿ ನಿನ್ನೆ ರಾತ್ರಿ ರಾಮನ ಹೆಸರಿನ ಇಟ್ಟಿಗೆ ಇಟ್ಟುಕೊಂಡಿದ್ದ ರಥಯಾತ್ರೆ ಬಂದಿತ್ತು. ನಾನು ಕಾಣಿಕೆಯಾಗಿ 501 ರೂಪಾಯಿಗಳನ್ನು ಕೊಟ್ಟೆ ಎಂದಳು. ನನ್ನ ಹೆಂಡತಿ 501 ರೂಪಾಯಿಗಳನ್ನು ಕೊಟ್ಟಿದ್ದು ನಿಜ. ಆದರೆ, ಮಸೀದಿ ಒಡೆಯುತ್ತಾರೆ ಎಂದು ದುಡ್ಡು ಕೊಡಲಿಲ್ಲ, ರಥಯಾತ್ರೆಯಲ್ಲಿ ರಾಮನ ಭಕ್ತರು ರಾಮನ ಫೋಟೋ ಇಟ್ಟುಕೊಂಡು ಭಜನೆ ಮಾಡಿಕೊಂಡು ಬಂದಿದ್ದಕ್ಕಾಗಿ ನನ್ನ ಹೆಂಡತಿ ಹಣ ಕೊಟ್ಟಿದ್ದಾಳೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ನನಗೊಂದು ಸಮಾಧಾನವಾಗಿದೆ. ಏಕೆಂದು ನೀವು ಕೇಳಬಹುದು. ಸನ್ಮಾನ್ಯ ಸಚಿವರಾದ ಜಾಲಪ್ಪನವರು ಕೇಳಬಹುದು. ಏಕೆಂದರೆ ಮಂತ್ರಿಮಂಡಲದಲ್ಲಿ ಅವರೊಬ್ಬರು ವಿಚಿತ್ರ. ನನಗೆ ಏಕೆ ಸಮಾಧಾನವಾಗಿದೆಯೆಂದರೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಬ್ಬರೂ ರಾಮನಾಗೇ ಆಗುತ್ತಿದ್ದಾರೆ. ಹೇಗೆಂದರೆ, ರಾಮ ಏನು ಮಾಡಿದನೆಂದರೆ ಪಿತ್ರ ವಾಕ್ಯ ಪರಿಪಾಲನೆಗಾಗಿ ಹೆಂಡತಿ ತಮ್ಮನನ್ನು ಕರೆದುಕೊಂಡು ವನವಾಸಕ್ಕೆ ಹೋದ ಭೀಮ. ಏನು ಮಾಡಿದನೆಂದರೆ ಭ್ರಾತೃ ವಾಕ್ಯಪರಿಪಾಲನೆಗಾಗಿ ಅಣ್ಣ ಧರ್ಮರಾಯನೊಡಗೂಡಿ ತಾಯಿ. ತಮ್ಮಂದಿರನ್ನು ಕಟ್ಟಿಕೊಂಡು ವನವಾಸಕ್ಕೆ ಹೊರಟ ಆಧುನಿಕರಾಗಿ ಹೇಳುವುದಾದರೆ ನಮ್ಮ ದೇವೇಗೌಡರು ಮತ್ತು ಪಟೇಲರು ಏನು ಮಾಡುತ್ತಿದ್ದಾರೆಂದರೆ ಪುತ್ರ ವಾಕ್ಯಪರಿಪಾಲನೆಗಾಗಿ ವನವಾಸಕ್ಕೆ ಹೋಗಬೇಕಾಗಿದೆ. ವಾಕ್ಯ ಪರಿಪಾಲನೆ ಮಾಡುವುದಕ್ಕೆ ಹೊರಟವರನ್ನು ವನವಾಸಕ್ಕೆ ಹೋಗಬೇಕು. ವಾಕ್ಯ ಪರಿಪಾಲನೆ ಮಾಡುಕೊಳ್ಳಿ ಸಂತೋಷ ತಮಗೆ ಅದು ಹತ್ತಿರ ಬರುತ್ತಿದೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ವನವಾಸದಲ್ಲಿದ್ದಾಗಲೇ ರಾಕ್ಷಸರನ್ನೆಲ್ಲಾ ಕೊಂದದ್ದು. ರಾಮ ವನವಾಸಕ್ಕೆ ಹೋದಾಗಲೇ ರಾಕ್ಷಸರನ್ನು ಕೊಂದದ್ದು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ನಂಜೇಗೌಡರು ನಮ್ಮನ್ನು ವನವಾಸಕ್ಕೆ ಕಳುಹಿಸುತ್ತಿದ್ದಾರೆ. ಪರವಾಗಿಲ್ಲ, ಅವರೇ ಇಲ್ಲಿ ಬಂದು ಕುಳಿತುಕೊಳ್ಳಲಿ. ತಾವೇನೂ ಬೇಸರಪಟ್ಟುಕೊಳ್ಳಬೇಡಿ ನಾವು ಇಲ್ಲಿ ಶಾಶ್ವತವಾಗಿ ಇರುವುದಿಲ್ಲ, ಇರುತ್ತೇವೆಂದು ಹೇಳಿದ್ದೇನೆಯೇ? ನಾನು ಯಾವೊತ್ತು ಹೇಳಿಲ್ಲ.ನಾವು ವನವಾಸಕ್ಕೆ ಹೋಗಲು ಸಿದ್ಧರಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ವಾಕ್ಯ ಪರಿಪಾಲನೆಗೆ ಹೊರಟರೆ ಬಹಳ ಕಷ್ಟ.

ಶ್ರೀ ಹೆಚ್.ಡಿ. ದೇವೇಗೌಡ : ಪರವಾಗಿಲ್ಲ, ಅದು ಬಂದಾಗ ಇನ್ನೂ ಮುಂದಕ್ಕೆ ಹೋಗುತ್ತೇವೆ. ನೀವು ಬೇಸರ ಮಾಡಿಕೊಳ್ಳಬೇಡಿ. ಅದಕ್ಕೆ ಇನ್ನೂ ಸಮಯವಿದೆ. ನಾವು ನೀವು ಶಿವಪ್ಪನವರೆಲ್ಲಾ ಒಂದೇ ಜಿಲ್ಲೆಯಿಂದ ಬಂದಿರುವವರಾಗಿರುವುದರಿಂದ, ಅದರ ಬಗ್ಗೆ ದೊಡ್ಡ ಚರ್ಚೆ ಬೇಡ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ. ಇವೊತ್ತು ಇಲ್ಲಿ ಏನು ಚರ್ಚೆಯಾಗುತ್ತಿದೆ. ಬಹಳ ದಿವಸಗಳಿಂದ ಈ ರಾಜ್ಯದ ಜನರ ಮನಸ್ಸನ್ನು ತಪ್ಪು ದಾರಿಗೆಳೆಯತಕ್ಕಂಥ ಒಂದು ಚರ್ಚೆ ನಡೆಯುತ್ತಿದೆ.

ಶ್ರೀ ಹೆಚ್.ಡಿ. ದೇವೇಗೌಡ : ಇದೇ ವಿಷಯ ಪಾರ್ಲಿಮೆಂಟ್‌ನಲ್ಲೂ ಚರ್ಚೆಯಾಯಿತು. The issue was raised by the leftist parties. ನನಗೆ ಗೊತ್ತಿದೆ. ಒಬ್ಬ ಅಧಿಕಾರಿಯನ್ನು ನೀವು ಪೀನಲೈಸ್ ಮಾಡಿದಿರೆಂದು it has been debated in the parliament . ನಾನು ಯಾವದೋ ಕಟ್ಟು ಕಥೆ ಹೇಳುವುದಕ್ಕೆ ಇಲ್ಲಿಗೆ ಬಂದಿಲ್ಲ,

ಶ್ರೀ ಬಿ.ಬಿ. ಶಿವಪ್ಪ : ನಡೆದಂಥ ಚರ್ಚೆಯಲ್ಲಿ ಕೆಲವು ವಿಚಾರಗಳನ್ನು ಕೇಳಿದಾಗ ಕೆಲವರು ತುಂಬಾ ಹಗುರವಾಗಿ ಮಾಡನಾಡಿದ್ದಾರೆ. ನಾನು ತಮ್ಮ ಬಗ್ಗೆ ಹೇಳುತ್ತಿಲ್ಲ, ಚರ್ಚೆಯಾಗಿರುವುದು. ಕಡತದಲ್ಲಿ ದಾಖಲಾಗಿದೆ. ಬಹಶಃ ಅವೊತ್ತು ನಾವು ಯಾವುದೋ ಕಾರಣಕ್ಕಾಗಿ ಇಟ್ಟಿಗೆ ಹಾಗೂ ರಾಮನ ಪದುಕೆ ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಈ ದೇಶದ ಜನರು ಊರು-ಊರುಗಳಲ್ಲೂ ಅದನ್ನು ಸ್ವಾಗತಿಸಿ ಅದರ ಪೂಜೆ ಮಾಡುವ ಮನೋಭಾವ ಏನಿದೆ, ಅವರು ಯಾವುದೋ ಒಂದು ಮನೋಭಾವದಿಂದ ಕಾಣಿಕೆ ಕೊಟ್ಟರು, ಯರೋ ತೆಗೆದು ಕೊಂಡು ಬಂದರು ಎಂದು ಕೊಡಲಿಲ್ಲ, ಇದರ ಬಗ್ಗೆ ಒಬ್ಬ ಮಾನ್ಯ ಸದಸ್ಯರು ಮಾತನಾಡಿ. ನಂತರ ತೆಗೆದುಕೊಂಡು ಬಿಸಾಡಿದರು ಎಂದು ಮತ್ತೊಬ್ಬ ಸದಸ್ಯರು ನನ್ನ ಹೆಂಡತಿ 501 ರೂಪಾಯಿಗಳ ಕಾಣಿಕೆ ನೀಡಿದಳು. ಎಂದು ಬಹಳಷ್ಟು ಲಘುವಾಗಿ ಮಾತನಾಡಿದ್ದಾರೆ. ಸದನದಲ್ಲಿ ಇಂತಹ ಸಣ್ಣ ಮಾತುಗಳು ಬರತಕ್ಕಂಥಾದ್ದಲ್ಲಿ. ನಮ್ಮ ಮುಖ್ಯಮಂತ್ರಿಗಳು ಫೋನ್ ಮಾಡಿದರೆ 100ಕೋಟಿ ರೂಪಾಯಿ ಬರುತ್ತದೆ. 10 ಕೋಟಿ ರೂಪಾಯಿ ಬರುತ್ತದೆಂದು ಹೇಳಿದರು. ಅದು ಪತ್ರಿಕೆಗಳಲ್ಲಿ ಬಂದಂಥ ವಿಚಾರ. ಆ ರೀತಿ ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ, ಆ ವಿಚಾರ ಪ್ರಸ್ತಾಪಿಸುವಂಥ ಸಂದರ್ಭದಲ್ಲಿ ಅದಕ್ಕೂ ಮತ್ತು ರಾಮನ ಪಾದಕೆಯ ರಥಯಾತ್ರೆ ಸಂದರ್ಭದಲ್ಲಿ ಸಂಗ್ರಹಿಸಿದಂಥ ಹಣಕ್ಕೂ ಗಂಟು ಹಾಕಿ ಈವತ್ತು ಬಿ.ಜೆ.ಪಿ. ಯವರು ಎಂದು ಹೇಳಿದಿರಿ. ತಮಗೆ ಹಣ ಸಂಗ್ರಹಿಸಿರುವುದು ಗೊತ್ತು. ಹಣ ಎಲ್ಲಿಗೆ ಹೋಗಿದೆಯೆಂಬುದೂ ಗೊತ್ತು, ಅದರ ಬಗ್ಗೆ ಈಗಾಗಲೇ ತನಿಖೆಯಾಗಿದೆ ಮತ್ತು ತನಿಖಾಧಿಕಾರಿಯಿಂದ ಅದೆಲ್ಲವನ್ನೂ ವಜಾ ಮಾಡಲಾಗಿದೆಯೆಂದು ತಾವೇ ಹೇಳುತ್ತಿದ್ದೀರಿ. ಇಷ್ಟೆಲ್ಲಾ ಇದ್ದರೂ ಕೂಡ ಬಿಜೆಪಿಯವರು, ಬಿಜೆಪಿಯವರು, ಎಂದು ಹಲವಾರು ಬಾರಿ ಹೇಳಿದ್ದೀರಿ ಮತ್ತು 'ಪರಿವಾರ' ಎನ್ನುವ ಬಗ್ಗೆಯೂ ಜೆ.ಹೆಚ್. ಪಟೇಲರು ಮಾತನಾಡಿದ್ದಾರೆ. ಏಕೆಂದರೆ ಪಟೇಲರು ಮಾತಿನಲ್ಲಿ ಬಹಳ ಜಾಣರು. ಅವರು ರಾಮ ವನವಾಸಕ್ಕೆ ಹೋದಾಗಲೇ

ಆತ ರಾಕ್ಷಸರನ್ನು ಕೊಂದದ್ದು. ಎಂದು ಹೇಳಿದರು ನಾನು ಸಹ ಈ ರೀತಿ ಹೇಳಬಹುದು. ನಾನು ಸಣ್ಣ ಸಣ್ಣ ಕಥೆಗಳನ್ನು ಹೇಳಿ ಹರಿಕಥೆ ಮಾಡಿದವನೇ. ರಾಮ ತನ್ನ ಹೆಂಡತಿ ಹಾಗೂ ತಮ್ಮ ನೊಡಗೂಡಿ ವನವಾಸಕ್ಕೆ ಹೋಗುವಂಥ ಸಂದರ್ಭದಲ್ಲಿ ಇಡೀ ಆಯೋಧ್ಯೆಯ ಜನರು ಅವರ ಹಿಂದೆ ಹೋಗುತ್ತಾರೆ. ಅವರು ಕಾಡಿಗೆ ಸಮೀಪವಾಗುತ್ತಿದ್ದಂತೆ ರಾಮ ಹಿಂದೆ ತಿರುಗಿ ತನ್ನ ಹಿಂದೆ ಬಂದಂಥವರನ್ನು ಉದ್ದೇಶಿಸಿ ಕೈಮುಗಿದು ಹೇಳಿದ ಮಹನೀಯರೇ, ಮಹಿಳೆಯರೆ, ಬಂಧುಗಳೇ, ಸೋದರರೇ, ಇನ್ನು ನನ್ನ ಹಿಂದೆ ಬರಬೇಡಿ. ನೀವು ವಾಪಸ್ ಹೋಗಿ ಅಯೋಧ್ಯೆಯಲ್ಲಿ ರಾಜ್ಯಭಾರ ಬಿಟ್ಟು ಬಂದಿದ್ದೇನೆ. ಭಾರತ ಇದ್ದಾನೆ ರಾಜ್ಯಭಾರ ಮಾಡುತ್ತಾನೆ.ಎಂದು ರಾಮ ಹೇಳಿದ. 14 ವರ್ಷದ ನಂತರ ಅದೇ ಮಾರ್ಗದಲ್ಲಿ ಬಂದ. ಅಲ್ಲೆ ಕೆಲವು ಗುಡಿಸಲುಗಳನ್ನು ಕಂಡ. ರಾಮನಿಗೆ ಅಶ್ಚರ್ಯ ಅಯಿತು. ಇಷ್ಟೆಲ್ಲಾ ಹೇಳಿದೆ ಅದರೂ ಈ ಜನ ನನಗೋಸ್ಕರ ಇಲ್ಲೆ ಕಾಯುತ್ತಿದ್ದಾರಲ್ಲಾ. ತುಂಬಾ ಬೇಸರ ಆಯಿತು. ದುಃಖ ಆಯಿತು. ಆತ ಕೇಳಿದ "ಏನಪ್ಪ ಸಮಾಚಾರ ಏಕೆ ಇಲ್ಲಿದ್ದೀರಾ" ಎಂದು. ಆಗ ಜನ ಒಂದು ಮಾತು ಹೇಳಿದ್ದಾರೆ. "ಸ್ವಾಮಿ, ತಾವು ಹೋಗುವಾಗ ಅಜ್ಞೆ ಇತ್ತಿರಿ. ಮಹನೀಯರೇ. ಮಹಿಳೆಯರೇ ಎಂದು ಹೇಳಿದಿರಿ, ಸಹೋದರಿರೇ ಎಂದು ಹೇಳಿದಿರಿ. ಬಂಧುಗಳೇ ಎಂದು ಹೇಳಿದಿರಿ. ನಮ್ಮನ್ನು ಕುರಿತು ಏನೂ ಹೇಳಲಿಲ್ಲ. ಎಂದು ಹೇಳಿದರು. ಅದಕ್ಕೆ "ಏಕಪ್ಪಾ" ಎಂದು ಕೇಳಿದ ಅದಕ್ಕೆ ನಾವು ಯಾರೂ ಅಲ್ಲ. ನಾವು ನಪುಂಸಕರು ಎಂದು ಹೇಳಿದರು ಹಾಗಾದರೆ ಅದರಲ್ಲಿ ಒಂದು ತಪ್ಪಾಗಿದೆ. ಇದಕ್ಕೆ ಪರಹಾರ ಏನು? ಇದಕ್ಕೆ ಪರಹಾರ ಎಂದರೆ ಕಲಿಯುಗದಲ್ಲಿ ಪ್ರಜಾ ಸರ್ಕಾರ ಎಂದು ಬರುತ್ತದೆ. ಆ ಪ್ರಜಾ ಸರ್ಕಾರ ಬರುವಾಗ "ಜನತಾ ದಳ" ಎಂದು ಒಂದು ಪಕ್ಷ ಬರುತ್ತದೆ. ಅದನ್ನು ಕಟ್ಟಿ ರಾಜ್ಯಭಾರ ಮಾಡಿ. ಮಜಾ ಹೊಡಿಯಿರಿ. ಎಂದು ಹೇಳಿದ. ಆದ್ದರಿಂದ ಆ ಶ್ರೀರಾಮನ ಆಶೀರ್ವಾದದಿಂದ ಇವತ್ತು ನೀವು ಇಲ್ಲಿ ಬಂದವರು. ಆ ಶ್ರೀರಾಮನ ರಾಶಿಯಿಂದ ಬರಲಿಲ್ಲ. ಶ್ರೀರಾಮನ ಆಶೀರ್ವಾದದಿಂದ ಇವತ್ತು ನೀವು ಅಧಿಕಾರದಲ್ಲಿದ್ದೀರಿ. ಒಪ್ಪಿಕೊಳ್ಳಿ ಅವರನ್ನು ಏಕೆ ಬಯ್ಯುತ್ತೀರಿ? ಶ್ರೀರಾಮನ ಬಗ್ಗೆ ಲಘುವಾಗಿ ಮಾತನಾಡಬೇಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಇದು ಬಹಳ ಹಳೆಯ ಕಥೆ.

(ಗೊಂದಲ)

ಅಧ್ಯಕ್ಷರು : ನೀವು ಪಟೇಲ್ ಅವರನ್ನು ನೋಡಿ ಆ ಮಾತು ಹೇಳಿದರೆ ಯಾರೂ ಒಪ್ಪುವುದಿಲ್ಲ. ಇಲ್ಲ ಇಲ್ಲ. ನೀವು ಈಗ ರಾಮಾಯಣಕ್ಕೇ ಅಪಚಾರ ಮಾಡಿದಿರಿ. ಪಟೇಲರನ್ನು ನೋಡಿ ಹಾಗೆ ಹೇಳಿದಿರಿ ಯಾರು ಒಪ್ಪುವುದಕ್ಕೆ ಆಗುತ್ತದೆ?

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಶಿವಪ್ಪನವರು ಕಷ್ಟಪಟ್ಟು ಕಥೆ ಹೇಳಿದರು ಪಾಪ ಅವರಿಗೆ ಸರಿಯಾಗಿ ಗೊತ್ತಿಲ್ಲ. ಜನತಾ ದಳದವರಿಗೆ ಅಲ್ಲ ಹೇಳಿದ್ದುದು. ಕಾಂಗ್ರೆಸ್‌ನವರಿಗೆ ಹಾಗೆ ಹೇಳಿದ್ದುದು, ರಾಮಾಯಣದಲ್ಲಿ. ಅವರನ್ನು ಏಕೆ ಎಳೆಯುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ 1969ರಲ್ಲಿ ಅವರು ನಮ್ಮ ಜೊತೆ ಸೇರಿ ಬೆಂಬಲ ಕೊಟ್ಟರು.

ಅಧ್ಯಕ್ಷರು : ಅವರು ಇರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಸರಿಯಾಗಿ ಗೊತ್ತಿಲ್ಲ ಪಾಪ. 1969ನೇ ಇಸವಿಯಲ್ಲಿ ಇವರ ಜೊತೆ ಇದ್ದವರು ಸಿಪಿಐನವರು, ಸಿಪಿಎಂನವರಲ್ಲ ಸ್ವಲ್ಪ ಸರಿಯಾಗಿ ತಿಳಿದಿಕೊಳ್ಳಲಿಕ್ಕೆ ಹೇಳಿ.

ಅಧ್ಯಕ್ಷರು : ನಾನೇ ಹೇಳುತ್ತಿದ್ದೆ

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವಿಬ್ಬರೂ ಒಂದೇ ಸ್ವಾಮಿ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಮಾನ್ಯ ಅಧ್ಯಕ್ಷರೆ ಮಾಯಾವತಿ ಅವರನ್ನು ಮುಖ್ಯಮಂತ್ರಿ ಮಾಡಿದಕ್ಕೆ ಅಲ್ಲಿರುವ ಗಂಡಸರೆಲ್ಲಾ ಆತುರವಾಗಿ ಆ ಪಕ್ಷ ಸೇರಿದ್ದರು. ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಜನತಾ ದಳದವರ ಬಗ್ಗೆ ಮಾನ್ಯ ಶಿವಪ್ಪನವರು ಹೇಳಿದರು.

ಅಧ್ಯಕ್ಷರು : ಪ್ರೋಸೀಡಿಂಗ್ಸ್‌ಗೆ ಹೇಳಿ ಕಳುಹಿಸಿದ್ದೇನೆ. ಬಂದ ತಕ್ಷಣ ನಿಮಗೆ ತೋರಿಸುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಾನು ಯೀಲ್ಡ್ ಆಗುತ್ತೇನೆ. ನಿನ್ನೆ ನೀವು ಅಷ್ಟು ಹಾರ್ಷ ವರಡ್ಸ್‌ಳನ್ನು ಯೂಸ್ ಮಾಡಿದ್ದೀರಿ. ನಾನು ಒಂದು ಶಬ್ದ ಮಾತನಾಡಿಲಿಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಕಡಿತ ತೆಗೆದು ನೋಡಬಹುದು.

ಅಧ್ಯಕ್ಷರು : ಟೈಪ್ ಮಾಡುತ್ತಿದ್ದಾರೆ. ನಾಲ್ಕು ಜನ ಕುಳಿತು ಟೈಪ್ ಮಾಡುತ್ತಿದ್ದಾರೆ. ಬರಬೇಕಲ್ಲಾ,

ಶ್ರೀ ಹೆಚ್.ಡಿ. ದೇವೇಗೌಡ : 40 ಲಕ್ಷ ಒಂದು ಸಬ್ ರಿಜಿಸ್ಟ್ರಾರ ಅವರ ವರ್ಗಕ್ಕೆ ತೆಗೆದುಕೊಳ್ಳುತ್ತಾರೆ ಎಂದು ಬೀದಿ ಜನ ಮಾತನಾಡುತ್ತಾರೆ ಎಂದು ಹೇಳಿದಿರಿ. did I talk?. I swallowed everything.

ಒಂದು ಶಬ್ದ ಹೇಳಲಿಲ್ಲ ನೀವು ಹೇಳುವ ಅವಶ್ಯಕತೆ ಇಲ್ಲ, ಇನ್ನೂ ಮುಗಿಸಬೇಕಾದದ್ದು ಬಹಳಷ್ಟು ಇದೆ. ನಾವು ರಾಮನ ಹೆಸರಿನಲ್ಲಿಯೇ ಅಧಿಕಾರಕ್ಕೆ ಬಂದಿದ್ದೇವೆ.ನಿಮ್ಮ ಸಹಾಯದಿಂದ ಬಂದಿದ್ದೇವೆ. ಈಗ ನಿಮಗೆ ನಾವು ಅನ್ಯಾಯ ಮಾಡಿದ್ದೇವೆ. we are all betrayers. Agreed.

ಶ್ರೀ ದೇವೀಲಾಲ್ ನಿಮಗೆ ಜಾಗ ಕೊಟ್ಟರಲ್ಲಾ ಪಾಪ ಪುಣ್ಯಾತ್ಮ? ಎಂದು ಸೀಟು ಇದ್ದರೂ ಪಾರ್ಲಿಮೆಂಟಿನಲ್ಲಿ ಇಡೀ ದೇಶದಲ್ಲಿ ಇವರಿಗೆ ಜಾಗ ಕೊಟ್ಟ 18 ಸೀಟು ಗೆದ್ದರು. ಡೆಪ್ಯೂಟಿ ಚೀಫ್ ಮಿನಿಸ್ಟರ್ ಮಾಡಿದ . ಶ್ರೀ ವಿ.ಪಿ. ಸಿಂಗ್ ಜೊತೆ ಸೇರಿಕೊಂಡು ಅವರನ್ನು ಮನೆಗೆ ಕಳಿಸಿದರು. These are all realities . ನಂಜೇಗೌಡರು, you are a lion ದಯಮಾಡಿ ಇಂತಹ ವಿಷಯಗಳಲ್ಲಿ ನಾನು ಹೇಳುವಾಗ ನೀವು ಯಾವುದೋ ಪುತ್ರವಾಕ್ಯ ಪರಿಪಾಲನೆ ಎಂದು ಹೇಳಿದಿರಿ. ಅದೆಲ್ಲಾ ನಿಧಾನವಾಗಿ ಚರ್ಚೆ ಮಾಡೋಣ. ಏನೋ ಅನಿವಾರ್ಯ ಆಯಿತು. ರಾಜಕಾರಣ ಬರುತ್ತದೆ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ : ತಾವು ದೇವೀಲಾಲ್ ಬಗ್ಗೆ ಹೇಳಿದಿರಿ

ಶ್ರೀ ಹೆಚ್.ಡಿ. ದೇವೇಗೌಡ : ಶಿವಪ್ಪನವರೇ ನಿಮ್ಮ ಬಗ್ಗೆ ಗೌರವ ಇದೆ ಕುಳಿತುಕೊಳ್ಳಿ. ಹೇಗೆ ದೇಶದ ವ್ಯವಹಾರವನ್ನು ನಡೆಯುತ್ತಿದೆ. ಎಂದು ನಾವು ಸಹ ತಿಳಿದುಕೊಳ್ಳಬೇಕಾಗಿದೆ. ಈ ಶೂದ್ರ ಶಕ್ತಿ ಇದೆಯಲ್ಲಾ ಹಣೆ ಬರಹ ಹೇಗೆ ಆಗುತ್ತದೆ ಅಂದರೆ. ಚೌಧರಿ ಚರಣ್‌ಸಿಂಗ್ ಅವರ ಹುಟ್ಟುಹಬ್ಬಕ್ಕೆ 30 ಲಕ್ಷ ಜನ ರೈತರು ಮೊದಲ ಬಾರಿಗೆ ಸೇರಿದ್ದರು. ಸಮ್ಮೇಳನದಲ್ಲಿ 30 ಲಕ್ಷ ಜನ ಸೇರಿದ್ದರು. ಹಿಂದೂ ಸ್ಥಾನದಲ್ಲಿ, The farmers' rally for the first time. ನಮಗೂ ರಾಜಕಾರಣ ಗೊತ್ತು ಅವರಿಗೂ ರಾಜಕಾರಣ ಗೊತ್ತು. ನೀವು ದೆಹಲಿಯಲ್ಲಿ ಇದ್ದಿರಿ. ಇಲ್ಲೂ ಅನೇಕರು ಇದ್ದರು. ಪಾರ್ಲಿಮೆಂಟ್ ಒಳಗಡೆ ಹೋಗಿ ಕೂರುವುದಕ್ಕೆ ಬಿಡಲಿಲ್ಲ. ದೇವೀಲಾಲ್‌ರವರನ್ನು ಜೊತೆಗೆ ತೆಗೆದುಕೊಂಡರು ಈ ಕಡೆ ವಿ.ಪಿ. ಸಿಂಗ್ ಹಿಡಗುಕೊಂಡು ಆ ಕಡೆ ಅರುಣ್ ನೆಹರೂ ಹಿಡಿದುಕೊಂಡು ತೆಗೆದರ ನದಿ ಮನೆಗೆ ಎಂದು ಎರಡೇ ಎರಡು ಸೀಟು ಪಾರ್ಲಿಮೆಂಟ್‌ನಲ್ಲಿ ಇದ್ದುದು. ಚುನಾವಣೆ ಆಯಿತು. 70-78 ಸೀಟೋ ಬಂತು. ವಿ.ಪಿ. ಸಿಂಗ್ ಅವರನ್ನು ಜೊತೆಗೆ ಇಟ್ಟುಕೊಂಡು. 88 ಬಂತು ಎಂದು ನಮ್ಮ ಸ್ನೇಹಿತರು ಹೇಳಿದರು. ಪಾಪ್ ಹೇಗೆ ಹಣೆಬರಹ ಈ ದೇಶದಲ್ಲಿ ಆಯಿತು ನೋಡಿ. ಇವತ್ತು ನಾವು ಅನೈತಿಕ ರಾಜಕಾರಣ ಮಾಡುತ್ತೇವೆ. ಅಪಮೌಲ್ಯ ರಾಜಕಾರಾಣ ಮಾಡುತ್ತೇವೆ. ನಮಗೆ ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಗೊತ್ತಿಲ್ಲ. ಶ್ರೀರಾಮಕೃಷ್ಣ ಹೆಗಡೆಯವರನ್ನು ನಾನು ಹೊಡೆಸಿದೆ. ಏನೋ ಮಾಡಿದೆ ಎಂದು ಹೇಳಿದರು. ನಾನು ಅದನ್ನೆಲ್ಲಾ ಮಾಡಿಯೇ ಮುಖ್ಯಮಂತ್ರಿಯಾಗಿದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಪ್ಪಿಕೊಳ್ಳುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದಿರಲ್ಲಾ ಸ್ವಾಮಿ, ಇಲ್ಲೇ ಹೇಳಿಬಿಟ್ಟರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸತ್ಯವನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೇಳುವುದನ್ನೂ ನೀರು ಒಪ್ಪಿಕೊಳ್ಳಬೇಕು. ದಯಮಾಡಿ. ನಾನು ಮಾತನಾಡದೇ ಕುಳಿತಿದ್ದೆ. ಉಸಿರು ಎತ್ತದೆ ಕುಳಿತಿದ್ದೇನೆ. ಈ ದೇಶದಲ್ಲಿ 1990 ರಲ್ಲಿ ಪಾರ್ಲಿಮೆಂಟಿನ ಚುನಾವಣೆನಲ್ಲಿ ಇಪ್ಪತೊಂಬತ್ತೂವರೆ ಪರ್ಸೆಂಟ್ ಓಟು ತೆಗೆದುಕೊಡರಲ್ಲಾ ನೀವು ಹೆಗಡೆ ದೇವೇಗೌಡ ಒಂದಾದ ದಿವಸ. ಬೊಮ್ಮಾಯಿ ಅವರು ಒಂದಾದ ದಿವಸ ನೀವು ಅಡಿದ ಭಾಷಣದ ಪ್ರೆಸ್ ಕಟಿಂಗ್ಸ್ ನನ್ನ ಹತ್ತಿರ ಇದೆ. ಪ್ರೆಸ್ ಕಟಿಂಗ್ಸ್ ಇಡಬೇಕು ಎಂದರೆ ಇಡುತ್ತೇನೆ. ಇನ್ನೂ ಒಂದು ತಿಂಗಳು ಸಭೆ ಇರುತ್ತದಲ್ಲಾ ಯಾವ ಶಬ್ದ ಪ್ರಯೋಗ ಮಾಡಿದ್ದೀರಿ ಮಾನ್ಯ ಮುರಳಿ ಮನೋಹರ ಜೋಷಿಯವರು ಹಿರಿಯರು ಇದ್ದಾರೆ. ಅವರು ಯಾವ ಶಬ್ದ ಪ್ರಯೋಗ ಮಾಡಿದ್ದಾರೆ. ಚರ್ಚೆ ಬೇಡ ನಿಮಗೆ ಕಷ್ಟ ಇದೆ ತಡೆದುಕೊಳ್ಳುವುದಕ್ಕ ಆಗುವುದಿಲ್ಲ, ನಾವು ಇಲ್ಲದೆ. ಇದ್ದರೆ ಕಾಂಗ್ರೆಸ್‌ಗೆ ಕೇಂದ್ರದಲ್ಲಿ ಇವರೇ ಅಲ್ಟರ್‌ನೇಟೀವ್ ಆಮೇಲೆ ಯಡಿಯೂರಪ್ಪನವರಿಗೆ ಅಥವಾ ಬೇರೆ ಯಾರಿದಾದರೂ ನೋವಾಗುವುದಿಲ್ಲವೇ? ಆಗಲೇಬೇಕು. ಏಕಾಗುವುದಿಲ್ಲ? 29 ಪರ್ಸೆಂಟ್‌ನಿಂದ 17 ಪರ್ಸೆಂಟಗೆ ಇಳಿಯಬೇಕಾಗಿದ್ದರೆ. ಇವರ ಮನೆ ಹಾಳಾದ ಇವರಿಬ್ಬರೂ ಒಂದಾದರಲ್ಲೂ ಎಂದು ಬಯ್ಯುವುದು ಸ್ವಾಭಾವಿಕ. ತಪ್ಪೇನಿದೆ? ಡಿಸ್‌ಪಾಯಿಂಟ್ ಲೈಫ್‌ನಲ್ಲಿ ಅಗಲೇಬೇಕಾಗುತ್ತದೆ. ದೇವರಾಜು ಅರಸು ಈ ಜಾಗದಲ್ಲಿ ನಿಂತುಕೊಂಡು ಹೇಳಿದರು. ಮಾನ್ಯ ಜೀವರಾಜ್ ಆಳ್ವರವರು ಇಲ್ಲಿಯೇ ಕುಳಿತಿದ್ದಾರೆ, ವಿದ್ಯಾರ್ಥಿ ಸಂಘಗಳ ಎಲೆಕ್ಷನ್ ನಡೆಯುವಾಗ ಹೇಗೆ ನಡೆಯುತ್ತಿವೆ ಎಂಬುದು ಒಂದು ವಿಚಾರ. ಇದು ಪ್ರೊಸೀಡಿಂಗ್ಸ್‌ನಲ್ಲಿದೆ. ನನ್ನ ಜೀವನದಲ್ಲಿ ನಾನು ವಯಲೆನ್ಸ್. ಪಾಲಿಟಿಕ್ಸ್ ಮಾಡಿಕೊಂಡು ರಾಜಕಾರಣ ಮಾಡಲಿಲ್ಲ.

ಆಯಿತು ಹೇಳಿದಿರಿ ಕ್ಷಮೆ ಕೇಳಿದ್ದೇನೆ. ನೀವು ಮತ್ತೆ ಅದನ್ನೇ ಪುನರುಚ್ಚಾರ ಮಾಡಿ ಹೇಳಿದಿರಿ ಪಾಪ ಹಳ್ಳಿ ಮುದುಕ. ರೈತ ನಿಮಗೆ ಜಾಗ ಕೊಟ್ಟ ತೆಗೆದಿರಿ ವಿಪಿ ಸಿಂಗ್ ಮಂಡಲ್ ಆಯೋಗದಲ್ಲಿ 27 ಪರ್ಸೆಂಟ್ ಕೊಡುತ್ತೇವೆಂದು ಹೇಳಿದ ತಕ್ಷಣ ರಥ ಹೇಗೆ ಹೊರಟಿದ್ದು. ಬಿರುಸಿನಲ್ಲಿ ಹೊರಟಿತು. ಯಾವ ಬಿರುಸಿನಲ್ಲಿ ತಕ್ಷಣ ಇಡೀ ದಕ್ಷಿಣ ಹಿಂದೂಸ್ಥಾನದಲ್ಲಿ ಎಲ್ಲಾ ಕಡೆ ಹುಮ್ನಾಬಾದ್‌ನ ದಾರಿಯಲ್ಲಿ ಬರುವಾಗ ಅಶ್ವಮೇಧ ಕುದುರೆ ಹೋಗುವ ಹಾಗೆ ಬಂದರು, ವಿ.ಪಿ. ಸಿಂಗ್ ಅವರನ್ನು ಮನೆಗೆ ಕಳುಹಿಸಿದಿರಿ. ಬಾಬರಿ ಮಸೀದಿ ಒಡೆದು ಈ ದೇಶ ತೆಗೆದುಕೊಳ್ಳುತ್ತೇವೆಂದು ಹೊರಟಿರಿ ಎನರಾನ್ ತೆಗೆದು ಶರದ್‌ಪವಾರ್ ಅವರನ್ನು ಮುಗಿಸಿ ದೇಶ ಕಟ್ಟುತ್ತೇವೆಂದು ಹೊರಟಿದ್ದೀರಿ. ನಾವೆಲ್ಲಾ ಕಡಿದು ಕಟ್ಟಿಕೊಂಡು ಕುಳಿತಿರುತ್ತೇವೆ. we are betrayers.

ನಾವೆಲ್ಲಾ ಅಯೋಗ್ಯರು. ನಾವು ಹೊಡೆಸಿ ಅಕ್ರಮ ಮಾಡಿ ಈ ಜಾಗಕ್ಕೆ ಬಂದೆವು ಇವತ್ತು ಪಾರ್ಟಿ ನನ್ನನ್ನು ಎಲೆಕ್ಟ್ ಮಾಡಲಿಲ್ಲ? ಈ ಒಂಬತ್ತು ತಿಂಗಳು ನನ್ನ ಪಾರ್ಟಿ ಇಲ್ಲಿ ಕುಳಿತಿರಿ ತಕ್ಕ ನನ್ನ ಸಹೋದ್ಯೋಗಿಗಳು ನನ್ನನ್ನು ನಾಯಕ ಎಂದು ಕರೆಯಲಿಲ್ಲ? ಸಂವಿಧಾನ ಬಾಹಿರವಾದಂತಹ ಮುಖ್ಯಮಂತ್ರಿ ಎಂದು ಹೇಳುತ್ತಾರೆ ನಿಜ, ಶ್ರೀಮಾನ್ ನಂಜೇಗೌಡರು ಹೇಳಿದರು. ಈ ರಾಜಕೀಯದಲ್ಲಿ ಯಾವುದೂ ಶಾಶ್ವತ ಇಲ್ಲಿ, ಈ ಮಾತನ್ನು ಆಡುವಾಗ ನಾನು ಕೆಲವು ಶಬ್ದ ಪ್ರಯೋಗ ಮಾಡಿದರೆ ನಿಮಗೆ ನೋವಾಗುತ್ತದೆ. ನಾನು ನೀವು ಆಡುವಾಗ ಕುಳಿತು ಕೇಳಲಿಲ್ಲ? ನೀವು ಮಾತನಾಡುವುದನ್ನು ನಾನು ಕೇಳಲಿಲ್ಲ? ನೀವು ಮಾತನಾಡುವುದನ್ನು ನಾನು ಕೇಳಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾತಿನ ಭರದಲ್ಲಿ ಎನ್‌ರಾನ್ ಅನ್ನು ಏಕೆ ಜಸ್ಟಿಫೈ ಮಾಡುವುದಕ್ಕೆ ಹೊರಟಿದ್ದೀರಿ?

ಶ್ರೀ ಹೆಚ್.ಡಿ. ದೇವೇಗೌಡ : ನಾನು ಜಸ್ಟಿಫೈ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ದೇಶದಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಮಗಿಂತ ಹೆಚ್ಚಾಗಿ ಪಾರ್ಲಿಮೆಂಟ್‌ನಲ್ಲಿ ಇವತ್ತು ಫಾರೀನ್ ಕ್ಯಾಪಿಟಲ್ ಅನ್ನು ಇನ್‌ವೈಟ್ ಮಾಡಿ ದಂತಹವರು. ನಾನು ಅವರ ಹೆಸರು ತೆಗೆಯಬಾರದು ನಿಮ್ಮ ಪಾರ್ಟಿಯ ಹಿರಿಯ ನಾಯಕರು, ಲೆಫ್ಟ್ ಪಾರ್ಟಿಯವರು ವಿರೋಧ ಮಾಡಿದರು, ನಾನೂ ವಿರೋದ ಮಾಡಿದ್ದೇನೆ, ಇವೊತ್ತು ಯಾವುದೇ ಕಾರಣಕ್ಕಾಗಿ ತೆಗೆಯಬಾರದೆಂದು ವಿರೋಧಿಸಿದ್ದೇನೆ. ಆದರೆ. ಅಲ್ಲಿ ವಿರೋಧಿಸಿ ಇಲ್ಲ ಬಂದು ಇನ್‌ವೈಟ್ ಮಾಡುವುದಕ್ಕೆ ಹೊರಟಿದ್ದೀರಲ್ಲಾ ಎಂದು ನನ್ನನ್ನು ಬಯ್ದರು. ನೀವೂ ಬಯ್ದಿದ್ದೀರಿ. ಬಂಗಾರಪ್ಪನವರು ರುಜು ಮಾಡಿದಾಗ ಅವರು ಏನು ಮಾಡಿದ್ದಾರೆಂಬುದು ನನಗೇನು ಗೊತ್ತಿದೆ? I have not opened my lips. ವೀರಪ್ಪ ಮೊಯಿಲಿಯವರೂ ಸಹ ಮುಖ್ಯಮಂತ್ರಿಯಾಗಿದ್ದಾಗ ರುಜು ಮಾಡುವಾಗ ದುಡ್ಡು ತೆಗೆದುಕೊಂಡರು ಎಂದು ಹೇಳುವುದಕ್ಕಾಗುತ್ತದೆಯೇ? ರಾಜ್ಯದ ಹಿತದೃಷ್ಟಿಯಿಂದ ಏನೋ ಒಂದು ಮಾಡಿರುತ್ತಾರೆ ಅಥವಾ ತಪ್ಪಾಗಿರಬಹುದು. ಏಕೆಂದರೆ ಹೊಸದಾಗಿ. ಮೊದಲನೆಯ ಬಾರಿಗೆ ಇನ್‌ವೆಸ್ಟ್ ಮಾಡುವಾಗ ಆ ಸರ್ಕಾರದ್ದನ್ನು ರದ್ದುಗೊಳಿಸಿದ್ದುದು ತಪ್ಪು ಎಂದು ನಾನು ನನ್ನ ಬಾಯಿಂದ ಹೇಳಿಲ್ಲ, ಆದರೆ ಒಂದು ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ಮೋಟಿವ್ ಅಟ್ರಿಬ್ಯೂಟ್ ಮಾಡುವುದಕ್ಕೆ ಹೋಗುವುದು ಬೇಡವೆಂದು ಹೇಳಿದೆ ಅಷ್ಟೆ. ನಾವ್ಯಾರೂ ಬುದ್ಧಿವಂತರಲ್ಲ, ತಜ್ಞರಲ್ಲ, ಇವೊತ್ತು ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಪ್ರಾಮಾಣಿಕವಾಗಿ ಹೇಳಿ. ರೆಕ್ ಬ್ಯಾಕ್‌ನಿಂದ ನನಗೇನು ಸಿಕ್ಕಿತು? ಡೆಡಲೈನ್ ಕೊಡಲು ಕಾರಣವೇನು? ಹಾಗಿದ್ದರೆ, ಅವರ ಹತ್ತಿರ ದುಡ್ಡು ತೆಗೆದುಕೊಳ್ಳುವುದಕ್ಕೆ ದೆಡೆಲೈನ್ ಕೊಡಲು ಕಾರಣವೇನು? ಹಾಗಿದ್ದರೆ, ಅವರ ಹತ್ತಿರ ದುಡ್ಡು ತೆಗೆದುಕೊಳ್ಳುವುದಕ್ಕೆ ಡೆಡ್‌ಲೈನ ಕೊಟ್ಟಿದ್ದೇನೆಯೇ? ಅದರ ಅರ್ಥವೇನು?

ನೀವು ಹೇಳಿದರೆಂದು ನಾನು ಹೇಳಿಲ್ಲ, has it not been attacked? ಕೋಳಿ ಫಯಾಜ್‌ನನ್ನು ಪ್ರಮೀಳಾ ನೇಸರ್ಗಿ ಅವರು ವಕೀಲರಾಗಿ ಬಿಡಿಸಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ದಯವಿಟ್ಟು ವಕಾಲತ್ತು ನಡೆಸುವುದು ತಪ್ಪೆಂದು ಹೇಳಬೇಡಿ.

ಶ್ರೀ ಹೆಚ್.ಡಿ. ದೇವೇಗೌಡ : ತಪ್ಪೆಂದು ನಾನು ಹೇಳಿದೆನೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಿಮ್ಮಲ್ಲಿರತಕ್ಕಂಥವರೇ ಅರ್ಧ ಜನರು ನನಗೆ ವಕಾಲತ್ತು ಕೊಡಿಸಿದ್ದಾರೆ. ಬೇಕಾದರೆ ಅವರ ಹೆಸರುಗಳ ಪಟ್ಟಿ ಕೊಡುತ್ತೇನೆ. ಯಾರು ಯಾರು ಯಾವ್ಯಾವ ಮರ್ಡರ್ ಕೇಸ್‌ನಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬಂದಿದ್ದರು, ಅವರ ಹೆಸರುಗಳ ಪಟ್ಟಿ ಕೊಡುತ್ತೇನೆ. ವಕಾಲತ್ತು ನಡೆಸುವುದು ನನ್ನ ವೃತ್ತಿ. ದಯವಿಟ್ಟು ಕೇಳಿ, ನಾನು ಅವರ ಹತ್ತಿರ ಹೋಗಿ ನಮಸ್ಕಾರ ಹಾಕಿ ಹಣ ತೆಗೆದುಕೊಳ್ಳಲಿಲ್ಲ, As an Advocate, it is my right..It is my profession.

MR. SPEAKER : She is right nothing to find fault. That is your profession.

ಶ್ರೀ ಹೆಚ್.ಎನ್. ನಂಜೇಗೌಡ : ಜೇಠ್ಮಲಾನಿಯವರೇ ರಾಷ್ಟ್ರದ ದ್ರೋಹಿಗಳಿಗೆ ವಕಾಲತ್ತು ಹಾಕಬೇಕಾದರೆ ಇವರು ಕೋಳಿ ಫಯಾಜ್‌ಗೆ ವಕಾಲತ್ತು ಹಾಕಿರುವುದು.....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನಂಜೇಗೌಡರಿಗೆ ಏನಾಗಿದೆಯೆಂದರೆ ಬಹಳ ಕಷ್ಟ.

ಅಧ್ಯಕ್ಷರು : ಪ್ರಮೀಳಾರವರೇ ತಾವು ಮಾಡಿದ್ದುದು. ತಪ್ಪು ಎಂದಲ್ಲ ನೀವು ಅವರನ್ನು ಬಿಡಿಸಿದ್ದಿರೆಂದು ಹೇಳಿದರು ಅಷ್ಟೆ.

ಶ್ರೀ ಹೆಚ್.ಡಿ. ದೇವೇಗೌಡ : ಅವರು ತಪ್ಪು ಮಾಡಿದರು ಎಂದು ನಾನು ಹೇಳಿದೆನೇ?

MR. SPEAKER : It is alright, nothing to be offended.

ಶ್ರೀಮತಿ ಪ್ರಮೀಳಾ ನೇಸರ್ಗಿ: ಕಾನೂನಿನ ಪ್ರಕಾರ ಮರಣ ದಂಡನೆಯನ್ನು ತಪ್ಪಿಸುವುದಕ್ಕಾಗುವುದಿಲ್ಲವೆಂದೂ ಸಹ ವಾದಿಸಿದ್ದೇನೆ. I have defended him and I have succeeded.

SRI. H.D. DEVE GOWDA : I appreciate your ability. I compliment your ability. I have no grouse.

(INTERRUPTIONS)

ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಬಿಜೆಪಿಯ ಶಾಸಕರು ಹಾಗೂ ಕಾರ್ಯಕರ್ತರ ಮೇಲೆ ಧಾಳಿ ಮಾಡಿತ್ತಿದ್ದಾರೆಂಬ ಹಲವಾರು ಆರೋಪಗಳನ್ನು ಮಾಡಿದ್ದಾರೆ ಹಾಗೂ ಗೃಹ ಮಂತ್ರಿ ಸಿಂಧ್ಯರವರ ಮೇಲೂ ಅಪಾದನೆ ಮಾಡಿದ್ದಾರೆ. ನಾನು ಭಾಷಣವನ್ನು ಉದ್ಧರಿಸಿ ಹೇಳುತ್ತಿಲ್ಲ. ಏಕೆಂದರೆ ಇಲ್ಲಿ ನಾವು ಶಾಸಕರಾಗಿರುತ್ತೇವೆ. ಅವರು ಇಲ್ಲಿಗೆ ಬಂದ ನಂತರ ನಮ್ಮ ಮೇಲೆ ದ್ವೇಷ ತೀರಿಸಿಕೊಳ್ಳಬೇಕಲ್ಲಾ, ಅದಕ್ಕಾಗಿ ನಾನು ದ್ವೇಷ ತೀರಿಸಿಕೊಳ್ಳಲು ಹೊರಟಿದ್ದೇನೆ! ನಾನು ಜನತಾ ದರ್ಶನ ಕಾರ್ಯಕ್ರಮಕ್ಕಾಗಿ ಕೊಡಗಿಗೆ ಹೋದಾಗ ಬೆಳಿಗ್ಗೆ 8.00 ಗಂಟೆಗೆ ಅಲ್ಲಿನ ಮೂವರು ಶಾಸಕರುಗಳು ಬಂದು ನನ್ನನ್ನು ನೋಡಿದರು. ನನ್ನ

ಜೊತೆಗೆ ಕಾಫಿ ಕುಡಿದರು. ನಾನು ಆ ಸಭೆಯಲ್ಲಿ ಏನೂ ಹೇಳ ಬೇಕಾಗಿರಲಿಲ್ಲ, ಆಗ ಅವರು ಕಾಫಿ ಬೆಳೆಗಾರರ ಬಗ್ಗೆ ಈಗಲೇ ತಾವು ಅನೌನ್ಸ್ ಮಾಡಬೇಕು. ಎಂದು ಹೇಳಿದರು. ಅವರ ಜೊತೆಗೆ ಇನ್ನು ಕೆಲವು ಬೇರೆ ಬೇರೆ ಸಂಘದವರು ಬಂದಿದ್ದರು. ನಾನು ಹೇಳಿದೆ. ನೀವು ನಿಮ್ಮ ಮೆಮೊರ್‍ಯಾಂಡಮ್ ಕೊಟ್ಟಿದ್ದೀರಿ, ಈಗಲೇ ಇದರ ಬಗ್ಗೆ ಅನೌನ್ಸ್ ಮಾಡಿ ಎಂದು ಹೇಳಿದರೆ ಮಾಡುವುದಕ್ಕೆ ಸಾಧ್ಯವಿಲ್ಲ ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ದಯವಿಟ್ಟು ಸ್ವಲ್ಪ ಸಮಯ ಕೊಡಿ, ಎಂದೆ. ಮೂರು ಜನ ಶಾಸಕರುಗಳ ಜೊತೆ ನಿಯೋಗ ಬಂದಿದ್ದವರು "you must announce it" ಎಂದು ಹೇಳಿದರು. ಸ್ವಾಮಿ. ನಾಳೆ ದಿವಸ ನೀವೇ ಮುಖ್ಯಮಂತ್ರಿಯಾದಿರೆಂದು ಇಟ್ಟುಕೊಳ್ಳೋಣ. ಆಗ ಯಾರಾದರೊಂದು ಮೆಮೊರ್‍ಯಾಂಡಮ್ ಕೊಟ್ಟಾಗ ಆ ನಿಮಿಷದಲ್ಲೇ ಅನೌನ್ಸ್ ಮಾಡುವುದಕ್ಕೆ ಸಾಧ್ಯವೇ? ನೀವು ಮಾಡುತ್ತೀರಾ? ಯಾರು ಮಾಡುತ್ತಾರೆ?

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ. ನನಗೆ ಮಾತನಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು. ಆ 'ಜನತಾ ದರ್ಶನ'ದ ದಿವಸ ಕೊಡಗಿನಲ್ಲಿ ನಡೆದಂತಹ ಘಟನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿರುವುದರಲ್ಲಿ ಪೂರ್ಣ ಸತ್ಯಾಂಶವಿದೆ. ಇಲ್ಲವೆಂದು ಹೇಳುವುದಿಲ್ಲ, ಆದರೆ ಈ ಸಂದರ್ಭದಲ್ಲಿಯೇ ತಾವು ಹೇಳಬೇಕು ಎನ್ನುವುದಕ್ಕೆ ಹಿನ್ನೆಲೆ ಕೂಡ ಇದೆ. ಏಕೆಂದರೆ, ಕಾಫಿ ಬೆಳೆಗಾರರು ಏನು ಮಾಡಿದ್ದಾರೆಂದರೆ ಫಸಲನ್ನು ....

ಅಧ್ಯಕ್ಷರು : ತಮ್ಮನ್ನು ನಾನು ಅನಂತರ ಕರೆಯುತ್ತೇನೆ. ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ : ಆಗ ನಾನು ಏನು ಹೇಳಿದೆನೆಂದರೆ,'ಈ ಸಂದಂರ್ಭದಲ್ಲಿ ನಾನು ಹೇಳುವುದಕ್ಕಾಗುವುದಿಲ್ಲ,ನಮ್ಮ ಮಂತ್ರಿಮಂಡಲದಲ್ಲಿ ಇದರ ಬಗ್ಗೆ ಅತಿ ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ' ಎಂದು.' ಹಾಗಿದ್ದರೆ ನಾವು ಧರಣಿ ಕುಳಿತುಕೊಳ್ಳುತ್ತೇವೆ, ಕಪ್ಪು ಭಾವುಟ ಹಿಡಿಯುತ್ತೇವೆ' ಎಂದು ಹೇಳಿದರು. ಆಗ ನಾನು 'ನಾನು ಕಪ್ಪು ಭಾವುಟ ಹಿಡಿಯವುದಕ್ಕೆ ನಿಮಗೆ ಹಕ್ಕು ಇದೆ ಹಿಡಿಯಿರಿ, ನಾನು ಬೇಡವೆಂದು ಹೇಳುವುದಿಲ್ಲ, ನನಗೆ ಅವರ ಬಗ್ಗೆ ದ್ವೇಷವಿಲ್ಲ, ನಾವೂ ಸಹ ಹಿಂದೆ ಕಪ್ಪು ಭಾವುಟ ಹಿಡಿದಿದ್ದೇವೆ. ಎಂದು ಹೇಳಿದೆ. ಈ ರೀತಿ ನಾನು ಹೇಳಿದೆ ತಾನೇ? ನಾನು ಹೇಳಿರುವುದರಲ್ಲಿ ಒಂದು ಅಸತ್ಯವೇನಾದರೂ ಇದ್ದರೆ ಹೇಳಿ. ಆದರೆ, ಅವರು ಏನು ಮಾಡಿದರೆಂದರೆ, ಜಿಲ್ಲಾಧಿಕಾರಿಗಳ ಕಛೇರಿ ಬಾಗಿಲು ಇದೆಯಲ್ಲಾ, ನಾನು ಕಛೇರಿಗಳ ಹೋಗಲು ಬಿಡದಂತೆ ಬಾಗಿಲ ಬಳಿಯಲ್ಲಿಯೇ ತಡೆಯಬೇಕೆಂದು ತಡೆದರು. ಇದು ಸತ್ಯವೇ, ಅಲ್ಲವೇ ಎಂಬುದನ್ನು ನೀವೇ ಅವರನ್ನು ದಯಮಾಡಿ ಕೇಳಿ. ನಾನು ಒಂದು ಅಕ್ಷರವನ್ನೂ ಸಹ ಅಸತ್ಯ ಹೇಳಲು ತಯಾರಿಲ್ಲ, ಸ್ಥಳದಲ್ಲಿ ಎಲ್ಲಿ ಅಧಿಕಾರಿಗಳಿದ್ದಾರೆ. ಜನತಾ ದರ್ಶನ' ಕಾರ್ಯಕ್ರಮದಲ್ಲಿ ಜನರು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳುವುದಕ್ಕೆ ಬಂದಿದ್ದರೆ. 'ನೀವು ಕಪ್ಪು ಭಾವುಟ ಹಿಡಿಯುವುದಾದರೆ ಒಂದು ಕಡೆ ನಿಂತು ಕೊಂಡು ಹಿಡಿಯಿರಿ, ಇದು ನಿಮ್ಮ ಪಕ್ಷದ ಕಾರ್ಯಕ್ರಮ, ನಾನು ಬೇಡವೆಂದು ಹೇಳುವುದಿಲ್ಲ'ವೆಂದು ನಾನೇ ಸ್ವತಃ ಹೇಳಿ ಕಳುಹಿಸಿದ್ದೇನೆ. ನಾನು ಅಲ್ಲಿದ್ದ ಅಧಿಕಾರಿಗಳಿಗೆಲ್ಲಾ ಕೈ ಮುಗಿದು ದಯವಿಟ್ಟು ಹಿಂಸೆಗೆ ಅವಕಾಶ ಕೊಡದಂತೇ ನೋಡಿಕೊಳ್ಳಬೇಕು, ಹಿಂಸೆಯಾದರೆ ನನ್ನ ಮೇಲೆ ಕೆಟ್ಟ ಹೆಸರು ಬರುತ್ತದೆ' ಎಂದು ಕೇಳಿಕೊಂಡೆ. ಆಗ ಸುಮಾರು 45 ನಿಮಿಷಗಳ ಕಾಲ ಘಟನೆ ಜರುಗಿದಂಥ ಸಂದರ್ಭದಲ್ಲಿ ಎಂತಹ ಕೆಟ್ಟ ಶಬ್ಧಗಳು ಪ್ರಯೋಗವಾಯಿತು ಎನ್ನುವುದನ್ನು ನಾನು ಈ ಸದನದಲ್ಲಿ ಮಾತನಾಡುವುದಿಲ್ಲ, ತಾವು ಅಂತಹ ಕೆಟ್ಟ ಶಬ್ದಗಳನ್ನು ಮಾತನಾಡಿದಿರಿ. ಕೊನೆಗೆ, ಪತ್ರಿಕೆಗಳಲ್ಲಿ ಫೋಟೋ ಬತೆಂದು ಹೇಳಿದಿರಲಿಲ್ಲಾ, ಪೊಲೀಸರು ತಮ್ಮ ಲಾಠಿಗಳನ್ನು ನೆಲಕ್ಕೆ ಹೊಡೆಯುತ್ತಿರುವ ಫೋಟೋ ಬಂತು

ನಿಜ. ಯಾವಾಗ ಸ್ವಾಮಿ? ಇದರ ಬಗ್ಗೆ ಒಬ್ಬರು ಪೊಲೀಸ್ ಕಂಪ್ಲೆಂಟ್ ಕೊಟ್ಟಿರುವುದು ನನಗೆ ಗೊತ್ತಿದೆ ಅಲ್ಲಿ ನೂರಾರು ಜನರು ಅವರೇ ಇದ್ದರು. ಆ ಸಂದರ್ಭದಲ್ಲಿ ಯಾರೋ ಒಬ್ಬ ಹುಡುಗನ ತೊಡೆಗೆ ಏಟು ಬಿದ್ದಿದೆಯೆಂದು ಯಾರೋ ಪೊಲೀಸ್ ಠಾಣೆಗೆ ಹೋಗಿ ಕಂಪ್ಲೆಂಟ್ ಕೊಟ್ಟ ನಂತರ ಇವರು ಸಬ್‌ಸಿಕ್ವೆಂಟ್ ಆಗಿ ಇನ್ನೊಂದು ಕಂಪ್ಲೆಂಟ್ ಅನ್ನು ಲಾಡ್ಜ್ ಮಾಡಿದ್ದಾರೆ. ಇವೆರಡನ್ನೂ ತರಿಸಿಕೊಳ್ಳಿ, ನಾನು ಬೇಡವೆಂದು ಹೇಳುವುದಿಲ್ಲ, ಮೂರೂ ಜನರು ಬಂದರು, ಅಫಿಷಿಯಲ್ ರಿವ್ಯೂ ಮೀಟಿಂಗ್‌ನಲ್ಲಿ ಕಳಿತಿದ್ದರು, ಸಹಕಾರ ಕೊಟ್ಟರಿ, ಏನೂ ಮಾಡಲಿಲ್ಲ! ಗೃಹ ಮಂತ್ರಿಗಳು ತುಂಬಾ ಕೆಟ್ಟವರಿದ್ದಾರೆಂದು ಹೇಳಿದ್ದೀರಿ, ತುಂಬಾ ಸಂತೋಷ. ನನಗೆ ಅವರು ಬಾಡಿಗಾರ್ಡ ಆಗಿದ್ದಾರೇಂತಲೂ ಹೋಳಿದ್ದೀರಿ. ನಾವು ಹೋದ ಕಡೆಯಲ್ಲೆಲ್ಲಾ ಕಂದಾಯ ಮಂತ್ರಿಗಳು ಬರಬೇಕೇಂದು ಅವರನ್ನು ಕೇಳಿಕೊಂಡೆ, ಏಕೆಂದರೇ, ಕಂದಾಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಬರುತ್ತಿದ್ದುದ್ದರಿಂದ ಅಲ್ಲಿಯೋ ತೀರ್ಮಾನ ಮಾಡೋಣವೆಂದು. ಇದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಹಣಕಾಸು ಸಚಿರೂ ಸಹ ಇದ್ದರು ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ತೊಂದರೆಯರುವುರಿಂದ ಗೃಹ ಸಚಿವರು ಜೊತೆಗಿದ್ದರು. ಜನತಾ ದರ್ಶನಕ್ಕೆ ಹೊದಂಥ ಸಂದರ್ಭದಲ್ಲಿ ವಿದ್ಯುತ್ ಸಮಸ್ಯೆಯೂ ಬರುವುರಿಂದ ತಾವೂ ಬರಬೇಕೆಂದು ಪಟೇಲ್ ಅವರನ್ನು ಕರೆದೆ. ಆಗ ಅವರು ನನಗೆ ಆರೋಗ್ಯದ ಸಮಸ್ಯೆಯಿರುವುದರಿಂದ ಕೆಲವು ಕಡೆ ಬರುತ್ತೇನೆ, ಕೆಲವು ಕಡೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ, ಇಷ್ಟೆಲ್ಲಾ ಮಾಡಿ, ಬೇರೆ ರಾಜ್ಯಗಳಲ್ಲಿ ಏನಿದೆ ಎಂದು ಕಂಪೇರ್ ಮಾಡಿದರೆ ಮನಸ್ಸಿಗೆ ನೋವಾಗುತ್ತದೆ. ತಾವು ನಂಜೇಗೌಡರು ಹಿರಿಯರಿದ್ದೀರಿ, ದೇಶದ ರಾಜಕಾರಣ ಎಷ್ಟು ಕೆಟ್ಟಿದೆ ಎನ್ನುವುದಕ್ಕೆ ಇಂಡಿಯಾ ಟುಡೇ ಪತ್ರಿಕೆಯಲ್ಲಿ ಆರ್ಟಿಕಲ್ಸ್ ಓದಿ ಗೊತ್ತಾಗುತ್ತದೆ. ಇಲ್ಲಿ 'ಈ ವಾರ' ಅಲ್ಲ ಇನ್ನೊಬ್ಬರು ವೈಕುಂಟರಾಜುರವರು ಬರೆಯುವ 'ಈ ವಾರ' ಅಲ್ಲ ಅದು. ಇದು ಯಾವುದೋ ಒಂದು 'ಈ ವಾರ' ಅದನ್ನು ಓದಿ ಸಂತೋಷ ಪಟ್ಟುಕೊಂಡರೆ ನನ್ನದು ತಕರಾರು ಇಲ್ಲ, ಇಂಡಿಯಾ ಟುಡೇ ಕೂಡ ಸ್ವಲ್ಪ ಜವಾಬ್ದಾರಿ ಇರುವ ಮ್ಯಾಗಸೈನ್. 1992ರಲ್ಲಿ ಪಾಲಿಟಿಕ್ಸ್, ಕ್ರಿಮಿನಲೈಸೇಷನ್ ಬಗ್ಗೆ ಬರೆದಿದ್ದಾರೆ. ಅದನ್ನು ತೋರಿಸುತ್ತೇನೆ. ಇಂಡಿಯಾ ಟುಡೇ ಒಳಗೆ ಯಾವ ಯಾವ ಪಕ್ಷಗಳು ಎಷ್ಟೆಷ್ಟು ಇದೆ ಎಂದು ಪಾರರ್ಟಿವೈಸ್ ಬರೆದಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ಸತ್ಯಾಂಶ ನನ್ನಬಾಯಿಯಿಂದ ಕೂಡ ಬರಬೇಕಾಗಿದೆ. ಸತ್ಯಾಂಶ ನಾನೂ ಕೂಡ ಹೇಳಬೇಕಾಗುದೆ. ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗಿದೆ, ಏಕೆಂದರೆ ಆ ಸಂದರ್ಭದಲ್ಲಿ ನಾನೂ ಹಾಜರಾಗಿದ್ದೆ. ಆದ್ದರಿಂದ ನನಗೆ ದಯವಿಟ್ಟು ಅವಕಾಶ ಕೊಡಬೇಕಾಗಿದೆ. ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಯಾವುದೂ ಅಸತ್ಯ ಹೇಳುವುದಕ್ಕೆ ತಯಾರಿಲ್ಲ, ಆ ಫೋಟೋ ನಾನು ನೋಡಿದ್ದೇನೆ. ನನಗೆ ಹೇಳುವ ಅಭ್ಯಾಸವೇ ಅದು. ನಿಮ್ಮ ಮೂರು ಜನ ಶಾಸಕರು ಬಂದು ರೀವ್ಯೂ ಕಮಿಟಿ ಮೀಟಿಂಗ್‌ಲ್ಲಿ ಕೂಡಿದ್ದರು. ಅವರ ಎದುರಿಗೆ ಹೋಳುತ್ತಿದ್ದೇನೆ. ಹಿಂದು ಮುಂದು ಹೇಳುತ್ತಿಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ಸಂದರ್ಭದಲ್ಲಿ ಘಟನೆ ನಡೆಯಿತು ಖಂಡಿತ ಅದು ಏನು ನಡೆದಿದೆ ಅವರ ಬಗ್ಗೆ ತಾವು ಹೇಳುತ್ತಿದ್ದೀರಿ, ಅದರ ಬಗ್ಗೆ ನನ್ನದು ಆಕ್ಷೇಪ ಇಲ್ಲ, ನಾವು ಏನು ಆರೋಪ ಮಾಡುತ್ತಾ ಇರುವುದು ಅಥವಾ ನಿಮಗೆ ಕೇಳುತ್ತಾ ಇರುವುದು ಎಂದರೆ ಅವತ್ತು ಲಾಠಿ ಛಾರ್ಜ್ ಆಗಲಿಲ್ಲ, ಮೈಲ್ಡ್ ಲಾಠಿ ಆಯಿತು ಎಂದು ಹೇಳಿದಿರಿ. ನೂರಾರು ಜನ ದಿಕ್ಕಾ ಪಾಲಾಗಿ

ಓಡುತ್ತಾ ಇರುವುದು; ಯಾವುದು ನಂಬುತ್ತೀರಿ. ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಸ್ಥಳದಲ್ಲಿಯೇ ಇದ್ದೆ. ನನಗೆ ಎರಡು ಕಣ್ಣು ಇನ್ನೂ ಹೋಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಸತ್ಯಕ್ಕೆ ಅಪಚಾರ ಮಾಡಿದೆ ನೇರವಾಗಿ ವಿಷಯವನ್ನು ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ದಯಮಾಡಿ ಸತ್ಯಕ್ಕೆ ಅಪಚಾರ ಮಾಡಿದ್ದೇನೆ ಎಂದು ಹೇಳ ಬೇಡಿ.

ಶ್ರೀ ಹೆಚ್.ಡಿ. ಬಸವರಾಜ್ : ಎರಡು ನಿಮಿಷ ಅವಕಾಶ ಕೋಡಬೇಕಾಗಿದೆ.ಏಕೆಂದರೆ ಸಂಬಂಧಪಟ್ಟ ಶಾಸಕರಿಗೆ ಇಲ್ಲಿ ಮಾತನಾಡುವುದಕ್ಕ ಅವಕಾಶ ಕೊಡಬೇಕಂದು ನಾನು ಕೇಳಿಕೊಳ್ಳುತ್ತೇನೆ. ~~ಎರಡು ನಿಮಿಷ~~ ತಾವು ಅವಕಾಶ ಕೊಡಬೇಕಾಗಿದೆ. ಏಕೆಂದರೆ ನಮ್ಮ ಬಗ್ಗೆ ಇಲ್ಲಿ ಮಾತನಾಡಿರುವುದರಿಂದ ಸದಸ್ಯರಿಗೆ ಅವಕಾಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ದಯವಿಟ್ಟು ಎರಡು ನಿಮಿಷ ಅವಕಾಶ ಕೊಟ್ಟರೆ ಸಾಕು. ಇವತ್ತು ಸತ್ಯ ಘಟನೆ ಏನು ನಡೆಯಿತು. ಎಂದು ನಮ್ಮ ಬಾಯಿಯಿಂದ ಬರಲಿ. ದಯವಿಟ್ಟು ಅಧ್ಯಕ್ಷರೆ ಒಂದೇ ಒಂದು ನಿಮಿಷ. ತಾವು ಹೇಳಿದ್ದೀರಿ ಬಹಳ ಸತ್ಯದ ಘಟನೆ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು : ತಾವು ಮತ್ತೆ ರಂಜನ್ ಅಪ್ಪಚ್ಚು ಹೊಸ ಸದಸ್ಯರಿದ್ದೀರಿ. ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ ಮೇಲೆ ಎಲ್ಲರೂ ಮಾತನಾಡಿದ್ದಾರೆ. ಈಗ ಸರ್ಕಾರದ ಪರವಾಗಿ ಅವರು ಉತ್ತರ ಕೊಡುತ್ತಿದ್ದಾರೆ. ಮತ್ತೆ ನೀವು ಭಾಷಣ ಮಾಡುವುದು ಪದ್ಧತಿ ಅಲ್ಲ, ಅವರ ಉತ್ತರ ಪೂರ್ಣವಾದ ಮೇಲೆ ನೀವು ಏನು ಕೇಳಬೇಕು, ಅದನ್ನು ವಿವರಣೆ ರೂಪದಲ್ಲಿ ಕೇಳಬಹುದು, ಅವಕಾಶ ಕೊಡುತ್ತೇನೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ : 1992ರದ್ದು ಹೇಳುತ್ತಿದ್ದೇನೆ. ಎಲ್ಲಾ ರಾಜಕೀಯ ಪಕ್ಷದ್ದೂ ಹೇಳಿದೆ ಒಂದು ರಾಜಕೀಯ ಪಕ್ಷದ್ದು ನಾನು ಓದುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಿಮ್ಮ ಒಬ್ಬರ ಮೇಲೆ ಹೇಳುವುದಕ್ಕೆ ಹೋಗುತ್ತೇನೆಂದು ಹೇಳಬೇಡಿ. ಏಕೆಂದರೆ ಬಿ.ಜೆ.ಪಿ. ವ್ಯಾಲ್ಯೂ ಬೇಸ್ಡ್ ಪಾರ್ಟಿ. ಬಾಕಿಯವರು ಹರಿದು ಹಂಚಿ ಹೋಗಿದ್ದಾರೆ. ಇದಕ್ಕೋಸ್ಕರ ನಾನು ಇಂಡಿಯಾ ಟುಡೇಮ್ಯಾಗಸೈನ್‌ನಲ್ಲಿ ಏನು ಅನಾಲೈಸ್ ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಪಾಲಿಟಿಕ್ಸ್ ವಿತ್ ಕ್ರಿಮಿನಲ್ ರೆಕಾರ್ಡ್ಸ್ ಬಿ.ಜೆ.ಪಿ. 77 ಕಾಂಗ್ರೆಸ್ 46, ಜೆ.ಡಿ (ಎ) ಅಜಿತ್ ಸಿಂಗ್ ಗ್ರೂಪ್ 11 ಜೆ.ಡಿ. (ಬಿ) ಬೊಮ್ಮಾಯಿ ಗ್ರೂಪ್ 18, ...

ಶ್ರೀ ಬಿ.ಎಸ್. ಯಡಿಯೂರಪ್ಪ : ವಿಷಯ ಬಿಟ್ಟು ಮುಂದೆ ಹೋಗಿಬಿಟ್ಟರಲ್ಲಾ ಸ್ವಾಮಿ

ಶ್ರೀ ಹೆಚ್.ಡಿ. ದೇವೇಗೌಡ : ನೀವು ಇವತ್ತು ಕರ್ನಾಟಕ ರಾಜ್ಯದಲ್ಲಿ ಗೂಂಡಾ ರಾಜ್ಯವಾಗುತ್ತಿದೆ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಇದು ಒಂದು ಸಿಂಪಲ್ ಕರ್ಟೆಸೀ, ನೀವು ನಂತರ ವಿವರಣೆ ರೂಪದಲ್ಲಿ ಕೇಳಬಹುದು.

ಶ್ರೀ ಹೆಚ್.ಡಿ. ದೇವೇಗೌಡ : ನಾವೆಲ್ಲಾ ಗೂಂಡಾಗಳ ರಾಜ್ಯ, ಹೋಮ್ ಮಿನಿಸ್ಟರ್ ಬರೀ ಗೂಂಡಾ, This is a political analysis by India To-day

magazine . ಇವತ್ತು ಇಲ್ಲ್ ಸರ್ಕ್ಯುಲೇಟ್ ಆಗುವಂತಹ ಒಂದು ಮ್ಯಾಗಸೈನ್ ಎಲ್ಲಾ ನಮ್ಮ ಪಾರ್ಟಿಯದು ಹೇಳಿದ್ದಾರೆ, ಕಾಂಗ್ರೆಸ್ ಪಕ್ಷದ್ದೂ ಹೇಳಿದ್ದಾರೆ. ನಿಮ್ಮದ್ದೂ ಹೇಳಿದ್ದಾರೆ. ಇದರಲ್ಲಿ ಯಾರದ್ದೂ ಬಿಟ್ಟಿಲ್ಲ. ಪಾಲಿಟಿಕ್ಸ್ ಈ ದೇಶದಲ್ಲಿ ಯಾವ ಹಂತಕ್ಕೆ ಹೋಗಿದೆ ಎನ್ನುವುದಕ್ಕೆ ಇವತ್ತು ಕರ್ನಾಟಕದಲ್ಲಿ ನಾವು ಅಲ್ಲಿ ಲಾಠಿ ಛಾರ್ಜ್ ಮಾಡಿ ಕುತ್ತಿಗೆ ಪಟ್ಟಿ ಹಿಡಿದು ವೀರಪ್ಪನ್‌ನನ್ನು ಹಿಡಿದುಕೊಳ್ಳಬೇಕಾಗಿತ್ತು ಎಂದು ನೀವು ಹೇಳಿದಿರಿ. ನಿಮ್ಮ ಭಾಷಣ ಇದೆ, ನಾನು ಅಲ್ಲೇ ಕುಳಿತಿದ್ದೆ ಇವರು ಹೋಗಿ ಹಿಡಿದುಕೊಂಡು ಹೊಡೆದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನತಾ ದರ್ಶನ ಗಲಭೆ. ಶಾಸಕರಿಗೆ ಏಟು, ಮಡಿಕೇರಿಯಲ್ಲಿ ಗೌಡರಿಗೆ ಘೇರಾವು, ಲಾಠಿ ಪ್ರಹಾರ, ಸಿಂಧ್ಯ ವಿರುದ್ಧ ಹಲ್ಲೆ ಆರೋಪ ಇದೆಲ್ಲಾ ಪ್ರಜಾವಾಣಿ ಪತ್ರಿಕೆಯಲ್ಲಿ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : ಹಲ್ಲೆ ಆರೋಪ ಕರೆಕ್ಟ್ ನಾನು ಒಪ್ಪುತ್ತೇನೆ. ಇವತ್ತು ಸರ್ಕಾರವನ್ನು ನಡೆಸುತ್ತಾ ಇರುವವರು, ~~ಅವರದೇ ಗವರ್ನಮೆಂಟ್~~ ಏಕೆಂದರೆ ಈಗ ತಾನೇ ಹೇಳಿದರು ನಾವು ಮಾಯಾವತಿಯವರನ್ನು ಮುಖ್ಯಮಂತ್ರಿ ಮಾಡಿದ್ದೇವೆ. ಒಂದು ಹರಿಜನ ಮಹಿಳೆಯನ್ನು ನಾವು ಮಾಡಿದ್ದೇವೆ ಎಂದು. ಸಂತೋಷ,, We compliment you. ಎಷ್ಟು ಜನ ಶಾಸಕರನ್ನು ನ್ಯಾಷನಲ್ ಸೆಕ್ಯುರಿಟಿ ಆರ್ಡಿನೆನ್ಸ್‌ನಲ್ಲಿ ಹಾಕಿದ್ದಾರೆ ಹೈಕೋರ್ಟ್ ರಿಲೀಸ್ ಮಾಡಿದ ಮೇಲೆ, ಈ ನ್ಯಾಷನಲ್ ಸೆಕ್ಯೂರಿಟಿ ಆರ್ಡಿನೆನ್ಸ್‌ನಲ್ಲಿ ತೆಗೆದುಕೊಂಡು ಎಷ್ಟು ಜನ ಶಾಸಕರನ್ನು ಹಾಕಿದ್ದಾರೆ 9 ಜನ ಶಾಸಕರು ಇವತ್ತು ನ್ಯಾಷನಲ್ ಸೆಕ್ಯುರಿಟಿ ಆರ್ಡಿನೆನ್ಸ್ ಒಳಗೆ ಬ್ಯಾಕ್ ಸೀಟ್ ಡ್ರೈವಿಂಗ್ ನನ್ನ ಹತ್ತಿರ ಎಲ್ಲಾ ಇದೆ. ರೆಕಾರ್ಡ್ಸ್ ಇಟ್ಟುಕೊಂಡಿದ್ದೇನೆ. ಇವತ್ತು ಉತ್ತರ ಪ್ರದೇಶದಲ್ಲಿ ನೀವು ಬೆಂಬಲ ಕೊಟ್ಟು ನಡೆಸುತ್ತಾ ಇರತಕ್ಕಂತಹ ಸರ್ಕಾರದಲ್ಲಿ 9 ಜನ ಶಾಸಕರನ್ನು 100 ಜನ ಒಂದು ಪಕ್ಷದ ಕಾರ್ಯಕರ್ತರನ್ನು ಹೈಕೋರ್ಟಿನಲ್ಲಿ ಬಂಧಿಸಿದ್ದವರನ್ನು ರಿಲೀಸ್ ಮಾಡಿದ ಮೇಲೆ, they have been taken under National Securuty Act and kept behind the bars. I have got the names of MIAa. It is for the first time in Indian history. ಇದು ಆಗಿದೆ. ನಾವು ನೀವು ಒಟ್ಟಿಗೆ ಸೇರಿ ಎಮರ್ಜೆನ್ಸಿ ಫೈಟ್ ಮಾಡಿದವರು. ಮೀಸಾ ಕಾನೂನು ಫೈಟ್ ಮಾಡಿದವರು. ಟಡಾ ಹೋಗಬೇಕೆಂದು ಹೇಳಿದವರು. ಚುನಾಯಿತ ಪ್ರತಿನಿಧಿಗಳನ್ನು ತೆಗೆದುಕೊಂಡು ಹೋಗಿ ಇವತ್ತಿನ 9 ಜನ ನ್ಯಾಷನಲ್ ಸೆಕ್ಯೂರಿಟಿ ಆರ್ಡಿನೆನ್ಸ್‌ನಲ್ಲಿ ಇಟ್ಟಿದ್ದೀರಿ. ಇವತ್ತು ಮಾಯವತಿಯವರನ್ನು ನಾವು ಮುಖ್ಯ ಮಂತ್ರಿ ಮಾಡಿ ಬಿಟ್ಟಿದ್ದೇವೆ. ಹರಿಜನರ ಓಟು ನಮಗೆ ಬಂದು ಬಿಡುತ್ತದೆ ಈ ದೇಶದಲ್ಲಿ ಸೆಂಟ್ರಲ್ ಗವರ್ನಮೆಂಟ್ ನಾವು ಹಿಡಿದು ಇಟ್ಟು ಬಿಡುತ್ತೇನೆ. ಅಷ್ಟು ಸುಲಭ ಅಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಲಾಯಂ ಸಿಂಗ್ ಯಾದವ್ ಮುಖ್ಯ ಮಂತ್ರಿಯಾಗಿದ್ದಂತಹ ಕಾಲದಲ್ಲಿ ರಸ್ತೆಯಲ್ಲಿ ಹೆಣ್ಣು ಮಕ್ಕಳ ಮಾನ ಭಂಗ ಆಗಿದೆ. ಅಧ್ಯಕ್ಷರೇ ಹೇಳಿ ಹೌದು ಯಡಿಯೂರಪ್ಪನವರೇ, ಪ್ರತಿಯೊಂದು ರಾಜ್ಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇವೆ ಎಂದು ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ನನ್ನ ಮೇಲೆ ಏನೇನು ಮಾತನಾಡಿದ್ದಾರೆ. ದೇಶಜ ರಾಜಕಾರಣಕ್ಕೆ ಹೊರಟಿದ್ದಾರೆ ಎಂಟೆಲ ತಿಂಗಳಿಗೆ ಹೆಗಡೆಯವರಾದರೂ ಐದು ವರ್ಷದ ಮೇಲೆ ಹೋದರು, ಇವರು ಎಂಟೇ ತಿಂಗಳಲ್ಲಿ ದೇಶದ ರಾಜಕಾರಣವನ್ನು

ಮಾಡುವುದಕ್ಕೆ ಹೊರಟಿದ್ದಾರೆ. ನೀವು ಏನೇನು ಪದ ಬಳಕೆ ಮಾಡಿದ್ದೀರಿ ಅವೆಲ್ಲಾ ನನ್ನ ಹತ್ತಿರ ಇದೆ. ನಾನು ಅಷ್ಟು ಲಘುವಾಗಿ ಮಾತನಾಡುವುದಿಲ್ಲ ಎಲ್ಲಾ ಕುಳಿತುಕೊಂಡು ಕೇಳಿದ್ದೇನೆ. ನೀವು ಏನೇನು ಹೇಳಿದಿರಿ ಸಮಯ ಬಂದಾಗ ಉತ್ತರ ಕೊಡಬೇಕು ಕೊಡುತ್ತಿದ್ದೇನೆ. ನೀವು ತೆಗೆದುಕೊಳ್ಳಲೂ ಬೇಕು. ಕೊಡಲೂ ಬೇಕು. ಎರಡೂ ಮಾಡಬೇಕು. ಮಾನ್ಯ ವೈ. ರಾಮಕೃಷ್ಣರವರು ಇಲ್ಲಿ ಕೂತು ಕೊಂಡಾಗ ನೀವು ನೋಡುತ್ತಾ ಇರಲಿಲ್ಲವೇ? ಅರಸು ನಾವು ಆ ಕಡೆ ಕೂತು ಮಾತನಾಡುತ್ತಾ ಇರಲಿಲ್ಲಿವೇ? ಮುಲಾಯಂ ಸಿಂಗ್‌ರವರು ಬಹಳ ಕೆಟ್ಟವರು ಎಂದು ಅವರು ಹೇಳಿದರು. ಅವರ ವಿರುದ್ಧ ನಿಂತಿದ್ದ ಕ್ಯಾಂಡೇಟ್ ಯಾರು? How many criminal cases are there against him? ಅವರು ಸಭೆಯಲ್ಲಿ ಇಲ್ಲ. ನೀವು ಮುಲಾಯಂ ಸಿಂಗ್ ಹೆಸರು ಹೇಳಿದ್ದರಿಂದ ನಾನು ಹೇಳಿದೆ. How many criminal cases are against him? who is thhe candidate? ನ್ಯಾಷನಲ್ ಸೆಕ್ಯೂರಿಟಿ ಆರ್ಡಿನೆನ್ಸ್‌ನಲ್ಲಿ ಇವತ್ತು 9 ಜನರನ್ನು ತೆಗೆದುಕೊಂಡು ಒಳಗೆ ಹಾಕಿದಿರಿ. ಯಾವ ಸರ್ಕಾರ ನೀವು ನಡೆಸುತ್ತಿದ್ದೀರೋ ಎದೆ ತಟ್ಟಿ ಹೇಳಿದವರು ನೀವು ಮಾಯಾವತಿಯವರ ಬಗ್ಗೆ ಇವತ್ತು ನಾವು ಆ ಕೆಲಸ ಮಾಡಲಿಲ್ಲ. ಶ್ರೀ ರಾಮಕೃಷ್ಣರವರು ಹೇಳಿದರು ನಾನು ಈಲ್ಡ್ ಆಗುವುದಿಲ್ಲವೇ?

ಶ್ರೀ ವೈ ರಾಮಕೃಷ್ಣ : ಮಾಯಾವತಿಯವನ್ನು ನಾವು ವಿರೋಧ ಮಾಡುತ್ತೇವೆ ಎಂದು ತಾವು ಹೇಳಿದಿರಿ.

ಶ್ರೀ ಹೆಚ್.ಡಿ. ದೇವೇಗೌಡ : ಹೌದು ನಾನು ಹೇಳುತ್ತೇನೆ. ಈ ನಿಮಿಷದಲ್ಲೂ ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ನಿಮ್ಮ ಉದ್ದೇಶ ಏನೆಂದರೆ, ನಾನೂ ಮುಲಾಯಂನ ಸಿಂಗ್ ಯಾದವ್ ಆಗಬೇಕು ಎಂದು. ಒಂದು ವೇಳೆ ಹಾಗೆ ಆಗಲೇ ಬೇಕು ಎಂಬ ಆಸೆ ಇದ್ದ ಪಕ್ಷಕ್ಕೆ ಇವತ್ತು ಮುಲಾಯಂ ಸಿಂಗ್ ಏನು ಆಗಿದ್ದಾರೆ ಹಾಗೆ ಆಗುತ್ತೀರಿ ಎಂದು ಹೇಳುತ್ತೇನೆ. ನಾನು ಹೇಳಿರುವುದು ರೆಕಾರ್ಡ್‌ನಲ್ಲಿ ಇದೆ. ಯಾರ ದಾರಿಯಲ್ಲಿ ಹೋಗಬೇಕಂದು......

ಶ್ರೀ ಹೆಚ್.ಡಿ. ದೇವೇಗೌಡ : ನಾನು ಮುಲಾಯಂ ಸಿಂಗ್ ಯಾದವ್ ಆಗುತ್ತೇನೆ ಎಂದು ತಿಳಿದುಕೊಂಡೇ ಇಲ್ಲಿ ಕುಳಿತಿದ್ದೇನೆ.

8.30 ಪಿ.ಎಂ.

ನಿಮ್ಮಿಂದ ನಾನೇನು ಆಗಬೇಕಾಗಿಲ್ಲ. ನಾನು ಅಧಿಕಾರಕ್ಕಾಗಿ ಇಲ್ಲಿ ಕುಳಿತುಕೊಂಡಿಲ್ಲ. ಈ ಜಾಗ ಖಾಯಂ ಅಲ್ಲವೆಂದು ತಿಳಿದುಕೊಂಡೇ ಕುಳಿತಿದ್ದೇನೆ ಇದು ವಂಶಪಾರಂಪರ್ಯವಾಗಿ ಬಂದ ನಮ್ಮ ತಾತನ ಆಸ್ತಿಯಲ್ಲ. ಆದರೆ ನೀವು ಏನು ಈಗ ಹೇಳಿದಿರಿ The BJP and the Janata Dal combine fought against the draconian law in this country and, chivalrous....

(INTERRUPTIONS)

ಶ್ರೀ ವೈ. ರಾಮಕೃಷ್ಣ : ಮನುಷ್ಯನಿಗೆ ಇರಬೇಕಾಗಿರುವುದು Chivalry ಆ ಮಾನವೀಯತೆ ಇಲ್ಲ. ಆದರ ಬಗ್ಗೆ ಮೆಚ್ಚಿಗೆ ಇಲ್ಲ. ಅಧ್ಯಕ್ಷರು ಇದರ ಬಗ್ಗೆ ರೂಲಿಂಗ್ ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಅವರಿಗದೆ ಹೇಳಲೇ ಇಲ್ಲ.

ಅಧ್ಯಕ್ಷರು : ಸನ್ಮಾನ್ಯ ರಾಮಕೃಷ್ಣರವರೇ, the ruling is, the Chair has recongnised that Mr. Y. Ramakrishna is chivalrous to women

(ಗೊಂದಲ)

SRI. Y. RAMAKRISHNA : Because she is a lady belonging to schduled casts you can not take advantage That is all.

ಶ್ರೀ ಜೆ.ಹೆಚ್. ಪಟೇಲ್ : ನಾಗರಹಾವಿನ ಹೆಡೆಯ ನೆರಳಿನಲ್ಲಿ ಕಪ್ಪೆ ಕುಳಿತಿದ್ದರೆ, ಕಪ್ಪೆ ಪಾಪ ಇದು ಅಲ್ಲಿ ಏಕೊ ಕುಳಿತುಕೊಂಡಿತಪ್ಪಾ ಅಂತ.

ಶ್ರೀ ಕೆ.ಎಸ್. ಈಶ್ವರಪ್ಪ : 1983ನೇ ಇಸವಿಯಲ್ಲಿ ತಾವು ಸರ್ಕಾರ ನಡೆಸುವಾಗ ನಾವು ಇವರಿಗೆ ಬಹಳ ಒಳ್ಳೆಯ ಜನರಾಗಿದ್ದೆವು. ಅರರು ನಮ್ಮ ಪಕ್ಷದ ಬೆಂಬಲ ಇಲ್ಲದಿದ್ದರೆ ಇವರು ಯಾರೂ ಇವೋತ್ತು ಇಲ್ಲಿ ಕೂರುವಂಥ ಸ್ಥಿತಿಯಲ್ಲಿರುತ್ತಿರಲಿಲ್ಲ. ಪಟೇಲ್‌ರೇ, ಅವೋತ್ತು ನಮ್ಮನ್ನು ಉದ್ದೇಶಿಸಿ. ನಿಮ್ಮಂಥ ಒಳ್ಳೆಯ ಜನುರು ಇಲ್ಲವೆಂದು ಹೇಳಿ ಇವೋತ್ತು ನಾಗರಹಾವು ಕಪ್ಪೆ ಎಂದು ಹೇಳುತ್ತಿದ್ದೀರಿ. ಅಲ್ಲವೇ ನೆನಪಿರಲಿ.

ಅಧ್ಯಕ್ಷರು : ರಾಮಕೃಷ್ಣರವರೇ, ತಾವು ರೂಲಿಂಗ್ ಕೇಳಿದಿರಿ, ನಾನು ಹೇಳುವಷ್ಟರಲ್ಲಿ ತಾವು ಮತ್ತೆ ಅತ್ತ ಕಡೆ ತಮ್ಮ ಕಿವಿ ತಿರುಗಿಸಿಕೊಂಡಿರಿ. ತಾವು ಸಭಾನಾಯಕರನ್ನು ಉದ್ದೇಶಿಸಿ ಹೇಳುವಾಗ ತಮಗೆ chivalry ಕೂಡ ಇಲ್ಲವೆಂದು ಹೇಳಿದಿರಿ. The ruling of teh Chair is.. ದಯಾಮಾಡಿ ಕೇಳಿ, ಮತ್ತೆ ನೀವು ಮಾತನಾಡುತ್ತಿದ್ದೀರಲ್ಲಾ, ತಾವು ರೂಲಿಂಗ್ ಕೇಳಿದ್ದೀರಿ ತಾನೇ?

ಶ್ರೀ ವೈ. ರಾಮಕೃಷ್ಣ : ಪರಿಶಿಷ್ಟ ಜಾತಿಗೆ ಸೇರಿರುವ ಒಬ್ಬ ಹೆಣ್ಣುಗಳು ಇವೊತ್ತು ಒಂದು ರಾಜ್ಯದ ಮುಖ್ಯ ಮಂತ್ರಿಯಾಗಿರುವ ಬಗ್ಗೆ ಸಂತೋಷಪಡುವುದನ್ನು ಬಿಟ್ಟು ನನಗೆ ಅದರಿಂದ ಸಮಾಧಾನವಾಗಿಲ್ಲ, ವೆಂದರೆ? ಏಕೆ? ಆಗಿರುವುದು ತಪ್ಪೇ ಸ್ವಾಮಿ?

ಶ್ರೀ ಆರ್.ಎಲ್. ಜಾಲಪ್ಪ : 1980 ನೇ ಇಸವಿಯಲ್ಲಿ ಬಾಬು ಜಗಜೀವನರಾಂ ಅವರನ್ನು ಪ್ರಧಾನ ಮಂತ್ರಿ ಮಾಡಬೇಕೆಂದು ಜನತಾದಳ ಹೇಳಿಕೊಂಡು ಹೊರಾಟಾಗ ತಾವೆಲ್ಲಾ ಏನು ಮಾಡಿದಿರಿ?

ಶ್ರೀ ವೈ. ರಾಮಕೃಷ್ಣ : ಇದರ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತು ನಾವೆಲ್ಲಾ ಮಾಡಿರುವುದು. ಯಾರೆಂದು ಅವರಿಗೆ ಗೊತ್ತಿರುವುದರಿಂದ ಅವರನ್ನು ಕೇಳಿ. ಅವರಿಗೆ ಗೊತ್ತಿದೆಯೆಂದು ಹೇಳುತ್ತಿದ್ದಾರೆ.ನಾವು ಡೇಪ್ಯೂಟಿ ಪ್ರೈಮ್ ಮಿನಿಸ್ಟರ್ ಮಾಡಿದೆವು, ಅವರೇ ಮುಂದಿನ ಪ್ರೈಮ್ ಮಿನಿಸ್ಟರ್ ಎಂದು ನಾವೇನೂ ಡಿಕ್ಲೇರ್ ಮಾಡಲಿಲ್ಲ.

ಅಧ್ಯಕ್ಷರು : ಸನ್ಮಾನ್ಯ ಸಭಾ-ನಾಯಕರೇ, ತಾವು ತಮ್ಮ ಮಾತನ್ನು ಮುಂದುವರೆಸಿ.

ಶ್ರೀ ಹೆಚ್.ಡಿ. ದೇವೇಗೌಡ ; ನನಗೆ ಮಾತನಾಡಲು ತಾವು ಅನುಮತಿ ಕೊಟ್ಟರೆ ಮಾತನಾಡುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ಹಿರಿಯ ಸದಸ್ಯರಾದ ವೈ .ರಾಮಕೃಷ್ಣರವರು ರೂಲಿಂಗ್‌ಗೆ ಒತ್ತಾಯಿಸಿದರು. ರೂಲಿಂಗ್ ಕೊಡೋಣವೆಂದರೆ ಅವರು ಕೇಳಲಿಲ್ಲ, ತಾವು (ರಾಮಕೃಷ್ಣ) ಸಭಾ ನಾಯಕರ ಮೇಲೆ ಅಬ್ಜೆಕ್ಟ್ ಮಾಡಿದಿರಿ you are not chivalrous to women

ಎಂದು The Chair has acknowledged that Mr. Y. Ramakrishna is Chivalrous to women .

ಶ್ರೀ Y. RAMAKRISHNA : Definitely , one should be.

ಶ್ರೀ ಜೆ.ಹೆಚ್. ಪಟೇಲ್ : ಅವರ ಕಡೆ ಮೂರು ಜನ ಇದ್ದಾರಲ್ಲಾ, Ramakrishna in BJP what ? Nanjegowda in BJP Jeevaraj Alva in BJP Where?

ಈ ಮೂರು ಬಹಳ ದೊಡ್ಡ ರಹಸ್ಯಗಳು ಇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದೇ ರೀತಿ ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಮತ್ತು ದೇವೇಗೌಡರ ಬಗ್ಗೆಯೂ ಸ್ವಲ್ಪ ಹೇಳಿ ಸ್ವಾಮಿ.ಚುನಾವಣೆಗೆ ಮುಂಚೆ ಈ ಮೂರು ಜನ ಪರಸ್ಪರ ಕೈ ಹಿಡಿದುಕೊಂಡು ಹೊರಟಿದ್ದರಲ್ಲಾ. ಇವೊತ್ತು ಅವರೆಲ್ಲಾ ಎಲ್ಲೆಲ್ಲಿದ್ದಾರೆಂದು ಸ್ವಲ್ಪ ಹೇಳಿ.

ಶ್ರಿ ವೈ. ರಾಮಕೃಷ್ಣ : ನಾವು ಓ ಕಾಂಗ್ರೆಸ್ ಜೊತೆ ಇದ್ದೇವು. ಈಗ ಒಂದೆರಡು ವರ್ಷಗಳಿಂದ.....

ಶ್ರೀ ಹೆಚ್.ಡಿ. ದೇವೇಗೌಡ : ಇವೊತ್ತು ದೇವೇಗೌಡ ಈ ರಾಜ್ಯದಿಂದ ಹೋಗಬೇಕು. ಎನ್ನುವುದಾದರೆ ನನ್ನ ತಕರಾರೇನು ಇಲ್ಲ, ಆದರೆ ಕಳುಹಿಸುವವರು ಯಾರು? ಅವರು ಇಲ್ಲಿಲ್ಲ. ಮೊದಲು ಇಲ್ಲಿರತಕ್ಕ ನನ್ನ ಪಕ್ಷದ ನನ್ನ ಸಹೋದರ, ಸಹೋದ್ಯೋಗಿಗಳು ಕಳುಹಿಸಬೇಕು. ಯಾರು ಕೈಯಲ್ಲಿ ಅಧಿಕಾರ ಕೊಟ್ಟು ನಿರ್ಗಮಿಸಲಿ? ಶೇಕಡ 27 ಬಂದಿರುವವರ ಕೈಯಲ್ಲಿ ಕೊಡಬೇಕೇ? ನಾನು ಅಧಿಕಾರ ಬಿಟ್ಟು ಕೊಟ್ಟರೆ ಯಾರ ಕೈಗೆ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ. ಏಕೆಂದರೆ, ನಿಮಗೆ ರಾಜ್ಯವಾಳುವುದಕ್ಕೆ ಯೋಗ್ಯತೆ ಇಲ್ಲವೆಂದು ನಮ್ಮನ್ನುದ್ದೇಶಿಸಿ ಹೇಳಿದರು. ರಾಜ್ಯ ಆಳಿದ ಅನುಭವ ನಿಮಗೆ (ಬಿಜೆಪಿ) ಇದೆ. ಅಧಿಕಾರದಲ್ಲಿ ನಾವು ಶ್ವಾಶ್ವತವಾಗಿರುವುದಿಲ್ಲವೆಂದು ನೀವು ಹೇಳಿದ್ದುದು ಸರಿ. ಒರಿಸ್ಸಾದಲ್ಲಿ ಬಿಜು ಪಟ್ನಾಯಕ್ ಹೋಗಿ ಜೆ.ಬಿ. ಪಟ್ನಾಯಕ್ ಅಧಿಕಾರಕ್ಕೆ ಈಗ ಬಂದರು. ಆದರೆ ಕರ್ನಾಟಕದಲ್ಲಿ ಇಕ್ಕೊಂದು ಇತಿಹಾಸವಿದೆ. ಯಾರ ಕೈಗೆ ಅಧಿಕಾರ ಕೊಟ್ಟು ಹೋಗಬೇಕೆಂದು ಯೋಚನೆ ಮಾಡಬೇಕಷ್ಟೆ. ನಾನು ಅಧಿಕಾರ ಬಿಟ್ಟು ಹೋಗುವಾಗ ನಾನು ಕೊಟ್ಟು ಹೋಗುತ್ತೇನೆ. ಸ್ವಾಮಿ. ಮಹಾತ್ಮಗಾಂಧಿಯನ್ನು ಮಾಯಾವತಿ ಮನಸ್ಸಿಗೆ ಬಂದಂತೆ ಬಯ್ದುದರೆಂಬ ಕಾರಣಕ್ಕಾಗಿ ಚಳುವಳಿ ಮಾಡಿದವರು ಬಿ.ಜಾ.ಪ.ದವರು. ನನಗೆ ಹೆಣ್ಣುಮಕ್ಕಳ ಬಗ್ಗೆ ಬಹಳ ಆಕ್ರೋಶ ಇದೆಯೊಂದು ತಾವು ವಾದ ಮಾಡಿದಿರಿ. ಅಂದು ಮಹಾತ್ಮಗಾಂಧಿ ಬಗ್ಗೆ ಅತ್ಯಂತ ಅಮಿತವಾದ ಪ್ರೇಮ ಹುಟ್ಟಿ ಅಂದು ಲಕ್ನೋದಲ್ಲಿ ಮಾಯಾವತಿಯವರ ವಿರುದ್ಧ ಚಳುವಳಿ ಮಾಡಿದಂಥ ಭಾರತೀಯ ಜನತಾ ಪಕ್ಷದವರೇ ಇವೊತ್ತು ಮಾಯಾವತಿ ನೇತೃತ್ವದ ಮಂತ್ರಿಮಂಡಲಕ್ಕೆ ಬೆಂಬಲ ಕೊಟ್ಟು ಅವರನ್ನು ಮುಖ್ಯಮಂತ್ರಿಯಾನ್ನಾಗಿ ಮಾಡಿದಿರಿ. ಕಾರಣ, 1996ರ ಲೋಕಸಭೆಯಲ್ಲಿ you want to gain the sympathy to scheduld castes. ಇದು ಹೇಗಾಗುತ್ತದೆಂದರೆ. ದೀಪದ ಬೆಳಕಿನಲ್ಲಿ ಬೆಂಕಿ ಹುಳು ಬಂದು ತನ್ನ ರೆಕ್ಕೆ ಸುಟ್ಟಿ ಕೊಳ್ಳುತ್ತದಲ್ಲಾ ಹಾಗಾಗಿದೆ ಪರಿಸ್ಥಿತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಲಾದರೂ ತಾವು ನಗಬಹುದಲ್ಲಾ,

ಶ್ರೀ ಹೆಚ್.ಡಿ. ದೇವೇಗೌಡ : ನಾನು ನಗುವುದಿಲ್ಲ. ನಗುವ ಪ್ರಶ್ನೆಯೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವೊತ್ತು ತಮ್ಮನ್ನು ಭೇಟಿಯಾಗಲು ಯಾವುದೇ ವಿದೇಶಿ ನಿಯೋಗ ಬರಲಿಲ್ಲವೇ?

(ನಗು)

ಅಧ್ಯಕ್ಷರು : ನೀವು ಅದನ್ನು ಅರ್ಧದಲ್ಲಿ ಹೇಳಿ ನಿಲ್ಲಿಸಿಬಿಟ್ಟಿರಿ. ವಿದೇಶಿ ನಿಯೋಗದಲ್ಲಿ ಯಾರಿದ್ದರೆ ಅವರು ನಗುತ್ತಾರೆಂದು ಹೇಳಿ.

(ನಗು)

ಬಂಗಾರಪ್ಪನವರಿಗೆ ಇದು ಗೊತ್ತಿರುವುದರಿಂದ ಅವರು ಜಾಸ್ತಿ ನಗುತ್ತಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಅಧ್ಯಕ್ಷರೇ, ನಮ್ಮ ಸರ್ಕಾರ ರಚನೆಯಾದ ಎಂಟು ತಿಂಗಳಿಗೇ ನಮ್ಮ ಮೇಲೆ ಅಷ್ಟೊಂದು ಶಬ್ದ ಪ್ರಯೋಗ ಮಾಡಿದರು. ಅದಕ್ಕೋಸ್ಕರ ನಾವು ಸ್ವಲ್ಪವಾದರೂ ಹೇಳಬೇಕಲ್ಲಾ, ಏಕೆಂದರೆ ಜನರು ನಮಗೆ ಓಟು ಕೊಟ್ಟು ಕಳುಹಿಸಿದ್ದಾರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಅಪೇಕ್ಷೆ ಏನಿತ್ತು? ಒಂಬತ್ತು ತಿಂಗಳು ಆದ ನಂತರ ಹೇಳಬೇಕಾಗಿತ್ತು ಎಂದೇ? ಪರವಾಗಿಲ್ಲ.

(ನಗು)

ಶ್ರೀ ಹೆಚ್.ಡಿ. ದೇವೇಗೌಡ : ಖರ್ಗೆಯವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೂರು ತಿಂಗಳಿಗೇ ಹೇಳಿದ್ದಾರೆ. ನಾನು ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದೇನೆ. ಮುಲಯಾಂಸಿಂಗ್ ಯಾದವ್ ವಿರುದ್ಧ ನಿಂತಂಥವರು ಯಾರು? ಏನೆಂದು ಮ್ಯಾಗಜಿನ್‌ನಲ್ಲಿ ವರದಿಯಾಗಿರುವುದನ್ನು ಓದಬೇಕು. ಅವರ ಹೆಸರನ್ನು ಎತ್ತಿಕೊಂಡು ನಾನು ಏಕೆ ಚರ್ಚಿಸಲಿ? ಎಷ್ಟು ಕ್ರಿಮಿನಲ್ ಕೇಸ್‌ಗಳಿವೆಯೆಂದು ತೆಗೆದುಕೊಂಡು ಓದಲಿ. ಅಭ್ಯರ್ಥಿ ನಿಂತಿದ್ದರು, ಆಗ ಕಲ್ಯಾಣ್ ಸಿಂಗ್ ಮುಖ್ಯಮಂತ್ರಿಯಾಗಿದ್ದರು ಮಲಯಾಂ ಸಿಂಗ್ ಯಾದವ್ ಇನ್ನೂ ಅಧಿಕಾರಕ್ಕೆ ಬಂದಿರಲಿಲ್ಲ. ಒಬ್ಬ ವ್ಯಕ್ತಿಯ ಕೇಸ್ ಹಿಸ್ಟರಿ ಎಷ್ಟಿದೆಯೆಂದು ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. The candidate who contested against Sri Mulayam Singh Yadav, how many criminal cases were there against him? While the BJP is talking of value-based politics now.

ನಾವು ಈಗ ಇಲ್ಲಿ ಅಧಿಕಾರಕ್ಕೆ ಬಂದಿದ್ದೇವೆ. ಗೂಂಡಾಗಳು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದಾರೆ. ಎಂದಿದ್ದಾರೆ. ಪರವಾಗಿಲ್ಲ, ಬಿಹಾರ, ಉತ್ತರ ಪ್ರದೇಶ ಮುಂತಾದ ಯಾವ್ಯಾವ ರಾಜ್ಯದಲ್ಲಿ ಏನೇನು ವಿದ್ಯಮಾನಗಳು ನಡೆದಿದೆಯೆನ್ನುವುದಲ್ಲಿ ಬಗ್ಗೆ ಪತ್ರಿಕೆಗಳವರು ಬರೆದಿರುವ ಮಾಹಿತಿಗಳೆಲ್ಲವನ್ನೂ ನಾನು ತರಿಸಿಕೊಂಡಿದ್ದೇನೆ. ನಿನ್ನೆ ದಿವಸ ಈ ಮಾಹಿತಿಗಳನ್ನು ತರಿಸಿಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನ ಮಾಡಿದೆ.

ಅಸೆಂಬ್ಲಿ ಎಂದರೆ ಸುಬ್ಬರಾಯನ ಕೆರೆ ಭಾಷಣ ಅಲ್ಲ. ನಾವು 35 ವರ್ಷ ವೈಕುಂಠ ಬಾಳಿಗರಂಥವರ ಕೈ ಕೆಳಗೆ ನುರಿತಂಥವರು. ಈಗ ನಮ್ಮ ಸುದೈವ ನೀವು ಇಲ್ಲಿ ಕುಳಿತಿದ್ದೀರಿ. ಇಲ್ಲಿ 35 ವರ್ಷಗಳು ನಾವು ಎಂಥೆಂಥ ನಾಯಕರನ್ನು ನೋಡಿದ್ದೇವೆ. ಮಾನ್ಯ ಗೋಪಾಲಗೌಡರು ಅಂಥವರು ಸದನದಲ್ಲಿ ಕುಳಿತಿದ್ದರು. ಅವರಿಂದ ನಾವು ಸ್ವಲ್ಪ ಟ್ರೈನ್ ಅಪ್ ಆದೆವು. ಇದು ಅಷ್ಟು ಸುಲಭವಲ್ಲ. ಸುಬ್ಬರಾಯನ ಕೆರೆ ಭಾಷಣ ಮಾಡಿ ಹೊರಟು ಹೋಗಬಹುದು.

ಶ್ರೀ ಹೆಚ್.ಎನ್. ನಂಜೇಗೌಡ : 1996ರ ಲೋಕಸಭೆ ಚುನಾವಣೆಯಾದ ಮೇಲೆ ಅವರಿಗೆ ಕೊಡುತ್ತೇವೆ · ಮೂಲಾಯ

ಶ್ರೀ ಹೆಚ್.ಡಿ. ದೇವೇಗೌಡ : ನಾನು ವಿರೋಧಪಕ್ಷದ ನಾಯಕರಿಗೆ ಉತ್ತರ ಬರೆಯುವುದಿಲ್ಲವೆಂದು ಹೇಳುತ್ತಾರೆ. ನಾನು ಡಾಕ್ಯುಮೆಂಟ್ಸ್ ತರಿಸಿದ್ದೇನೆ. ಉತ್ತರ ಬರೆದಂತಹ ಕಾಪೀಸ್ ಇದೆ. ನನ್ನ ಕಾಗದಕ್ಕೆ ಉತ್ತರ ಬರೆಯುವುದಿಲ್ಲವೆಂದು

ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಸಾರ್ವಜನಿಕವಾಗಿ ಬರೆಯುತ್ತಾರೆ. ನಾವು ಬರೆದ ಪತ್ರಿಯೊಂದು ಕಾಪಿಯೂ ಇದೆ. ಈ ಸದನದಲ್ಲಿ ನನ್ನ ಮೇಲೆ ಚಾಲೆಂಜ್ ಮಾಡಿದರು. ವಿರೋಧಪಕ್ಷದ ನಾಯಕರು ಬರೆದ ಪತ್ರಕ್ಕೆ ಒಂದಕ್ಕೂ ಉತ್ತರವಿಲ್ಲವೆಂದು......ನೀವು ನಿಮ್ಮ ಮನೆಯ ವಿಷಯಕ್ಕೆ ಪತ್ರ ಬರೆದ್ದೀರಿ ಎಂದು ನಾನು ಹೇಳಲಿಲ್ಲ. ದಯಮಾಡಿ ವಿರೋಧಪಕ್ಷದ ನಾಯಕರ ಬಗ್ಗೆ ನಾನು ಗೌರವವಾಗಿ ಮಾತನಾಡುತ್ತಿದ್ದೇನೆ. ನೀವು ನಿನ್ನೆ ಏನು ಹೇಳಿದ್ದೀರಿ. ನಾನು ಬರೆದಂತಹ ಪತ್ರಕ್ಕೆ ಉತ್ತರವಿಲ್ಲವೆಂದು ಹೇಳಿದ್ದಿರಿ, All these letters. ಅದು ಯಾವುದೇ ಇರಬಹುದು ರಾಜ್ಯದ ನಾನಾ ಕಡೆ ತಾವು ಪ್ರವಾಸ ಮಾಡಬಹುದು, ಕಾಗದ ಬರಬಹುದು, ನನಗೆ ನೀವು ರಿಪ್ಲೈ ಬರಲಿಲ್ಲವೆಂದು ಹೇಳಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನನ್ನ ಆಫೀಸ್‌ಗೆ ಕಳುಹಿಸದೇ ಅಲ್ಲೇ ಇಟ್ಟುಕೊಂಡು ಬಿಟ್ಟಿದ್ದೀರಾ? ವೆರಿಫೈ ಮಾಡಿಸಿ..

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಫಸ್ಟ್ ಅವರ ಆಫೀಸ್‌ಗೆ ಕಳುಹಿಸಿ ಅಲ್ಲಿ ಸಹಿ ತೆಗೆದುಕೊಂಡಿದ್ದು ಇಲ್ಲಿ ಇದೆ. ನನ್ನ ಆಫೀಸ್‌ನಲ್ಲಿ ನನ್ನ ಜಾತಿಯವರು ಇದ್ದಾರೆಂದು ಹೇಳಿದರು. ತರಿಸಿದೆ ನೋಡೋಣ ಎಂದು ಆಫೀಸ್‌ನಲ್ಲೂ ಒಬ್ಬಿಬ್ಬರು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತರಿಸಿದ್ದರೆ ಹೇಳಿ. ನಮ್ಮ ಆಫೀಸ್‌ನಲ್ಲಿ ಏನೇನು ಇದೆ ಎಂದು ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಇಲ್ಲಿದೆ ಹೇಳುತ್ತೇನೆ. ಈಗ ನಿಮ್ಮ ಪಿ.ಎ. ನಿಮ್ಮ ಸಮಾಜದವರು ಅಲ್ಲವೇ? ಜಾತಿ ಮೇಲೆ ಮಾತನಾಡುವುದು ಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಸ್ಲಿಂ ವಿರೋಧಿಯಲ್ಲವೇ ನಮ್ಮ ಪಕ್ಷ?

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹಾಗೆ ಹೇಳಿಲ್ಲವಲ್ಲಾ.

(ಗೊಂದಲ)

ಡಾ|| ಜೀವರಾಜ ಆಳ್ವಾ : ಸಭಾನಾಯಕರಲ್ಲಿ ಒಂದು ಪ್ರಾರ್ಥನೆ. ಮಾನ್ಯ ಮುಖ್ಯ ಮಂತ್ರಿಯವರ ಅನುಭವ ಬಹಳ ಜಾಸ್ತಿ. ತಾವು ಸಭಾನಾಯಕರು ಆಗಿದ್ದೀರಿ. ಮಾನ್ಯ ವಿರೋಧ ಪಐದ ನಾಯಕರ ಹತ್ತಿರ ಈ ವಿಚಾರದಲ್ಲಿ ಬಹಳ ಕೆಳಗೆ ಹೋಗುತ್ತಿದ್ದೀರಾ ಎಂದು ಅನಿಸುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಕೆಳಗೆ ಹೋಗುತ್ತಾ ಇಲ್ಲ. ನಾವು ಒಂದು ಕಾಗದವನ್ನು ಬರೆಯುವಕ ಸೌಜನ್ಯತೆ ಇಲ್ಲವೆಂದು ಹೇಳಿದಾಗ ಈ ನಾಡಿನ ಜನರನ್ನು ಒಬ್ಬ ಅದಿಕೃತ ಮಾನ್ಯತೆ ಪಡೆದಂತಹ ವಿರೋಧಪಕ್ಷಧ ನಾಯಕರು ಬರೆದಂತಹ ಪತ್ರಕ್ಕೆ ಉತ್ತರ ಕೊಡುವುದಿಲ್ಲವೆಂದು ಹೇಳಿದಾಗ ಆದರ ಪರಿಣಾಮವೇನಾಗುತ್ತದೆ. ಹೇಳುವುದು ಆಗ್ರಯಾಗಬಹುದು, ಬಿಡಬಹುದು. Atleast he has no courtesy to reply to a letter sent by the Opposition Leader.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಬರೆದ ಮೂರು ಲೇಟರ್ ಯಾವ ದಿನಾಂಕದಲ್ಲಿ ಬರೆದಿದ್ದೇನೆ ಅದನ್ನು ಅಧ್ಯಕ್ಷರಿಗೆ ಕಳುಹಿಸಿಕೊಡುತ್ತೇನೆ. ಅದಕ್ಕೆ ಉತ್ತರ ಕಳುಹಿಸಿದ್ದಾರೋ?

ಶ್ರೀ ಹೆಚ್.ಡಿ. ದೇವೇಗೌಡ : ಕಳುಹಿಸಿ ಯಾರು ಬೇಡವೆನ್ನುತ್ತಾರೆ. ನಾನು ಇಲ್ಲಿ ಬರೆದಿರುವುದೆಲ್ಲಾ ಕಳುಹಿಸಿದ್ದೇನೆ. ಅವರೆ ಪೋರ್ಜರಿ ಮಾಡಿದರೆ ನಾನು ಏನು ಮಾಡಲಿ?. ಈ ಪಿ.ಎ. ಸಹಿ ಪೋರ್ಜರಿ ಮಾಡಿರಬಹುದು. ಇನ್ನು ವರ್ಗದ ವಿಷಯ. ಈ ವರ್ಗದಲ್ಲಿ ತುಂಬಾ ದುಡ್ಡನ್ನು ಮಾಡಿದ್ದೇವೆ. ತುಂಬಾ ಹಣವನ್ನು ಮಾಡಿದ್ದೇವೆಂದರು ಸರಿ ಒಪ್ಪಿಕೊಳ್ಳುತ್ತೇನೆ. ಈ ವರ್ಗದ ವಿಷಯ ಇವತ್ತಿನದಲ್ಲ. ನಾನು ಈ ಸದನದಲ್ಲಿ 29-30 ವರ್ಷಗಳು ಕುಳಿತು ಕೆಲಸ ಮಾಡಿದ್ದೇನೆ. ಎಲ್ಲರೂ ಎಂ.ಎಲ್.ಎ.ಗಳ ಹತ್ತಿರ ಬರುತ್ತಾರೆ. ನಿಮ್ಮ ಹತ್ತಿರವೂ ಬರುತ್ತಾರೆ. ನಮ್ಮ ಹತ್ತಿರವೂ ಬರುತ್ತಾರೆ. ನಾನು ಅಲ್ಲಿ ಕುಳಿತಾಗಲೂ ಬರುತ್ತಿದ್ದರು. ನಾನು ಇಲ್ಲವೆಂದು ಏನು ಹೇಳುವುದಿಲ್ಲ, ಆ ಗರ್ವದ ಮಾತು ನಾನು ಆಡುವುದಿಲ್ಲ, ಆರು ತಪ್ಪು ಎಂದು ವಾದ ಮಾಡುವುದಿಲ್ಲ, ನಾನಾ ರೀತಿಯ ಒತ್ತಡಗಳು ಬರುತ್ತವೆ. ಅವರ ಮತಕ್ಷೇತ್ರದ ಮತದಾರರು ಬರುತ್ತಾರೆ. ಆ ಸಮಾಜದವರು ಬರುತ್ತಾರೆ. ಒಂದು ಸಾರಿ ಟ್ರಾನ್ಸ್‌ಫರ್ ಮಾಡಿದರೆ ಆ ಸಮಾಜದವರು ಎಲ್ಲರೂ ವಾಪಸ್ಸು ಬರುತ್ತಾರೆ. ಬಂದು ಹೇಗೆ ಮಾಡಿದ್ದೀರಿ, ಹೇಗೆ ಮಾಡಿದಿರಿ ಎನ್ನುತ್ತಾರೆ. ಒಬ್ಬ ಕಂಡೆಕ್ಟರ್ ಸಸ್ಪೆಂಡ್ ಮಾಡಿದಾಗ 1964ರಲ್ಲಿ ನನ್ನಿ ಹತ್ತಿರ ನನ್ನ ಊರಿನ 15 ಜನರು ಬಂದರು. ಅವನನ್ನು ರೆಸ್ಟೋರ್ ಮಾಡಿಸಿ ಅಂದರು. ಜನತಂತ್ರ ವ್ಯವಸ್ಥೆಯಲ್ಲಿ ಯಾರಿಗೂ ದೋಷ ಹೊರಸುತ್ತೇವೆಂದು ತಿಳಿದುಕೊಳ್ಳಬೇಡಿ. ಆದರೆ ಇದಕ್ಕೆ ಇವತ್ತು ನಾವು ಶಾಸ್ತ್ರೀಯವಾದಂತಹ ನಿರ್ಣಯ ಮಾಡುವುದಕ್ಕೆ ಸಾಧ್ಯ ಇದೆ ಎಂದು ನನಗಂತೂ ಗೊತ್ತಿಲ್ಲ. ಇದುವರೆಗೂ ಯಾರೂ ಮಾಡಲಿಲ್ಲ, ಯಾರ ಕೈಯಲ್ಲೂ ಆಗಲಿಲ್ಲ. ಮಾನ್ಯ ಗುಂಡುರಾವ್‌ರವರ ಕಾಲದಲ್ಲಿ ಆಯಿತು ಎಂದು ಹೇಳಿದರೆ, ಗುಂಡುರಾವ್‌ರವರು ಎಂ.ಎಲ್.ಎ.ಗಳಿಗೆ ಹೆದರಬೇಕಾಗಿರಲಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಎಂ.ಎಲ್.ಎ.ಗಳು ಹೆದರುತ್ತಾರೆಂದರೆ ನಾವು ನಂಬುವುದಿಲ್ಲ.

ಶ್ರೀ ವೈ. ರಾಮಕೃಷ್ಣ : ಇವರಿಗೆ ಹೈ ಕಮಾಂಡ್ ಇಲ್ಲ ನೋಡಿ, ಅವರಿಗೆ ಹೈ ಕಮಾಂಡ್ ಇತ್ತು.

ಶ್ರೀ ಹೆಚ್.ಡಿ. ದೇವೇಗೌಡ : ಶ್ರೀಮತಿ ಇಂದಿರಾಗಾಂಧಿಯವರ ಆಶೀರ್ವಾದದ ಬಲದಿಂದ ಅವತ್ತು ಗುಂಡುರಾವ್ ಬಳಿ ಮಾತನಾಡುವುದಕ್ಕೆ ರಾಜಕಾರಣಿಗಳು ಹೆದರುತ್ತಿದ್ದರು. ಇವತ್ತು ಅವರ ಬಗ್ಗೆ ಗೌರವವಿದೆ. ಇವತ್ತಿನ ಸನ್ನಿವೇಶದಲ್ಲಿ ಅವತ್ತಿನ ಗುಂಡುರಾವ್‌ರಂಥವರು ಇವತ್ತು ಇದ್ದಿದ್ದರೂ ಆಗುತ್ತಾ ಇರಲಿಲ್ಲ. ಅವತ್ತಿನ ಸನ್ನಿವೇಶ ಬೇರೆ, ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಏನಾಗಿದೆ ಎಂಬುದು ನಮಗೆ ಗೊತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರ ಆಶೀರ್ವಾದವಿತ್ತು. ಎಂ.ಎಲ್.ಎ.ಗಳು ಮುಂದೆ ಟಿಕೇಟ್ ಸಿಗದಿದ್ದರೆ ಏನು ಗತಿಯೆಂದು ಎಲ್ಲರೂ ಬಾಯಿ ಮುಚ್ಚಿಕೊಂಡು ಸುಮ್ಮನೆ ಇದ್ದರು. ಆದರೆ ಮಾನ್ಯ ವೀರಪ್ಪಮೊಯಿಲಿಯವರ ಕಾಲದಲ್ಲಿ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಹಾಗೆ ಮಾಡುವುದಕ್ಕೆ ಆಯಿತೇ? ನಾನು ಮಾಡುವುದಕ್ಕೆ ಆಗುತ್ತದೆಯೇ? ಒಂದು ಸ್ಕೂಲ್ ಟೀಚರ್ಸ್ ಪವರ್ ಅನ್ನು ನಾವು ಡೆಲಿಗೇಟ್ ಮಾಡಿದರೆ, ಮಾನ್ಯ ಖರ್ಗೆಯವರೇ ನಿಮ್ಮ ಜಿಲ್ಲೆಯ ಬಗ್ಗೆ ನೀವೇ ಪತ್ರ ಬರೆದಿರಿ. ನಮ್ಮ ಮೇಲೆ ಬೇಕಾದರೆ ಅಪಾದನೆ ಮಾಡಿಕೊಳ್ಳಲಿ ಆದರೆ ಮಾನ್ಯ ಗೋವಿಂದೆ ಗೌಡರ ಮೇಲೆ ಯಾರಾದರೂ ಅಪಾದನೆ ಮಾಡುತ್ತೀರಿ ಎಂದರೆ ನಾವು ರಾಜಕಾರಣದಲ್ಲಿ ಇರುವ ಅವಶ್ಯಕತೆ ಇಲ್ಲ. ಅವರ ಪವರ್ಸ್ ಡೆಲಿಗೇಟ್ ಮಾಡಿದರೆ, ಬೆಳಗಾಂನಲ್ಲಿ ಸಾವಿರ ಚಿಲ್ಲರೆ ಟ್ರಾನ್ಸ್‌ಫರ್ ಮಾಡಿದ್ದಾರೆ ಒಬ್ಬ ಡಿಡಿಪಿಐ, ನಾವು ಈ ಸ್ಕೂಲ್ ಟೀಚರ್ಸ್ ಅನ್ನು ಇಟ್ಟು ಕೊಳ್ಳಬಾರದು ಸಹವಾಸ ಬೇಡ ಎಂದು ಹೇಳಿದೆ. ಅಲ್ಲದೆ ಕ್ಲಾಸ್ 3-4 ನೌಕರರ ವರ್ಗಾವಣೆ ಸಹವಾಸ ಬೇಡಿ, ಈ ಬಗ್ಗೆ ಪವರ್ಸ್ ಡಿಲಿಕೇಟ್

ಮಾಡಿಬಿಡಿ ಎಂದು ನಾನು ಹೇಳಿದೆ. ಚಿತ್ರದುರ್ಗದಲ್ಲಿ ಡಿ ಡಿ ಪಿ ಐ ಸಸ್‌ಪೆಂಡ್ ಮಾಡಿರಬೇಕು. ಗುಲ್ಬಾರ್ಗಾದಲ್ಲಿ 600-700 ಟ್ರಾನ್ಸ್‌ಫರ್ಸ್ ಆಗಿದೆ.

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ : 750 ಟ್ರಾನ್ಸ್‌ಫರ್ ಮಾಡಿ ಕೆ.ಇ.ಟಿ.ಗೆ ಹೋಗಿ ರೂಲ್ಸ್ ವೈಯಲೇಟ್ ಆಗಿದೆ ಎಂದು ಹೇಳಿ ಕೊನೆಯಲ್ಲಿ ಟ್ರಾನ್ಸ್‌ಫರ್ ಆಗಿದೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನೇ ಹೇಳಿದೆನಲ್ಲಾ ನಾವು ಇದನ್ನು ಇಟ್ಟುಕೊಳ್ಳುವುದು ಬೇಡ ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೆವು. ಅದರ ಪರಿಣಾಮ ಎಲ್ಲಿಗೆ ಹೋಯಿತು ಎಂದರೆ ನಾವು ತೆಗೆದುಕೊಂಡ ಒಂದು ನಿರ್ಣಯ ಹೇಗೆ ದುರುಪಯೋಗವಾಯಿತು ಎನ್ನುವುದಕ್ಕೆ ನಾನು ಹೇಳಿದೆ. ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಟ್ರಾನ್ಸ್‌ಫರ್ ಆಗಿದೆ ಎಂಬುದನ್ನು ಕೊಡುವುದಕ್ಕೆ ನಾನು ಹೋಗುವುದಿಲ್ಲ, ಏಕೆಂದರೆ ಅದನ್ನು ಕೊಡುವಂತಹ ಅವಶ್ಯಕತೆಯಿಲ್ಲ ಮತ್ತು ~~ಅದನ್ನ ಕೊಟ್ಟು ಸಮರ್ಥನೆ ಮಾಡಿಕೊಳ್ಳಬೇಕೆಂದು ಕೂಡ ನನಗೆ ಇಚ್ಛೆ ಇಲ್ಲ.~~ ಮಾನ್ಯ ಯಡಿಯೂರಪ್ಪನವರೇ ತಮಗೆ ವಿನಂತಿ ಮಾಡುತ್ತೇನೆ. ನಿಮಗೆ ಸಾಕಷ್ಟು ಇವತ್ತು ಅವಕಾಶವಿದೆ. ಈ ಹಿಂದೆ ಐದಾರು ಚಾರ್ಜ್ ಮಾಡಿದ್ದೀರಿ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದರಿಂದ ಏನಾಯಿತು ಈ ಸರ್ಕಾರದ ಮೇಲೆ ಟ್ರಾನ್ಸ್‌ಫರ್ ಬಗ್ಗೆ ಮಾತನಾಡುವುದಕ್ಕೆ ಮಾತನಾಡಿದ್ದೀರಿ. ಇವತ್ತು 225 ಜನರು ಇಲ್ಲಿದ್ದಾರೆ, 75 ಜನರು ಅಲ್ಲಿದ್ದಾರೆ. 25-30 ಜನರು ಯಾರೂ ಏನೂ ನಮಗೆ ಹೇಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊನೆಯ ಪಕ್ಷ ನಾನು ಏನು ಹೇಳಿದ್ದೇನೆ. ಅದನ್ನು ಹೇಳಿಬಿಡಿ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದ್ದು ಇಲ್ಲಿ ಇಟ್ಟಿದ್ದೇನೆ. ನೀವು ಕೇಳಿದಿರಿ ಎಂದು ನಾನು ಕೇಳುವುದಿಲ್ಲ ಅದನ್ನು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನಾದರೂ ಈ ಒಂದು ಪ್ರೈಮರಿ ಶಾಲೆ ಮೇಸ್ಟರ್ ಇಂಥವರು ನನಗೆ ಬೇಕು, ದಯವಿಟ್ಟು ಆಮೇಲೆ ಕಳುಹಿಸಿಕೊಡಿ ನಾನು ಕಾಗದ ಬರೆದಿಲ್ಲಲ ಎಂದು ಅಲ್ಲ, ನಾನು ಹೇಳಿದ್ದುದು ಯಾವುದು ಆಗಿದೆ ಎಂಬ ಬಗ್ಗೆ ನಮಗೆ ಒಂದು ಪಟ್ಟಿಯನ್ನು ಕೊಟ್ಟು ಬಿಡಿ. ನಾನು ಒಂದೂ ಅರ್ಜಿ ಬರೆದಿಲ್ಲ ಎಂದು ಹೇಳುವುದಿಲ್ಲ, ಒಂದೂ ಕಾಲದವನ್ನು ಕಳುಹಿಸಿಲ್ಲ ಎಂದು ಹೇಳುವುದಿಲ್ಲ, ನನ್ನ ಉದ್ದೇಶ ಏನು ಅಂದರೆ..........

ಶ್ರೀ ಹೆಚ್.ಡಿ. ದೇವೇಗೌಡ : ನೋಡಿ ನಾನು ಮೊದಲೇ ಹೇಳಿದೆ. ನೀವು ದಯಮಾಡಿ ಹೋಗಬೇಡಿ, ನಿಮ್ಮ ಹತ್ತಿರಕ್ಕೂ ಬರುತ್ತಾರೆ, ನಮ್ಮ ಹತ್ತಿರಕ್ಕೂ ಬರುತ್ತಾರೆ, ನೀವು ದಯಮಾಡಿ ಹೋಗಬೇಡಿ, ನಾನು ಅಷ್ಟಕ್ಕೂ ದಾಖಲೆಗಳನ್ನು ಇಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಲ್ಲಿ ಈ ಕಡೆ ಯಾವುದೇ ಶಾಸಕರ ಬಗ್ಗೆ ಕೇಳುತ್ತಿಲ್ಲ. ನಾನು ಕಳುಹಿಸಿದ್ದು ಕೆಲಸ ಆಗಿರುವಂತಹ ಒಂದು ಪಟ್ಟಿಯನ್ನು ಕೊಡಿ. ನೀವು ಹೇಳಿದ್ದು ರೇಕಾರ್ಡ್‌ಗೆ ಹೋಗಲಿ ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಇದನ್ನು ನಾನಾಗಿಯೇ ಹೇಳಿಲಿಕ್ಕೆ ಹೋಗಲಿಲ್ಲ, ಅವರಾಗಿಯೇ ಕೇಳಿದಮೇಲೆ ನಾನೇನು ಮಾಡಲಿ ನಂಜೇಗೌಡರೆ. ದೇವೇಗೌಡರು ಯಾವ ಸಂದರ್ಭದಲ್ಲಿ ಏನು ಬೇಕಾದರೂ ಉಪಯೋಗಿಸಿಬಿಡುತ್ತೀರಿ ಎಂದು ಹೇಳುತ್ತೀರಿ. ಏನು ಹೇಳಬೇಕು ನೀವೇ ಹೇಳಿ. ನೀವು ಕೇಳಿದರೆ ಕೊಡಬೇಕೊ ಬೇಡವೊ,

ನಾನು ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ, ಹೇಳಬೇಕೆಂದರೆ ನನಗೇನೂ ಅಭ್ಯಂತರವಿಲ್ಲ ಎಲ್ಲಾ ದಾಖಲೆಗಳನ್ನು ನಾನು ತೆಗೆದುಕೊಂಡು ಬಂದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಒಂದು ಎಕ್ಸಿಕ್ಯೂಟಿವ್ ಇಂಜಿನಿಯರ್ ಒಂದು ಸೂಪರಿಂಟೆಂಡೆಂಟ್ ಇಂಜಿನಿಯರ್, ಒಬ್ಬ ಐ.ಎ.ಎಸ್. ಆಫೀಸರ್ ಒಬ್ಬ ಐ.ಪಿ.ಎಸ್. ಆಫೀಸರ್ಸ್ ಬಗ್ಗೆ ಅಲ್ಲ ಯಾವುದೋ ಪ್ರೈಮರಿ ಸ್ಕೂಲ್ ಮಾಸ್ಟರ್ ವಿಷಯದಲ್ಲಿ ಪತ್ರ ಬರೆದಿರಬಹುದು.

ಶ್ರೀ ಹೆಚ್.ಡಿ. ದೇವೇಗೌಡ : ಯಾವುದೇ ದಾಸಯ್ಯನ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದೊಬ್ಬನದಾರೂ ಹೇಳಿ. ಅದು ಜನಕ್ಕೆ ಗೊತ್ತಾಗಲಿ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಇದನ್ನು ಇಲ್ಲಿಗೇ ನಿಲ್ಲಿಸುತ್ತೇನೆ ನಂಜೇಗೌಡರೇ. I don't want to go into it.

ನೀವು ನಾವು ನಲವತ್ತು ಲಕ್ಷ ತೆಗೆದುಕೊಂಡೆವು ಎಂದು ಹೇಳಿ. ಐವತ್ತು ಲಕ್ಷ ತೆಗೆದುಕೊಂಡೆವು ಎಂದು ಹೇಳಿ, ಒಂದ ಕೋಟಿ ಮಾಡಿದ ಎಂದ ಹೇಳಿ I am prepared to tolerate it. ದಯಮಾಡಿ ಒಂದೇ ಒಂದು ಮಾತನ್ನು ಹೇಳುತ್ತೇನೆ. I only beg of you. ಇವತ್ತು ಈ ದೇಶದಲ್ಲಿ ನೀವು ನಾವೆಲ್ಲರೂ ನಿನ್ನೆ ಮೊನ್ನೆ ಅಸೆಂಬ್ಲಿಗೆ ಬಂದವರಲ್ಲ, ಎಂ.ಎಲ್.ಎ.ಗಳಿಗೆ ಯಾವ ಯಾವ ತರಹದ ಹಿಂಸೆಗಳಾಗುತ್ತದೆ, ಬರೀ ಹಣಕ್ಕೋಸ್ಕರವೇ ಅಲ್ಲ, ನಾನು ನಿಮಗೆ ನೇರವಾಗಿ ಹೇಳುತ್ತೇನೆ, ಇನು ನಿಮ್ಮಂತಹನವರು ಒಂದು 25 ಜನ 30 ಜನ ಸಿಕ್ಕಬಹುದು. ಅದನ್ನು ರೆಸಿಸ್ಟ್ ಮಾಡುವುದಕ್ಕೆ ಕೆಲವರಿಗೆ ಅಗುವುದಿಲ್ಲ. ಸ್ವಾಮಿ ಹೇಳಿರುತ್ತಾರೆ ನಾವು ಎಷ್ಟು ಇಕ್ಕಟ್ಟಿಗೆ ಸಿಕ್ಕಿರುತ್ತೇವೆ ಎಂದು ಹೇಳಿದರೆ ಬಂದು ಪ್ರಾಣ ತೆಗೆಯುತ್ತಾರೆ. ಅದರಿಂದ ಎಲ್ಲಾ ಕಡೆ ಆಗುತ್ತಿದೆ. ಆದ್ದರಿಂದ ದಯಮಾಡಿ there are various other serious matters, ನೀವು ನಮ್ಮನ್ನು ಹಂತಹಂತವಾಗಿ ಇವತ್ತು ಈ ಸರ್ಕಾರ ಮಾಡತಕ್ಕಂಥ ತಪ್ಪನ್ನು ಬಯಲು ಗೆಳೆಯುವುದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಅದು ಬಿಟ್ಟು 52 ಸಾವಿರ ಮಾಡಿದ್ದಾರೆ, 83-84ರಲ್ಲಿ, ಅಥವಾ 92-93ರಲ್ಲಿ ಆ ಅಂಕಿ ಅಂಶಗಳನ್ನೆಲ್ಲಾ ಕೊಟ್ಟು ಸಮರ್ಥನೆ ಮಾಡಬೇಕಾದ ಅಗತ್ಯವಿಲ್ಲ. ನಾನು ಎಲ್ಲಾ ಫಿಗರ್ಸ್ ಇಟ್ಟು ಕೊಂಡೇ ಮಾತನಾಡುತ್ತಿದ್ದೇನೆ, ಅದಿಲ್ಲದೆ ನಾನು ಮಾತನಾಡುವುದಕ್ಕೆ ಏನೂ ಹೋಗುವುದಿಲ್ಲ, ಆದರೆ ನಾನೇ ಒಂದು ಸಾರಿ ಹೇಳಿದೆ ಟ್ರಾನ್ಸ್‌ಫರ್ಸ್ ವಿಚಾರದಲ್ಲಿ ನಮ್ಮ ಮನಸ್ಸಿನಲ್ಲಿ ಏನೊಂದು ಸುಧಾರಣೆ ತರಬೇಕೆಂದಿದ್ದವೋ I am unable to succeed ಎಂದು ನಾನು ಸಾರ್ವತ್ರಿಕವಾಗಿ ಹೇಳಿದೆ.

ನಾನು ಯಾರನ್ನೂ ಕುರಿತು ಹೇಳಲಿಲ್ಲ. ಯಾವಾಗ ನಾವು ಸ್ಕೂಲ್ ಟೀಚರ್ಸ್‌ಗಳಿಗೂ ವರ್ಗಾವಣೆ ಮಾಡಬಾರದೆಂದು ಪ್ರಯತ್ನ ಮಾಡಿದೆವೋ ಯಾವಾಗ ಡಿ.ಡಿ.ಪಿ.ಐ.ಗಳು ಮತ್ತು ಕೆಳಹಂತದ ಅಧಿಕಾರಿಗಳು ದಾರಿ ತಪ್ಪಿದರೂ ಕೆಲವರನ್ನೂ ಸಸ್ಪೆಂಟ್ ಮಾಡಿದೆವು. ಆಗಲೇ ಹೇಳಿದೆ. we have done something mistake, ಇದನ್ನು ನಾನು ಸಾರ್ವತ್ರಿಕವಾಗಿ ಹೇಳಿದೆ. ಅವತ್ತು ಯಾರೂ ನನಗೆ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಮತ್ತೊಬ್ಬರು ಹೇಳಿದ್ದಾರೆ ಹೀಗೆ ಯಾರ ಹೆಸರನ್ನೂ ನಾನು ಹೇಳಲಿಲ್ಲ. I take the odium..... ಆದರೆ ನಾನು ಇಷ್ಟೇ ಹೇಳುತ್ತೇನೆ. ಟ್ರಾನ್ಸ್‌ಫರ್ಸ್‌ನಿಂದ ನೀವು ನಾವು ಯಾರೋ ದುಡ್ಡು ತೆಗೆದುಕೊಂಟು ಮಾಡುತ್ತೇವೆಂದು ಯಾರೂ ಹೇಳುವಂಥ ಮಟ್ಟಕ್ಕೆ ನಾವು ಹೋಗಿಲ್ಲ. There are some lapses,. ಸಿಸ್ಟಂನಲ್ಲ, ಸಮಾಜದಲ್ಲಿ

ಇವತ್ತು ಇರತಕ್ಕಂಥ ಪರಿಸ್ಥಿತಿ ಆಗಿದೆ. ಯಾರೇ ಅಧಿಕಾರವನ್ನು ನಡೆಸಲಿ. ಜೈನ್ ಎಳೆಯುವವರನ್ನು ನಾನೇನಾದರೂ ಸೃಷ್ಟಿ ಮಾಡಿದನೇ,ನಾನು ಬಂದಾಲ ಜೊತೆಯಲ್ಲಿ ಕರೆದುಕೊಂಡು ಬಂದೆನಾ? ಉತ್ತರಪ್ರದೇಶಕ್ಕೆ ಹೋದರೆ ಬಿಹಾರ್‌ಗೆ ಹೋದರೆ ಯಾವ ಪಕ್ಷ ರಾಜ್ಯವಾಳಿದರೇನು. ಒಂದೊಂದು ರಾಜ್ಯದ ಪರಿಸ್ಥಿತಿ ಒಂದೊಂದು ರೀತಿ ಇದೆ. ಆದರೆ ಕರ್ನಾಟಕದಲ್ಲಿ ಇಷ್ಟೆಲ್ಲಾ ಪರಿಸ್ಥಿತಿ ಹದಗೆಟ್ಟಿದ್ದರೂ ಇನ್ನು ನಮ್ಮ ಆಡಳಿತ ಯಂತ್ರ ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡಾಗ ಇದು ಉತ್ತಮವಾದ ರೀತಿಯಲ್ಲಿದೆ ಎನ್ನುವುದನ್ನು ನಾವು ನೀವೆಲ್ಲರೂ ಒಪ್ಪಿಕೊಳ್ಳಲೇಬೇಕು. ನಮ್ಮಲ್ಲಿ ದೋಷ ಇರಬಹುದು, I don't say 100% pure in administration. There are some lapses. ನೀವು ನಾಳೆ ಬಂದು ಇಲ್ಲಿ ಕುಳಿತುಕೊಂಡು ಆಡಳಿತ ನಡೆಸಿದರೂ ಅದೇ ಆಗುವುದು.ಹಂಡ್ರೆಡ್ ಪರ್ಸೆಂಟ್ ನಾವು ತರುತ್ತೇವೆ. ಎನ್ನುವುದಕ್ಕಾಗುವುದಿಲ್ಲ. ನಾವು ಒಂದು 70-75 ಪರ್ಸೆಂಟ್ ಆದರೂ ಇಂಪ್ರೂವ್‌ಮೆಂಟ್ ತಂದರೆ ನಮಗೆ ಸಮಾಧಾನ ಆಗುತ್ತದೆ. ಆ ದಿಕ್ಕಿನಲ್ಲಿ ನಾವು ನೀವು ಎಲ್ಲಾ ಸೇರಿ ಪ್ರಯತ್ನ ಮಾಡೋಣ. ನಾನು ತಪ್ಪು ಮಾಡಿದರೆ ಕೇಳುವುದಕ್ಕೆ ನಿಮಗೆ ಅಧಿಕಾರ ಇದೆ. ನಾನು ಇಷ್ಟೇ ಹೇಳುತ್ತೇನೆ. ಈಗ ವಿರೋಧಪಕ್ಷದ ನಾಯಕರಿಗಿರುವ ಅಧಿಕಾರವನ್ನು ಬಳಸಿದ್ದಾರೆ ಸಂತೋಷ. ನಾವು ಎಚ್ಚರಿಕೆಯಿಂದ ಕೆಲಸ ಮಾಡಲಿಕ್ಕೆ ಕೆಲವು ಮಾತುಗಳನ್ನು ಹೇಳಿದ್ದೀರಿ, ಹೇಳಬೇಕಾಗುತ್ತದೆಮ. ಆನೆಗೆ ಅಂಕುಶ ಇರಬೇಕು. ನಾನು ಬೇಡ ಎಂದು ಹೇಳುವುದಿಲ್ಲ. ಆನೆಗೆ ಅಂಕುಶ ಇಲ್ಲದಿದ್ದರೆ ದಾರಿತಪ್ಪಿ ಹೋಗುತ್ತದೆ. ನೀವು ಹೇಳಿದಂತಹ ಮಾತುಗಳಿಂದ ನಾನು ಬೇಸರ ಪಟ್ಟುಕೊಳ್ಳುವುದಿಲ್ಲ. ಆದರೆ ಒಂದೇ ಒಂದು ಹೇಳುತ್ತೇನೆ, ನಮ್ಮ ಸರ್ಕಾರದ ದೋಷ. ತಪ್ಪು ಕಂಡುಹಿಡಿಯುವುದಕ್ಕೆ ನಿಮಗೆ ನಾನಾ ರೀತಿಯ ಅವಕಾಶ ಇದೆ. ಆ ದಿಕ್ಕಿನಲ್ಲಿ ಸರ್ಕಾರದ ದೋಷಗಳನ್ನು ಎಣಿಸಲಿಕ್ಕೆ ನೀವು ಅವಿಶ್ವಾಸ ನಿರ್ಣಯವನ್ನಾದರೂ ಮಂಡನೆ ಮಾಡಿ, ಬೇರೆ ಬೇರೆ ಕಾನೂನಿನ ಚೌಕಟ್ಟಿನಲ್ಲಾದರೂ ಮಾಡಿ. ನಾನು ಆರು ವರ್ಷಗಳ ಕಾಲ ವಿರೋಧಪಕ್ಷದ ನಾಯಕನಾಗಿದ್ದೆ. ಆ ಜೈಲಿನಲ್ಲಿದ್ದ ಪಿರಿಯಡ್ ಅನ್ನು ಬಿಟ್ಟರೆ. ನಾನು ಒಂದು ದಿನ ಅವಿಶ್ವಾಸ ನಿರ್ಣಯ ತರಲಿಲ್ಲ. ಮಾನ್ಯ ದೇವರಾಜ ಅರಸುರವರ ಆಡಳಿತಾವಧಿಯಲ್ಲಿ ಮಾನ್ಯ ಮೊಯಿಲಿಯವರು ಕೈಗಾರಿಕಾ ರಾಜ್ಯ ಮಂತ್ರಿಯಾಗಿದ್ದಿರೆಂದು ಕಾಣಿಸಿತ್ತದೆ.

I was the Leader of Opposition at that time. Not a single day..

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಎಂದೂ ವಿರೋಧವನ್ನು ಮಾಡಲಿಲ್ಲ ಎಂದು ಪತ್ರಿಕೆಗಳಲ್ಲಿ ಬರುತ್ತಿತ್ತು ಚಿಕ್ಕವನಿದ್ದಾಗ ನಾನು ಓದುತ್ತಿದ್ದೆ. ನಿಜವಾಗಿಯೂ ನಿಮಗೂ ಮಾನ್ಯ ದೇವರಾಜ ಅರಸುರವರಿಗೂ ಆತ್ಮೀಯ ಸಂಬಂಧಗಳಿತ್ತು ಎಂಬುದನ್ನು ಪತ್ರಿಕೆಗಳಲ್ಲಿ [illegible]ದಿದ್ದೆ....

ಶ್ರೀ ಹೆಚ್.ಡಿ. ದೇವೇಗೌಡ : ಗ್ರೋವರ್ ಕಮಿಷನನ್ನು ನೇಮಕ ಮಾಡಿ ಪ್ರೂವ್ ಮಾಡಿದಂಥ ಇತಿಹಾಸ ದೇವೇಗೌಡ ಮಾಡಿದ್ದಾನೆ. ಅದರ ಬಗ್ಗೆ ಚರ್ಚೆ ಬೇಡ ಆ ಇತಿಹಾಸವನ್ನು ನೀವು ಕಾಣಲಿಕ್ಕಾಗುವುದಿಲ್ಲ, ಇದನ್ನೆಲ್ಲಾ ನೀವು ಮಾತನಾಡುವುದಕ್ಕೆ ಹೋಗಬೇಡಿ, ಬಹಳ ಕಷ್ಟ ಇದೆ. ಆ ಲೆವೆಲ್‌ಗೆ ಡಿಬೇಟ್ ಹೋಗಬೇಕಾಗಿದ್ದರೆ ಇನ್ನೂ ಬಹಳ ಕಷ್ಟ ಇದೆ. ಆ ಚರ್ಚೆಯನ್ನೆಲ್ಲಾ ತೆಗೆದು ಓದಿ. ಆ ವೆಪನ್‌ಅನ್ನು ಯೂಸ್ ಮಾಡಬೇಕಾಗಿದ್ದರೆ ಅದು ಬ್ರಹ್ಮಾಸ್ತ್ರ ಇದ್ದ ಹಾಗ. ಆ ವೆಪನನ್ನು ಅಷ್ಟು ಹಗುರವಾದಿ ಯೂಸ್ ಮಾಡಬಾರದು. ಅದನ್ನು ಯೂಸ್ ಮಾಡತಕ್ಕಂಥ ಕಾಲ ಕೊನೆಯ ಅಸ್ತ್ರ ಅದು. There are various other means..... ಅಂದಿರಿ, ಸಂತೋಷ ಅದು ನಿಮ್ಮ ಖುಷಿ ನನ್ನದೇನೂ ಅದಕ್ಕೆ ಅಡ್ಡಿಯಿಲ್ಲ whom I? whom I to ask? It is your pororgative right. ಇಷ್ಟನ್ನು ಹೇಳಿ ನಾನು ಈ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟಂಥ ಎಲ್ಲಾ ಮಾನ್ಯ

ಸದಸ್ಯರುಗಳಿಗೂ ನಾನು ಅಭಿನಂದಿಸುತ್ತೇನೆ. ಆಮೇಲೆ ನಾನು ಇವತ್ತು ಏನಾದರೂ ಕೆಲವು ಮಾತುಗಳನ್ನಾಡಿದ್ದರೆ ಡಿಬೇಟ್ ಸ್ವಲ್ಪ ಹೆಲ್ತಿ ಡಿಬೇಟಾಗಿ ಮುಂದು ವರಿಯಲಿ ಎನ್ನುವ ದೃಷ್ಟಿಯಿಂದ ಮಾತನಾಡಿದ್ದೇನೆ. ನನಗೆ ಇಷ್ಟು ಮಾತನಾಡಲಿಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಸನ್ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ನನ್ನ ಇಲಾಖೆಯ ಬಗ್ಗೆ ಕೆಲವು ಮಾತನಾಡಿದ್ದಾರೆ. ಬೇರೆ ವಿಷಯದಲ್ಲಿ ನಾನೇನು ಅವರ ಮೇಲೆ ಏನನ್ನು ಹೇಳುವುದಕ್ಕೋಗುವುದಿಲ್ಲ. ಆದರೆ ಒಂದು ಮಾತ್ರ ನಾನು ಕ್ಲಾರಿಫೈ ಮಾಡಬೇಕಾಗುತ್ತದೆ. ಏಕೆಂದರೆ ನನುಗೂ ಒಂದು ಕ್ಷೇತ್ರ ಇದೆ. ನನಗೂ ಜನ ಮತವನ್ನು ನೀಡಿ ಕಳುಹಿಸಿದ್ದಾರೆ. ನಾನು ಅಲ್ಲಿ ಮಾನಮರ್ಯಾದೆಯಿಂದ ಓಡಾಡಬೇಕಾಗುತ್ತದೆ. ಒಂದು ಮಾತು ಅವರು ಹೇಳಿದ್ದಾರೆ. ಸಬ್‌ರಿಜಿಸ್ಟ್ರಾರ್ ಟ್ರಾನ್ಸ್‌ಫರ್‌ಗಳಲ್ಲಿ 30-40 ಲಕ್ಷ ಕೈ ಬದಲಾವಣೆ ಆಗಿದೆ. ಕೊಟ್ಟು ಮಾಡಿಸಿಕೊಂಡಿದ್ದಾರೆ.......ಎಂದು ಹೇಳಿದಿರಿ. ಸ್ವಾಮಿ ಇದ ನನಗೆ ದೇವಾಲಯ, ನನಗೆ, ಜಾಯಿಂಟ್ ಸೆಕ್ರೆಟರಿಗೆ ನನ್ನ ಪಿ.ಎಸ್.ಗೆ. ಅಲ್ಲದೆ .... ಅಲ್ಲ ಜನ ಮಾತನಾಡಿಕೊಳ್ಳುತ್ತಾರೆ ಎಂದು ನಿಮ್ಮ ಬಗ್ಗೆ ನಾನು ಏನೇನೋ ಹೇಳಿ ಬಿಟ್ಟರೆ ......ರೇಕಾರ್ಡ್ ಇದೆ, I have got this record with me....... ರೇಕಾರ್ಡ್ ಇಲ್ಲಿ ಇಟ್ಟುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮಗೆ ಫೋನ್ ಮಾಡಿ ಹೇಳಿದ್ದೇನೆ, ಜನ ಹೀಗೆ ಮಾತನಾಡುತ್ತಿದ್ದಾರೆ ಎಂತಲೂ ಹೇಳಿದ್ದೇನೆ. ದಯಮಾಡಿ ತೆಗೆದುನೋಡಿ.

ಶ್ರೀ ಆಹ್.ಎಲ್. ಜಾಲಪ್ಪ : ಇವರು ನನಗೆ ಒಂದ ದಿವಸ ಫೋನ್ ಮಾಡಿದ್ದರು ಬೇರೆ ಯಾವುದೋ ಒಂದ ಸಂದರ್ಭದಲ್ಲಿ ಮಾತನಾಡುವಾಗ ನಾನು ಏನು ಕೇಳಿದೆ ಏನು ಸ್ವಾಮಿ,ನಮ್ಮ ಮೇಲೆ ಅವಿಶ್ವಾಸ ನಿರ್ಣಯ ತರುತ್ತಿದ್ದೀರಿರಲ್ಲಾ ಏನು ಎಂದೆ. ನಿಮ್ಮ ಬಗ್ಗೆ ಏನೂ ಇಲ್ಲ ಅಂದರು. / ಹಾಗೆಯೇ ಕ್ಯಾಷುಯಲ್ ಆಗಿ ಹೇಳಿದರು 30-40 ಲಕ್ಷ ರೂಪಾಯಿ ಈ ಟ್ರಾನ್ಸ್‌ಫರ್‌ರೊಳಗೆ ತೆಗೆದುಕೊಂಡಿದ್ದಾರೆ. ಅದು ನಿಮಗೆ ಗೊತ್ತಿದೆಯೋ ಇಲ್ಲವೋ ಎಂದು ಹೇಳಿದರು ನಾನು ಹೇಳಿದೆ ಯಡಿಯೂರಪ್ಪನವರೇ ಇದೆಲ್ಲವನ್ನು ಮಾಡಿದ್ದು ನಮ್ಮ ಗೆಸ್ಟ್ ಹೌಸಿನಲ್ಲಿ, ನಾನು ನಮ್ಮ ಜಾಯಿಂಟ್ ಸೆಕಟ್ರೆಟರಿ, ನಮ್ಮ ಪಿ.ಎಸ್. ಮೂವರು ವಿನಹ ಬೇರೆ ಯಾರಿಗೂ ಗೊತ್ತಿಲ್ಲ. ರಾತ್ರಿ ಹತ್ತು ಗಂಟೆಗೆ ಅನೌನ್ಸ್ ಮಾಡಿದ್ದೇವೆ. ಇದೆಲ್ಲಾ ಸುಮ್ಮನೇ ಕಾಗೆ ಗುಬ್ಬಚ್ಚಿ ಕಥೆ ಎಂದು ನಾನು ಹೇಳಿದೆ. ನಿಮಗೆ ಅಲ್ಲಿ ಸಮಾಧಾನ ಆಗಲಿಲ್ಲ, ಅದರೂ ಇಲ್ಲಿ ತೆಗೆದುಕೊಂಡು ಬಂದು ನಮ್ಮ ಮರ್ಯಾದೆಯನ್ನು ಇಲ್ಲಿ ನೀವು ಕಳೆದಿದ್ದೀರಿ. ನೀವು ಇಲ್ಲಿ ಏನು ಹೇಳಿದ್ದೀರಿ ಸಬ್‌ರಿಜಿಸ್ಟ್ರಾರ್ ಆಫೀಸಿಗೆ 30 ರಿಂದ 40 ಲಕ್ಷ, 30 ಸಾವಿರ 40 ಸಾವಿರ ಅಲ್ಲ.. 30 ರಿಂದ 40 ಲಕ್ಷ ಹೀಗೆ ಬದಲಾವಣೆಯಾಗಿದೆ ಎಂದು ಹೇಳಿದಿರಿ. ಸ್ವಾಮಿ, ಆ ತರಹ ಮಾಡಬೇಕಾಗಿದ್ದಿದ್ದರೆ ಇಷ್ಟೆಲ್ಲಾ ನಾವು ಕಷ್ಟಪಟ್ಟು ಇಷ್ಟೆಲ್ಲಾ ಕೆಟ್ಟ ಹೆಸರು ತೆಗೆದುಕೊಳ್ಳಬೇಕಾದ್ದು ಅನಾವಶ್ಯಕವಾಗಿತ್ತು.

ನಾನು ಕೆ.ಎ.ಎಶ್. ಆಫೀಸರ್‌ಗಳನ್ನು ತಂದು ನೇಮಿಸಿರುವುದಕ್ಕೆ ಕೆ.ಎ.ಟಿ.ಯವರು ಇವತ್ತು ಸ್ಟೇ ಆರ್ಡರ್ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಪಡಬಾರದ ಹಿಂಸೆ ಪಟ್ಟಿದ್ದೇನೆ. ಸಬ್ ರಿಜಿಸ್ಟ್ರಾರ್‌ಗಳ ಕಛೇರಿಗಳಿಗೂ ಹೋಗಿ ಚೆಕ್ ಮಾಡಿದ್ದೇನೆ. ಇವೆಲ್ಲಾ ನಾನು ಮಾಡಿದ್ದೇನೆ. ನಾನು ಒಳ್ಳೆಯ ಕೆಲಸ ಮಾಡಿದ್ದೇನೆ ಎಂದ ನೀವು ಒಂದೆರೆಡು ಒಳ್ಳೆಯ ಮಾತನಾಡಬಹುದೆಂದು ನಾನು ಅಂದುಕೊಂಡಿದ್ದೆ. you are

most uncharitable and you have dealt with the most unkindest rut. If you are happy, ನಿಮಗೆ ಈ ದಿನ ಸಂತೋಷ ಆಗಿದ್ದರೆ.

jolly well, go ahead, may you be happy.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಬಂಗಾರಪ್ಪನವರು ಮೊಯ್ಲಿಯವರು ಮತ್ತು ಖರ್ಗೆಯವರು ಕೊಜೆಂಟ್ರಿಕ್ಸ್ ಬಗ್ಗೆ ಈ ಸದನಕ್ಕೆ ತಿಳಿಸಬೇಕಾದಂತಹ ಬಹಳಷ್ಟು ವಿಷಯಗಳು ಇವೆ ಎಂದು ಹೇಳಿದರು. ಅವರು ಚಾರ್ಜ್ ಮಾಡಿದ್ದಾರೆ ಎಂಬ ವಿಷಯಕ್ಕಾಗಿ ಮಾತ್ರ ನಾನು ಇಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿಲ್ಲ, ಕೊಜೆಂಟ್ರಿಕ್ಸ್ ಬಗ್ಗೆ ಏನೇನು ಘಟನಾವಳಿಗಳು ನಡೆದವು ಎಂಬ ಬಗ್ಗೆ ಕ್ರೋನೋಲಾಜಿಕಲಿ ವಿವರಗಳನ್ನು ಈ ರಾಜ್ಯದ ಹಿತದೃಷ್ಟಿಯಿಂದ ಸದನದ ಮುಂದಿಡಬೇಕು ಎಂದು ಮಾನ್ಯ ನಂಜೇಗೌಡರು ಹೇಳಿದರು. ಎನ್ರಾನ್‌ಗೂ ಕೊಜೆಂಟ್ರಿಕ್ಸ್‌ಕ್ಕೂ ಏನು ಸಂಬಂಧ, ಈ ಬಗ್ಗೆ ಸರಿಯಾಗಿ ಸ್ಟಡಿ ಮಾಡಿದ್ದೀರಾ ಎಂದೂ ಅವರು ಕೇಳಿದ್ದಾರೆ. ಈ ಬಗ್ಗೆ ತಾವೆಲ್ಲಾ ಇಚ್ಛೆ ಪಟ್ಟರೆ I will deat with the whole subject. ಅಥವಾ ಅದನ್ನೇ ಬೇರೆ ಸಬ್ಜೆಕ್ಟ್ ಆಗಿ ಡೀಲ್ ಮಾಡೋಣ ಎಂದರೂ ನನ್ನದೇನೂ ಅಭ್ಯಂತರ ಇಲ್ಲ, ಮಾನ್ಯ ಬಂಗಾರಪ್ಪನವರೇ Regarding Cogentrix, I had the whole literature right from his days to the latest position. ಮಾನ್ಯ ಅಧ್ಯಕ್ಷರು ಪರ್ಮಿಷನ್ ಕೊಟ್ಟರೆ ಆ ವಿಷಯವನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ ಅಥವಾ ಇನ್ನೊಂದು ದಿವಸ ಚರ್ಚಿಸೋಣ ಎಂದು ನೀವು ಹೇಳಿದರೆ ನನ್ನದೇನೂ ಅಭ್ಯಂತರ ಇಲ್ಲ, ಏನು ಹೇಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದೇ ಮಾತು ಹೇಳುತ್ತೇನೆ. ನಾನು ಎಂದೂ ಸಹ ಅದರ ಬಗ್ಗೆ ಚಾರ್ಜ್ ಮಾಡಿಲ್ಲ, ನಾನೇನು ಹೇಳುತ್ತಿದ್ದೇನೆ ಎಂದರೆ ನೀವು ಗ್ಲೋಬಲ್ ಟೆಂಡರ್ ಕರೆಯಬೇಕಾಗುತ್ತದೆ. ಅಲ್ಲದೇ ನೀವು ಈಗಾಗಲೇ ಬಂದಿರುವ 20-25 ಅರ್ಜಿಗಳನ್ನೂ ವೆರಿಫೈ ಮಾಡಬೇಕಾಗುತ್ತದೆ. ಇವತ್ತು ಕನಿಷ್ಠ ಎಂದರೂ 700-800 ಕೋಟಿ ರೂಪಾಯಿಗಳ ಹಣ ಉಳಿಯುತ್ತದೆ ಎಂಬ ವಿಶ್ವಾಸ ನನಗಿದೆ. ಹೇಗೆ ಉಳಿಯುತ್ತದೆ ಎಂಬುದನ್ನು ನಾನು ಆ ಸಂದರ್ಭ ಬಂದಾಗ ನಿಮಗೆ ತಿಳಿಸುತ್ತೇನೆ. ಅದಕ್ಕೆ ಮುಂಚೆಯೇ ಕೊಜೆಂಟ್ರಿಕ್ಸ್ ಮಂಜೂರು ಆಗಿ ಬಿಡಬೇಕು ಎಂಬ ಬಗ್ಗೆ ಕೂಗಬೇಡಿ ಎಂಬ ಮಾತನ್ನು ನಾನು ವಿನಂತಿ ಮಾಡಿಕೊಂಡಿದ್ದೇನೆ. ಅದನ್ನು ನೀವು ಅಪಾರ್ಥ ಮಾಡಿಕೊಂಡರೆ ನಾನೇನು ಮಾಡುವುದಕ್ಕಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ : ಕೊಜೆಂಟ್ರಿಕ್ಸ್ ಬಗ್ಗೆ ನೀವೇನು ಹೇಳಿದ್ದೀರಿ ಎಂಬುದನ್ನೂ ಕೇಳಿದ್ದೇನೆ, ಬೇರೆಯವರು ಏನು ಹೇಳಿದ್ದಾರೆ ಎಂಬುದನ್ನೂ ಕೂಡ ಕೇಳಿದ್ದೇನೆ. ಆದರೆ ಸದನಕ್ಕೆ ಅದರ ವಸ್ತು ಸ್ಥಿತಿ ಏನು ಎಂಬುದು ಗೊತ್ತಾಗಬೇಕು ಹಾಗೂ ರಾಜ್ಯದ ಜನರಿಗೆ ಗೊತ್ತಾಗಬೇಕು.

ಅಧ್ಯಕ್ಷರು : ಉಪಮುಖ್ಯಮಂತ್ರಿಗಳೇ, ಈಗಾಗಲೇ ಸಮಯ ರಾತ್ರಿ 9.00 ಗಂಟೆಯಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಅದನ್ನು ಬೇರೆ ಸಬ್ಜೆಕ್ಟ್ ಆಗಿ ತೆಗೆದುಕೊಂಡು ಇನ್ನೊಂದು ದಿವಸ ಚರ್ಚೆ ಮಾಡೋಣ. ಈಗ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಈ ಸಂಬಂಧ ಒಪ್ಪಂದಕ್ಕೆ ಸಹಿಯಾಗಿದೆ, ನಾವು ಮುಂದೆ ಹೋಗಿದ್ದೇವೆ, ಅನ್ನುವುದಾದರೆ ನಾವು ಅನೇಕ ವಿಷಯವನ್ನು ಈ ಬಗ್ಗೆ ಹೇಳುವುದಿದೆ. ಇನ್ನೂ ಸಹಿ ಆಗದೇ ಇರುವುದರಿಂದ......

ಶ್ರೀ ಜೆ.ಹೆಚ್. ಪಟೇಲ್ : ಆಗಸ್ಟ್ 30ನೇ ತಾರೀಖಿನಂದು ಇಂಧನ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ನಿಗದಿಪಡಿಸಲಾಗಿದೆ. ಕೊಜೆಂಟ್ರಿಕ್ಸ್ ಬಗ್ಗೆ ಅವತ್ತು ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ.

"ಈ ಸದನ ಶ್ರೀ ಹೆಚ್.ಡಿ. ದೇವೇಗೌಡ ಅವರ ಸಚಿವ ಸಂಪುಟದಲ್ಲಿ ಅವಿಶ್ವಾಸವನ್ನು ವ್ಯಕ್ತಿಪಡಿಸುತ್ತದೆ"

SRI M.C. NANAIAH : I press for division Sir.

ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು : ವಿಭಜಿಸಿದಾಗ ಫಲಿತಾಂಶ ಹೀಗಿದೆ :

ಹೌದು - 38

ಇಲ್ಲ - 96

(ಪ್ರಸ್ತಾವವು ತಿರಸ್ಕರಿಸಲ್ಪಟ್ಟಿತು)

ಅಧ್ಯಕ್ಷರು : ಈ ಸಭೆಯು ಮುಕ್ತಾಯವಾಗಿ ದಿನಾಂಕ 21ನೇ ಅಗಸ್ಟ್ 95ರ ಬೆಳಗ್ಗೆ 11.00 ಗಂಟೆಗೆ ಸೇರುವುದು.

(ಸದನವನ್ನು ರಾತ್ರಿ 9.12ಕ್ಕೆ ಮುಂದೂಡಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)